ಅಜೀಂ ಪ್ರೇಮ್‌ಜಿ ಫೌಂಡೇಷನ್

# *ಜಿಲ್ಲಾ ಕೋವಿಡ್–19 ವಿಶ್ವವ್ಯಾಧಿ ಪ್ರತಿಸ್ಪಂದನಾ ಯೋಜನೆ*

ಏಪ್ರಿಲ್ 1 2020

ಆಧುನಿಕ ಯುಗದಲ್ಲಿ ಮನುಕುಲ ಎದುರಿಸದಿರುವ ಪರಿಸ್ಥಿತಿಯೊಂದು ನಮಗೆ ಮುಖಾಮುಖಿಯಾಗಿದೆ.

ಕೋವಿಡ್-19 ಮಹಾರೋಗವು ಹರಡಿ ಎಲ್ಲ ದೇಶಗಳನ್ನೂ ಹಿಂದೆಂದೂ ಕಾಣದ ಮತ್ತು ಬೃಹತ್ತಾದ ಆರೋಗ್ಯ ಮತ್ತು ಮಾನವತಾ ಬಿಕ್ಕಟ್ಟಿಗೆ ತಳ್ಳಿದೆ.

ಈ ಬಿಕ್ಕಟ್ಟು ಎಷ್ಟು ಕಾಲ ಮುಂದುವರೆಯಬಹುದು ಮತ್ತು ಆರ್ಥಿಕತೆ, ನಾಗರಿಕರ ಜೀವನೋಪಾಯ ಮತ್ತು ಯಾರಿಗೆ ತುಂಬಾ ಅಗತ್ಯವೋ ಅವರಿಗೆ ಪ್ರಾಥಮಿಕ ಆರೋಗ್ಯ ಸೌಲಭ್ಯ ಸಿಗುವಂತಾಗುವುದು ಇವುಗಳಿಗೆಲ್ಲಾ ಎಂಥ ಹೊಡೆತ ಉಂಟಾಗಬಹುದು ಎಂಬುದನ್ನು ಇಂದಿಗೂ ಖಚಿತವಾಗಿ ಹೇಳಲಾಗುತ್ತಿಲ್ಲ.

ಭಾರತದಲ್ಲಿ ನಾವು, ವೈರಾಣು ವೇಗವಾಗಿ ಹರಡದಂತೆ ತಡೆಯಲು ಘೋಷಿಸಲಾಗಿರುವ 21 ದಿನಗಳ ಲಾಕ್‌ಡೌನ್‌ನಲ್ಲಿದ್ದೇವೆ. ಲಾಕ್‌ಡೌನ್‌ನ ಮೊದಲ ಕೆಲವು ದಿನಗಳಲ್ಲೇ ನಮ್ಮ ಸಹ-ನಾಗರಿಕರ ಅನೇಕ ಗುಂಪುಗಳು ಎಂತಹ ದುರ್ಬಲ ಪರಿಸ್ಥಿತಿಯಲ್ಲಿವೆ ಎಂಬುದು ನಿಚ್ಚಳವಾಗಿ ಗೋಚರವಾಗುತ್ತಿದೆ.

ನಮಗಿಂತಲೂ ಉತ್ತಮವಾದ ಸುಸಜ್ಜಿತವಾದ ಆರೋಗ್ಯ ಸೇವಾ ವ್ಯವಸ್ಥೆಗಳನ್ನು ಹೊಂದಿರುವ ದೇಶಗಳೇ ವೈರಾಣುವಿನ ಪ್ರಸಾರದ ವೇಗದಡಿಯಲ್ಲಿ ಕುಸಿದುಬಿದ್ದಿವೆ.

ಜಾಗತಿಕವಾಗಿ ಸಮಾಜೋ-ಆರ್ಥಿಕ ಸವಾಲುಗಳು ಹೊರಹೊಮ್ಮುತ್ತಿವೆ. ಈ ಬಿಕ್ಕಟ್ಟು ಮುಂದುವರೆಯುತ್ತಿದ್ದಂತೆ ಬಡವರು ಮತ್ತು ಅಂಚಿನಲ್ಲಿರುವ ಸಮುದಾಯಗಳು ಎಲ್ಲರಿಗಿಂತಲೂ ಹೆಚ್ಚಾಗಿ ತೊಂದರೆಗೊಳಗಾಗುತ್ತಾರೆ.

ಮಾನವೀಯ ನೆರವು ಮತ್ತು ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ತಳಮಟ್ಟದಲ್ಲಿ ಬೆಂಬಲದ ಅವಶ್ಯಕತೆ ಇದೆ.

ಸಂಬಂಧಪಟ್ಟ ಕ್ಷೇತ್ರಗಳ ತಜ್ಞರನ್ನು ಮತ್ತು ಕೆಲಸದಲ್ಲಿ ತೊಡಗಿರುವವರನ್ನು ಒಂದು ಕಡೆ ತಂದು ನಾಗರಿಕ ಸಮಾಜದ ಸಂಘಟನೆಗಳು ತಮ್ಮ ಕೆಲಸದ ಮೇಲೆ ಸೂಕ್ತವಾಗಿ ಕೇಂದ್ರೀಕರಿಸುವಂತೆ ಮಾಡಲು, ಪ್ರಯತ್ನಗಳನ್ನು ಇನ್ನಷ್ಟು ಹೆಚ್ಚು ಮಾಡಲು ಮತ್ತು ಸಮಾಜದ ಯಾವ ವಿಭಾಗಗಳಿಗೆ ಅವಶ್ಯಕತೆ ಅತಿ ಹೆಚ್ಚಾಗಿ ಇದೆಯೋ ಅವರಿಗೆ ಬೆಂಬಲ ಒದಗಿಸಲು ಈ ದಸ್ತಾವೇಜು (ಕೈಪಿಡಿ) ಪ್ರಯತ್ನಿಸುತ್ತಿದೆ.

ಈ ಕೈಪಿಡಿ ಯಾವ ರೀತಿಯಲ್ಲೂ ಪರಿಪೂರ್ಣವಲ್ಲ ಮತ್ತು ಪರಿಸ್ಥಿತಿ ಬೆಳೆಯುತ್ತಾ ಹೋದಂತೆ ತಾನೇ ವಿಸ್ತರಿಸಿಕೊಳ್ಳುವ ಕಾರ್ಯ ಇದು. ಈ ಕೈಪಿಡಿಯಲ್ಲಿನ ಮಾರ್ಗದರ್ಶಿ ಸೂತ್ರಗಳು ಅವಶ್ಯಕವಾದವು, ಆದರೆ ತನ್ನಷ್ಟಕ್ಕೇ ಸಂಪೂರ್ಣವಲ್ಲ ಮತ್ತು ಇದನ್ನು ಸ್ಥಳೀಯ ಸನ್ನಿವೇಶಕ್ಕೆ ತಕ್ಕಂತೆ ಅಳವಡಿಸಿಕೊಳ್ಳಬೇಕಾಗುತ್ತದೆ. ನಮ್ಮ ಕೆಲಸಕ್ಕೆ ಮಾರ್ಗದರ್ಶಿಯಾಗಲಿ ಎಂದು ಮತ್ತು ಇತರ ನಾಗರಿಕ ಸಮಾಜದ ಸಂಘಟನೆಗಳೊಂದಿಗೆ ಇದನ್ನು ಹಂಚಿಕೊಂಡು ಅವರಿಗೂ ಇದರಿಂದ ಪ್ರಯೋಜನ ಸಿಗಲಿ ಎಂದು ಈ ಕೈಪಿಡಿಯನ್ನು ರಚಿಸಲಾಗಿದೆ.

ಇದರಲ್ಲಿರುವ ಎಲ್ಲ ಮಾಹಿತಿಯೂ ಈ ಕೈಪಿಡಿಯನ್ನು ಬಿಡುಗಡೆಗೊಳಿಸಿದ ಸಮಯದಲ್ಲಿ ಪ್ರಸ್ತುತವಾಗಿರುವಂಥದ್ದು.

ಎಲ್ಲ ಸಂದರ್ಭದಲ್ಲಿಯೂ ಈ ಕೈಪಿಡಿಯಲ್ಲಿರುವ ಮಾರ್ಗದರ್ಶಿ ಸೂತ್ರಗಳಿಗಿಂತಲೂ, ಆಯಾ ಕಾಲದಲ್ಲಿ ಸ್ಥಳೀಯ/ರಾಜ್ಯ/ಕೇಂದ್ರ ಸರ್ಕಾರಗಳು ನೀಡುವ ಸಲಹೆ ಸೂಚನೆಗಳಿಗೇ ಪ್ರಥಮ ಆದ್ಯತೆ ನೀಡತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ, ಅಭಿಪ್ರಾಯಗಳನ್ನು ನೀಡಲಿಕ್ಕಾಗಿ, ಈ ಕೈಪಿಡಿಗೆ ಸಲಹೆ ನೀಡಲಿಕ್ಕಾಗಿ, ಅಥವಾ ನಮ್ಮೊಂದಿಗೆ ಸಹಭಾಗಿಗಳಾಗಿ ಕೆಲಸ ಮಾಡಲು covid19@azimpremjifoundation.org ಅನ್ನು ಸಂಪರ್ಕಿಸಿ.

# ಪರಿವಿಡಿ


1. ಪೀಠಿಕೆ . . . . . . .. .. . . . . . . . . . . . . . . . . . . . . . . . . . . . . . . . . . . . 6
2. ಸಂದರ್ಭ . . . . . . . . . . . . . . . . . . . . . . . . . . . . . . . . . . . . . . . . . . . . . 6
3. ಅಂಗೀಕೃತ ತೀರ್ಮಾನಗಳು . . . . . . . . . . . . . . . . . . . . . . . . . . . . . . . . . . . 7
4. ಮಾರ್ಗದರ್ಶಿ ಸೂತ್ರಗಳು . . . . . . . . . . . . . . . . . . . . . . . . . . . . . . . . . . . . 7
5. ನಾಗರಿಕ ಸಮಾಜದ ಭಾಗವಹಿಸುವಿಕೆ . . . . . . . . . . . . . . . . . . . . . . . . . . . . . . 7
6. ಈ ಕೈಪಿಡಿಯನ್ನು ಉಪಯೋಗಿಸಿಕೊಳ್ಳುವ ರೀತಿ . . . . . . . . . . . . . . . . . . . . . . . . . 8
7. ಪ್ರತಿಸ್ಪಂದನೆಯ ಕ್ಷೇತ್ರಗಳು . . . . . . . . . . . . . . . . . . . . . . . . . . . . . . . . . .8

7.1 ಮಾನವೀಯ ನೆರವು . . . . . . . . . . . . . . . . . . . . . . . . . . . . . . . . . . . . .8

7.1.1 ಆಹಾರ ಮತ್ತು ಆಹಾರೇತರ ಅಗತ್ಯತೆಗಳ ನೆರವು . . . . . . . . . . . . . . . . . . . . .8

7.1.2 ಹಿಂದಿರುಗಿದ ವಲಸಿಗರು . . . . . . . . . . . . . . . . . . . . . . . . . . . . .. . 8

7.1.2.1 ಹಿಂದಿರುಗಿದ ವಲಸಿಗ ಕಾರ್ಮಿಕರ ದತ್ತಾಂಶ ಸಂಚಯ . . . . . . . . . . . . . . . 9

7.1.2.2 ಪಂಚಾಯತಿ–ಆಹಾರ ಲಭ್ಯತೆ ಯೋಜನೆ . . . . . . . . . . . . . . . . . . . . . . 9

7.1.2.3 ಸರ್ಕಾರಿ ಯೋಜನೆಗಳಿಗೆ ಕುಟುಂಬಗಳನ್ನು ಜೋಡಿಸುವುದು . . . . . . . . . . . . 10

7.1.2.4 ಸರ್ಕಾರದ ನೆರವಿಗೆ ವಲಸಿಗ ಕಟ್ಟಡ ಕಾರ್ಮಿಕರನ್ನು ಜೋಡಿಸುವುದು . . . . . . . 10

7.1.2.5 ಮನರೇಗ–ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಜೋಡಣೆ . . . . . . . . . . . 11

7.1.2.6 ಗೌರವದಿಂದ ನಡೆಸಿಕೊಳ್ಳುವುದು . . . . . . . . . . . . . . . . . . . . . . . . 11

7.1.2.7 ಮಾನಸಿಕ–ಸಾಮಾಜಿಕ ಬೆಂಬಲ . . . . . . . . . . . . . . . . . . . . . . . . . 12

7.1.2.8 ಕಟಾವಿಗೆ ಬಂದಿರುವ ಬೆಳೆಗಳ ಸುಗ್ಗಿ . . . . . . . . . . . . . . . . . . . . . . 12

7.1.2.9 ಕೆಲಸಕ್ಕೆ ಹಿಂದಿರುಗಲು ಅನುಕೂಲ ಮಾಡಿಕೊಡುವುದು . . . . . . . . . . . . . . 12

7.1.3 ಮಾರ್ಗಮಧ್ಯದ ವಲಸಿಗರು . . . . . . . . . . . . . . . . . . . . . . . . . . . . . . . 13

7.1.3.1 ಬಿಕ್ಕಟ್ಟು ಮತ್ತು ಸಹಾಯದ ಕೇಂದ್ರಗಳು– ಸ್ಥಳ ಮಾಹಿತಿಯನ್ನು ಹಂಚಿಕೊಳ್ಳುವುದು . . . . . . . .13

7.1.3.2 ಮಾರ್ಗಮಧ್ಯದಲ್ಲಿ ವಲಸಿಗ ಕುಟುಂಬಗಳಿಗೆ ಆಹಾರ ಮತ್ತು ಆಹಾರೇತರ ನೆರವು . . . . . . . . .13

7.1.3.3 ನೊಂದ ಕುಟುಂಬಗಳಿಗೆ ಮಾನಸಿಕ ಸಾಮಾಜಿಕ ಬೆಂಬಲ . . . . . . . . . . . . . . . .13

7.1.4 ನಗರಗಳಲ್ಲಿ ವಲಸಿಗರು . . . . . . . . . . . . . . . . . . . . . . . . . . . . . . . . ..14

7.1.4.1 ವಲಸಿಗ ಕುಟುಂಬಗಳಿಗೆ ಆಹಾರ ಮತ್ತು ಆಹಾರೇತರ ಸಾಮಗ್ರಿಗಳ ಬೆಂಬಲ . . . . . . . . . . 14

7.1.4.2 ವಾಸಕ್ಕೆ ಸುರಕ್ಷಿತವಾದ ಸ್ಥಳ . . . . . . . . . . . . . . . . . . . . . . . . . . . . ..14

7.1.4.3 ಮೂಲಾಧಾರ ಹಣಕಾಸಿನ ಬೆಂಬಲ . . . . . . . . . . . . . . . . . . . . . . . . . . .14

7.1.4.4 ಸಂಕಷ್ಟದಲ್ಲಿರುವ ಮತ್ತು ಅವಶ್ಯಕತೆಯಿರುವವರಿಗೆ ಮಾನಸಿಕ ಸಾಮಾಜಿಕ ಬೆಂಬಲ . . . . . . . . . 15

7.1.5 ನಗರದ ಬಡವರು . . . . . . . . . . . . . . . . . . . . . . . . . . . . . . . . . . . . . . . . .15

7.1.5.1 ಪ್ಯಾಕ್‌ಮಾಡಿದ ದವಸಧಾನ್ಯ . . . . . . . . . . . . . . . . . . . . . . . . . . . . . . .15
7.1.5.2 ಆಹಾರೇತರ ಅವಶ್ಯಕ ವಸ್ತುಗಳು . . . . . . . . . . . . . . . . . . . . . . . . . . . . .16
7.1.5.3 ವೈದ್ಯಕೀಯ ಬೆಂಬಲ . . . . . . . . . . . . . . . . . . . . . . . . . . . . . . . . . . . .16
7.1.5.4 ನಗರದ ಬಡವರಲ್ಲಿ ಜಾಗೃತಿ ಮೂಡಿಸುವುದು . . . . . . . . . . . . . . . . . . . . . . .16
7.1.5.5 ಅನುಮತಿ ಇದ್ದಲ್ಲಿ ಬೇಯಿಸಿದ ಆಹಾರದ ಸೌಲಭ್ಯವನ್ನು ಒದಗಿಸುವುದು . . . . . . . . . . . .17
7.1.5.6 ಸ್ಥಳೀಯ ಮತ್ತು ತತ್‌ಕ್ಷಣದ ಉದ್ಯೋಗಾವಕಾಶಗಳು . . . . . . . . . . . . . . . . . . ..17

7.1.6 ವಿಶಾಲ ಹಳ್ಳಿಪ್ರದೇಶ . . . . . . . . . . . . . . . . . . . . . . . . . . . . . . . . . . . . . . . ..17

7.1.6.1 ಅಶಕ್ತ ಕುಟುಂಬಗಳ ಕುರಿತಾದ ದತ್ತಾಂಶ ಸಂಚಯ . . . . . . . . . . . . . . . . . . . . . .18
7.1.6.2 ಶಾಲೆ/ ಅಂಗನವಾಡಿ ಮೂಲಕ ದವಸಧಾನ್ಯ ವಿತರಣೆ . . . . . . . . . . . . . . . . . . . .. 18
7.1.6.3 ಸಾರ್ವಜನಿಕ ಪಡಿತರ ರೇಷನ್ ವ್ಯವಸ್ಥೆಯ ಮೇಲೆ ಸಮುದಾಯದ ಮೇಲ್ವಿಚಾರಣೆ . . . .. . . . . 19

7.2 ಆರೋಗ್ಯ ವ್ಯವಸ್ಥೆಗಳು . . . . . . . . . . . . . . . . . . . . . . . . . . . . . . . . . . . . . . . . . ..19

7.2.1 ರೋಗ ಪ್ರತಿಬಂಧಕ ಆರೋಗ್ಯ ಸೇವೆಗಳು. . . . . . . . . . . . . . . . . . . . . . . . . . . . . . 19

7.2.1.1 ಆಧಾರಪೂರ್ವಕ ಮಾಹಿತಿಯ ಸೃಷ್ಟಿ ಮತ್ತು ನಿರ್ವಹಣೆ . . . . . . . . . . . . . . . . . 19
7.2.1.2 ಮಾಹಿತಿಯ ವ್ಯಾಪಕ ಪ್ರಚಾರ . . . . . . . . . . . . . . . . . . . . . . . . . . . . ..20
7.2.1.3 ಕೋವಿಡ್-19ರ ವಿರುದ್ಧದ ಪ್ರತಿಬಂಧಕ ಕಾರ್ಯತಂತ್ರಗಳ ಕುರಿತು ತಿಳುವಳಿಕೆ ನೀಡುವುದು 20
7.2.1.4 ಸರ್ಕಾರಿ ಯೋಜನೆಗಳ ಬಗ್ಗೆ ಸಾಮುದಾಯಿಕ ತಿಳುವಳಿಕೆ ಬೆಳೆಸುವುದು . . . . . . . . . . ..21

7.2.2 ಆರೋಗ್ಯ ಸೇವೆಯ ವ್ಯವಸ್ಥೆಯನ್ನು ಬಲಪಡಿಸುವುದು . . . . . . . . . . . . . . . . . . . . . . .21

7.2.2.1 ಸರ್ಕಾರದೊಂದಿಗೆ ಸಹಭಾಗಿತ್ವ . . . . . . . . . . . . . . . . . . . . . . . . . . . . . . . .21
7.2.2.2 ಪ್ರಸಕ್ತ ಆರೋಗ್ಯ ಸೇವೆಯ ಮೂಲ ಸೌಕರ್ಯಗಳ ವಿಶ್ಲೇಷಣೆ . . . . . . . . . . . . . . .. . 22
7.2.2.3 ಎಎನ್‌ಎಮ್, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರ ಸಾಮರ್ಥ್ಯವನ್ನು ಬಲಪಡಿಸುವುದು . . . .22
7.2.2.4 ವೈಯಕ್ತಿಕ ಸುರಕ್ಷಣಾ (ಪಿಪಿಇ) ಸಲಕರಣೆಗಳ ಸರಬರಾಜು . . . . . . . . . . . . . . . . . .23
7.2.2.5 ಪ್ರತ್ಯೇಕವಾಸದ/ ಕ್ವಾರಂಟೈನ್ ಸೌಕರ್ಯವನ್ನು ಒದಗಿಸುವುದು . . . . . . . . . . . . . . .. . . 24
7.2.2.6 ಔಷಧಗಳು ಮತ್ತು ಆರೋಗ್ಯ ಸೇವಾ ಬಳಕೆ ವಸ್ತುಗಳ ಸರಬರಾಜು . . . . . . . . . . . . . . ..24
7.2.2.7 ಆಂಬ್ಯುಲೆನ್ಸ್ ಸೌಲಭ್ಯಗಳು . . . . . . . . . . . . . .. . . . . . . . . . . . . . . . . . .25
7.2.2.8 ವೈದ್ಯರು ಮತ್ತು ವೈದ್ಯಕೀಯ ಸಹಾಯಕ ಸಿಬ್ಬಂದಿಯ ಸಾಮರ್ಥ್ಯ ಬೆಳೆಸುವುದು . . . . . . . . . . ..25
7.2.2.9 ಪರೀಕ್ಷಾ ಕಿಟ್‌ಗಳು . . . . . . . . . . . . . . . . . . . . . . . . . . . . . . . . . . . . . . 25
7.2.2.10 ಹೆಚ್ಚುವರಿ ಆಸ್ಪತ್ರೆ ಹಾಸಿಗೆಗಳನ್ನು ಸಜ್ಜುಗೊಳಿಸುವುದು . . . . . . . . . . . . . . . . . . .26
7.2.2.11 ಆಮ್ಲಜನಕ ಹಾಗೂ ಕೃತಕ ಉಸಿರಾಟದ ಉಪಕರಣ / ವೆಂಟಿಲೇಟರ್ ಹೊಂದಿರುವ ತೀವ್ರ ನಿಗಾ ಘಟಕಗಳ ಸೃಷ್ಟಿ 27
7.2.2.12 ಜಿಲ್ಲಾ ಮಟ್ಟದ ಕೋವಿಡ್-19 ಪ್ರತಿಸ್ಪಂದನಾ ಕೋಶ . . . . . . . . . . . . . . . . . . . 27
7.2.2.13 ಶುದ್ಧ ಕುಡಿಯುವ ನೀರು ಹಾಗೂ ಶೌಚ ಸೌಕರ್ಯಗಳನ್ನು ಒದಗಿಸುವುದು . . . . . . . . . . .27
7.2.2.14 ಜೈವಿಕ ವೈದ್ಯಕೀಯ ತ್ಯಾಜ್ಯದ ನಿರ್ವಹಣೆಯನ್ನು ಹೆಚ್ಚಿಸುವುದು. . . . . . . . . . . .. . . . . ..28
7.2.2.15 ಆರೋಗ್ಯ ವ್ಯವಸ್ಥೆಯೊಳಗೆ ಶೈತ್ಯ ಸರಪಳಿಯ (ಕೋಲ್ಡ್ ಚೈನ್) ಸೌಕರ್ಯಗಳನ್ನು ಹೆಚ್ಚಿಸುವುದು. . . . 28
7.2.2.16 ಆರೋಗ್ಯ ಸೇವೆಗೆ ಸಂಬಂಧಿಸಿದ ಖಾಲಿ ಹುದ್ದೆಗಳ ಭರ್ತಿ. . . . . . . . . . . . . . . . . . . . ..29

8. ಸಾಮಾನ್ಯ ಯೋಜನೆ . . . . . . . . . . . . . . . . . . . . . . . . . . . . . . . . . . . . . . . . . . . .29

8.1 ನಾಗರಿಕ ಸಮಾಜದ ಸಂಭವನೀಯ ಪಾಲುದಾರರ ಪಟ್ಟಿ . . . . . . . . . . . . . . . . . . . . . . . . . 29
8.2 ಸ್ವಯಂಸೇವಕರನ್ನು ಒಟ್ಟುಗೂಡಿಸುವುದು ಮತ್ತು ಅವರ ಸುರಕ್ಷತೆ . . . . . . . . . . . . . . . . . 30
8.3 ಪರಿಣಾಮಗಳನ್ನು ಹೆಚ್ಚಿಸಲು ಸಹಭಾಗಿತ್ವ . . . . . . . . . . . . . . . . . . . . . . . . . . . . . . . 30

9 ಅನುಬಂಧ–ಎ 30

9.1 ಎ1: ಆಶಾ ಕಾರ್ಯಕರ್ತರ ಸಾಮರ್ಥ್ಯ ಅಭಿವೃದ್ಧಿ . . . . . . . . . . . . . . . . . . . . . . . . . ..30
9.2 ಎ2: ಪಿಪಿಇ ಅವಶ್ಯಕತೆಗಳು . . . . . . . . . . . . . . . . . . . . . . . . . . . . . . . . . . . ..31
9.3 ಎ3: ಕ್ವಾರಂಟೈನ್ ಸೌಲಭ್ಯ ಸ್ಥಾಪನೆಗೆ ಮಾರ್ಗದರ್ಶಕ ಸೂತ್ರ . . . . . . . . . . . . . . . . . . . 32
9.4 ಎ4: ಪ್ರತ್ಯೇಕವಾಸ ಸೌಲಭ್ಯ/ವಾರ್ಡ್ ಸ್ಥಾಪನೆಗೆ ಮಾರ್ಗದರ್ಶಿ ಸೂತ್ರ . . . . . . . . . . . . . . . . .32
9.5 ಎ5: ಶಂಕಿತ ಅಥವಾ ಖಚಿತವಾದ ರೋಗಿಯ ಸಾಗಣೆಗೆ ಮಾರ್ಗದರ್ಶಿ ಸೂತ್ರ . . . . . . . . . . . . . 32
9.6 ಎ6: ವಿವಿಧ ಹಂತಗಳಲ್ಲಿ ರೋಗ ಪರೀಕ್ಷೆ ಪ್ರಯತ್ನಗಳಿಗೆ ಬೆಂಬಲ . . . . . . . . . . . . . . . . . . ..33
9.7 ಎ7: ಜಿಲ್ಲಾ ಕೋವಿಡ್ ಪ್ರತಿಸ್ಪಂದನಾ ಕೋಶಕ್ಕೆ ಸ್ಥಾಪಿತ ಕಾರ್ಯನಿರ್ವಹಣಾ ವಿಧಾನ (ಎಸ್‌ಓಪಿ) . . . . . . . .33
9.8 ಎ8: ಹೆಚ್ಚುವರಿ ಆಸ್ಪತ್ರೆ ಹಾಸಿಗೆಗಳ ಸೃಷ್ಟಿ . . . . . . . . . . . . . . . . . . . . . . . . . . . ..35
9.9 ಎ9: ಹೆಚ್ಚುವರಿ ಗಂಭೀರ ಚಿಕಿತ್ಸಾ ಘಟಕಗಳನ್ನು ಸೃಷ್ಟಿಸುವುದು. . . . . . . . . . . . . . . . . .. 35
9.10 ಎ10: ಮೌಲ್ಯಮಾಪನ ಸಾಧನಕ್ಕೆ ಮಾರ್ಗದರ್ಶನ . . . . . . . . . . . . . . . . . . . . . . . . . 35

10 ಅನುಬಂಧ–ಬಿ . . . . . . . . . . . . . . . . . . . . . . . . . . . . . . . . . . . . . . . . . . . . 35

10.1 ಬಿ1: ಅವಶ್ಯಕ ಆಹಾರಗಳ ಕುರಿತಾದ ಮಾರ್ಗದರ್ಶಿ ಸೂತ್ರ . . . . . . . . . . . . . . . . . . . . . 35
10.2 ಬಿ2: ಆಹಾರೇತರ ಅವಶ್ಯಕ ವಸ್ತುಗಳ ಬಗ್ಗೆ ಮಾರ್ಗದರ್ಶಿ ಸೂತ್ರ . . . . . . . . . . . . . . . . . . .36
10.3 ಬಿ3: ಹಳ್ಳಿಗಳಿಗೆ ಮರಳುತ್ತಿರುವ ವಲಸಿಗ ಕಾರ್ಮಿಕರನ್ನು ಪತ್ತೆ ಹಚ್ಚುವುದು. . . . . . . . . . . . . .. 36
10.4 ಬಿ4: ಕಟ್ಟಡ ಕಾರ್ಮಿಕರಿಗೆ ಪರಿಹಾರಗಳು . . . . . . . . . . . . . . . . . . . . . . . . . . . . . 36
10.5 ಬಿ5: ಸರ್ಕಾರಿ ಕಲ್ಯಾಣ ಯೋಜನೆಗಳನ್ನು ಪಡೆದುಕೊಳ್ಳಲು ಮಾರ್ಗದರ್ಶಿ ಸೂತ್ರಗಳು . . . . . . . . . .. 37
10.6 ಬಿ6: ಸ್ಥಳೀಯ ಹಾಗೂ ತತ್‌ಕ್ಷಣದ ಕೆಲಸದ ಅವಕಾಶಗಳ ಕುರಿತಾದ ಮಾರ್ಗದರ್ಶಿ ಸೂತ್ರಗಳು . . . . . . . . 37

## 1. ಪೀಠಿಕೆ:

ಕೋವಿಡ್-19 ವಿಶ್ವವ್ಯಾಧಿಯನ್ನು ಕುರಿತು ಒಂದು ಸಮಗ್ರವಾದ ಏಕೀಕೃತವಾದ ರೀತಿಯಲ್ಲಿ ನೋಡಬೇಕಾದ ತುರ್ತು ಅವಶ್ಯಕತೆ ಇದೆ. ತಳಮಟ್ಟದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ನಾಗರಿಕ ಸಮಾಜದ ಸಂಘಟನೆಗಳು ನೆರವಾಗಲು ಸಾಧ್ಯವಿರುವ ಕ್ಷೇತ್ರಗಳನ್ನು ಗ್ರಹಿಸಲು ನಾವು ಕಳೆದ ಕೆಲವು ವಾರಗಳಲ್ಲಿ ಅನೇಕ ತಜ್ಞರೊಂದಿಗೆ, ಕ್ರಿಯಾಶೀಲರಾಗಿರುವವರೊಂದಿಗೆ ಮತ್ತು ಚಿಂತಕರೊಂದಿಗೆ ವಿವರವಾದ ಸಮಾಲೋಚನೆಯಲ್ಲಿದ್ದೇವೆ.

ನಾಗರಿಕ ಸಮಾಜದ ಸಂಘಟನೆಗಳು ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಲು, ಅವರಿಗೆ ಮಾರ್ಗದರ್ಶನ ನೀಡಲು ಒಂದು ಚೌಕಟ್ಟಾಗಿ ಈ ಕೈಪಿಡಿಯನ್ನು ರಚಿಸಲಾಗಿದೆ. ಈ ಕೈಪಿಡಿಯು ಬದಲಾಗುತ್ತಾ ಹೋಗುವ ಪರಿಸ್ಥಿತಿಯನ್ನು ಮತ್ತು ಕಾರ್ಯಕ್ಷೇತ್ರದಿಂದ ಬರುವ ಪ್ರತಿಕ್ರಿಯೆಗಳನ್ನು ಆಧರಿಸಿ ನಿರಂತರವಾಗಿ ಅಭಿವೃದ್ಧಿ ಹೊಂದಬೇಕಾದ ಮಾರ್ಗದರ್ಶಕ ದಸ್ತಾವೇಜು ಎಂದು ಪರಿಗಣಿಸಬೇಕಾಗುತ್ತದೆ.

ಇಂದು ಆಗಬೇಕಾದ ಕೆಲಸಗಳು ಅನೇಕ ವಿಭಾಗಗಳಿಗೆ ಸೇರುತ್ತವೆ. ಈ ಕೈಪಿಡಿಯು ಮೂಲತಃ ಮಾನವೀಯ ನೆರವು ಹಾಗೂ ಆರೋಗ್ಯ ಸೇವಾ ಅಗತ್ಯತೆಗಳನ್ನು ಕುರಿತದ್ದಾಗಿರುತ್ತದೆ. ನಗರದ ಬಡವರಿಗೆ ಅವಶ್ಯಕ ಆಹಾರ ಸಾಮಗ್ರಿಗಳನ್ನು ಒದಗಿಸಲಿಚ್ಛಿಸುವ ನಾಗರಿಕ ಸಮಾಜದ ಸಂಘಟನೆಗಳಿಗೆ, ವಲಸಿಗ ಕಾರ್ಮಿಕರಿಗೆ ಆಹಾರೇತರ ಅವಶ್ಯಕ ವಸ್ತುಗಳನ್ನು ಪೂರೈಸಲು ಬಯಸುವವರಿಗೆ, ಲಭ್ಯ ಆರೋಗ್ಯ ಸೇವಾ ಸೌಲಭ್ಯಗಳನ್ನು ಹೆಚ್ಚಿಸಲು ಯೋಚಿಸುತ್ತಿರುವವರಿಗೆ ಹಾಗೂ ಇನ್ನೂ ಅನೇಕರಿಗೆ ಇಲ್ಲಿ ಮಾರ್ಗದರ್ಶಿ ಸೂತ್ರಗಳು ದೊರಕುತ್ತವೆ.

ಪ್ರತಿಯೊಂದು ವಿಭಾಗದಲ್ಲಿಯೂ ಸೂಚಿಸಿರುವ ಕಾರ್ಯಗಳನ್ನು ಆದ್ಯತೆಯ ದೃಷ್ಟಿಕೋನದಿಂದ ನೋಡಬೇಕು. ಪ್ರತಿವಿಭಾಗದ ಆರಂಭದಲ್ಲೂ ಅದನ್ನೇ ಸೂಚಿಸಲಾಗಿದೆ. ತಮ್ಮಲ್ಲಿರುವ ಕೌಶಲ್ಯ ಸಂಚಯ ಹಾಗೂ ಸ್ಥಳೀಯ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ನಾಗರಿಕ ಸಮಾಜದ ಸಂಘಟನೆಗಳು ಹೆಚ್ಚಿನ ಆದ್ಯತೆಯ ಕೆಲಸಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇದಲ್ಲದೆ ಅನೇಕ ವಿಷಯಗಳನ್ನು ಕುರಿತು ಸರಳವಾದ ಪ್ರಕ್ರಿಯೆಯ ಹರಿವನ್ನು, ಸ್ಥಾಪಿತ ಕಾರ್ಯ ನಿರ್ವಹಣಾ ಪ್ರಕ್ರಿಯೆಗಳನ್ನು ಅಥವಾ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ.

ಸರ್ಕಾರವು ಕಾಲದಿಂದ ಕಾಲಕ್ಕೆ ನೀಡುವ ಎಲ್ಲಾ ಸಲಹೆ ಹಾಗೂ ನಿಯಮಗಳನ್ನು ಅನುಸರಿಸಬೇಕು ಮತ್ತು ಅದಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಬೇಕು ಎಂಬುದನ್ನು ಗಮನಿಸತಕ್ಕದ್ದು. ಸರ್ಕಾರದ ಪ್ರಯತ್ನಗಳಿಗೆ ನಾಗರಿಕ ಸಮಾಜದ ಸಂಘಟನೆಗಳು ಇಂಬುಕೊಡುವಂತೆ ಕೆಲಸ ಮಾಡುತ್ತವೆ ಎಂಬ ಭರವಸೆ ನಮ್ಮದು.

## 2. ಸಂದರ್ಭ:

ಪ್ರಮಾಣ, ಪ್ರಸರಣೆಯ ವೇಗ ಮತ್ತು ಉಂಟು ಮಾಡಿರುವ ಪ್ರಭಾವ ಇವುಗಳನ್ನು ಗಮನಿಸಿದರೆ ಇತ್ತೀಚಿನ ವಾರಗಳಲ್ಲಿ ಇಡೀ ಮಾನವತೆಯನ್ನು ಅಪ್ಪಳಿಸಿರುವ ಕೋವಿಡ್-19 ಬಿಕ್ಕಟ್ಟು ಹಿಂದೆಂದೂ ಕಂಡರಿಯದ್ದು. ಪ್ರಾಥಮಿಕ ಪರಿಣಾಮಗಳು ಜನತೆಯ ಆರೋಗ್ಯದ ಮೇಲೆ ಮತ್ತು ಪ್ರಾಣದ ಮೇಲೆ ಆದರೂ, ದ್ವಿತೀಯ ಹಂತದ ಪರಿಣಾಮಗಳು ಆಳವಾಗಿರುತ್ತವೆ, ವಿಸ್ತಾರವಾಗಿರುತ್ತವೆ, ಜೀವನೋಪಾಯ ಮತ್ತು ಉದ್ಯೋಗದ ಪರಿಸ್ಥಿತಿಯನ್ನು ತೀವ್ರವಾಗಿ ಪಲ್ಲಟಗೊಳಿಸುತ್ತವೆ ಮತ್ತು ಜೊತೆಯಲ್ಲೇ ಅನೇಕ ಸಾಮಾಜಿಕ ಪರಿಣಾಮಗಳು ಸ್ಫೋಟಗೊಳ್ಳುತ್ತವೆ.

ಈ ಕೈಪಿಡಿಯು ಎರಡು ಮುಖ್ಯ ಅಂಶಗಳ ಮೇಲೆ ಜಿಲ್ಲಾ ಕೋವಿಡ್-19 ವಿಶ್ವವ್ಯಾಧಿ ಪ್ರತಿಸ್ಪಂದನಾ ಯೋಜನೆಯನ್ನು ರಚಿಸಲಿಚ್ಛಿಸಿದೆ. ಅವುಗಳೆಂದರೆ (ಎ) ಮಾನವೀಯ ಪ್ರತಿಸ್ಪಂದನೆ ಮತ್ತು (ಬಿ) ಆರೋಗ್ಯ ಸೇವಾ ಪ್ರತಿಸ್ಪಂದನೆ. ಎರಡರಲ್ಲೂ ಸಮಾನವಾಗಿರುವ ಅಂಶವೆಂದರೆ, ಅವು ತೀವ್ರವಾಗಿ ಹೊಡೆತಕ್ಕೊಳಗಾಗಲಿರುವ, ಸಮಾಜದ ದುರ್ಬಲ ವರ್ಗಗಳ ಅವಶ್ಯಕತೆಗಳನ್ನು, ಅವರು ಎದುರಿಸುವ ಸವಾಲುಗಳನ್ನು ಗಮನದಲ್ಲಿ ಇರಿಸಿಕೊಂಡಿವೆ. ಈ ವಿಶ್ವವ್ಯಾಧಿಯನ್ನು ಎದುರಿಸಲು ಸರ್ಕಾರವು ಅನೇಕ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆಯಾದರೂ ಸಹ, ಬಿಕ್ಕಟ್ಟು ಎಷ್ಟು ಗಂಭೀರವಾಗಿದೆಯೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು (ಎನ್‌ಜಿಓ) ನಾಗರಿಕ ಸಮಾಜದ ಸಂಘಟನೆಗಳು, ಜನೋಪಕಾರಿ ಸಂಸ್ಥೆಗಳು, ವ್ಯಾಪಾರೋದ್ಯಮ, ದೇಶದ ಎಲ್ಲ ಜನತೆ ಒಂದು ಸಮುದಾಯವಾಗಿ ಮುಂದೆ ಬಂದು, ಈ ವಿಶ್ವವ್ಯಾಧಿಯನ್ನು ಗೆಲ್ಲಬೇಕಾಗಿದೆ ಮತ್ತು ಜನತೆಯ ಮೇಲಾಗುವ ವ್ಯಾಪಕ ರೀತಿಯ ದುಷ್ಪರಿಣಾಮಗಳನ್ನು ಪರಿಹರಿಸಬೇಕಿದೆ.

## 3. ಅಂಗೀಕೃತ ತೀರ್ಮಾನಗಳು:

ಈ ಕೈಪಿಡಿಯನ್ನು ರಚಿಸುವಾಗ ಕೆಲವೊಂದು ಅಂಗೀಕೃತ ತೀರ್ಮಾನಗಳನ್ನು ಸ್ವೀಕರಿಸಲಾಗಿದೆ.

- ಈಗಾಗಲೇ ಅಸ್ತಿತ್ವದಲ್ಲಿರುವ ರೋಗಗಳನ್ನು ಹಾಗೂ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಲು ಸಹ ನಮ್ಮ ದೇಶದ ಆರೋಗ್ಯ ವ್ಯವಸ್ಥೆಗೆ ಸಿದ್ಧತೆ ಸಾಲದು ಎಂದು ಒಪ್ಪಿಕೊಳ್ಳುತ್ತೇವೆ. ಹೀಗಾಗಿ ಕೋವಿಡ್-19 ನಂತಹ ವಿಶ್ವವ್ಯಾಧಿಯು ಇಡೀ ದೇಶಕ್ಕೆ ಗಂಭೀರ ಅಪಾಯವಾಗಿದೆ.
- ಬಹುತೇಕ ಜನರು ಈ ಪ್ರಘಟನೆಯಿಂದ ಭಯಭೀತರಾಗಿದ್ದರೂ, ಅನೇಕರು ನೇರವಾಗಿ ಅಥವಾ ಪರೋಕ್ಷವಾಗಿ ನೆರವು ನೀಡಲು ಸಿದ್ಧರಿದ್ದಾರೆ.
- ಈ ವಿಶ್ವವ್ಯಾಧಿಯನ್ನು ಹೋರಾಡುವಲ್ಲಿ ನಾಗರಿಕ ಸಮಾಜದ ಸಂಘಟನೆಗಳು ಸ್ಥಳೀಯ ಸಂಸ್ಥೆಗಳಿಗೆ ಮತ್ತು ಸರ್ಕಾರಕ್ಕೆ ಬೆಂಬಲ ನೀಡುವುದು ಸಾಧ್ಯ.
- ಸರಳವಾದ, ನಿರ್ವಹಿಸಲಾಗುವ, ಪರಿಣಾಮಕಾರಿಯಾದ ಕ್ರಮಗಳನ್ನು ಜಾರಿಗೊಳಿಸುವುದು ಮುಖ್ಯ.
- ವಿಶ್ವವ್ಯಾಧಿಯನ್ನು ಹೋರಾಡುವ ಪ್ರಕ್ರಿಯೆಯಲ್ಲಿ, ಯಾವ ಪ್ರದೇಶಗಳಿಗೆ ಇನ್ನೂ ಸೋಂಕು ತಗುಲಿಲ್ಲವೋ ಅವುಗಳಿಗೆ ಶೀಘ್ರ ಆರಂಭದ ಅನುಕೂಲ ದೊರಕುತ್ತದೆ.
- ಬಿಕ್ಕಟ್ಟು ನಮ್ಮ ಇಡೀ ಆರ್ಥಿಕ ಸಂರಚನೆಯನ್ನೇ ಈಗಾಗಲೇ ಅಲ್ಲೋಲಕಲ್ಲೋಲಕ್ಕೆ ಗುರಿಮಾಡಿದೆ. ಇದರಿಂದಾಗಿ ಸಮಾಜದ ಅಂಚಿನಲ್ಲಿರುವ ಸಮುದಾಯಗಳು ಇನ್ನಷ್ಟು ದುರ್ಬಲವಾಗಿವೆ ಮತ್ತು ಅಸಹಾಯಕವಾಗಿವೆ. ಆದ್ದರಿಂದ ಮಾನವೀಯ ಹಾಗೂ ಆರೋಗ್ಯ ಸೇವೆಯ ನೆರವು ಅಗತ್ಯವಾಗಿದೆ.

**4. ಮಾರ್ಗದರ್ಶಿ ಸೂತ್ರಗಳು:**

ಈ ಕೈಪಿಡಿಯನ್ನು ರಚಿಸುವಾಗ ಕೆಳಗಿನ ಅಂಶಗಳನ್ನು ಮಾರ್ಗದರ್ಶಿ ಸೂತ್ರಗಳಾಗಿ ಅಂಗೀಕರಿಸಲಾಗಿದೆ.

- ಎಲ್ಲ ಪ್ರತಿಸ್ಪಂದನೆಯಲ್ಲಿ ಮಾರ್ಗದರ್ಶಿಯಾಗಿರುವ ಕೇಂದ್ರ ತತ್ವವೆಂದರೆ, **"ಸಾಮಾಜಿಕ ಒಳಗೊಳ್ಳುವಿಕೆ, ತಾರತಮ್ಯ ಇಲ್ಲದಿರುವುದು ಮತ್ತು ಘನತೆ"**.
- ಒಂಭತ್ತು ಮುಖ್ಯ ಮಾನವೀಯ ಮಾನದಂಡ (ಸಿಎಚ್ಎಸ್)ಗಳನ್ನು ಎಲ್ಲಾ ಪ್ರತಿಸ್ಪಂದನೆಗಳೂ ಅನುಸರಿಸಬೇಕು.
- ಕಾರ್ಯಾಚರಣೆಯಲ್ಲಿ ಯಾರಿಗೆ ಹೆಚ್ಚಿನ ಬೆಂಬಲದ ಅಗತ್ಯತೆ ಇದೆಯೋ ಅವರಿಗೆ ಆದ್ಯತೆ ನೀಡಬೇಕು. ಉದಾ: ವಲಸಿಗ ಕಾರ್ಮಿಕರು, ವಸತಿಹೀನರು, ಕೊಳೆಗೇರಿ ನಿವಾಸಿಗಳು.
- ಎಲ್ಲಾ ಸನ್ನಿವೇಶಗಳಲ್ಲಿ/ಹಂತಗಳಲ್ಲಿ ನಾವು ವೇಗವಾಗಿ ಕಾರ್ಯಪ್ರವೃತ್ತರಾದಷ್ಟೂ ಉತ್ತಮ.
- ಮುಂಚೂಣಿ ಸಿಬ್ಬಂದಿ ಮತ್ತು ಸ್ವಯಂ ಸೇವಕರ ಸುರಕ್ಷತೆಗೆ ಆದ್ಯತೆ ನೀಡಬೇಕು.
- ನಾಗರಿಕ ಸಮಾಜದ ಸದಸ್ಯರ ಭಾಗವಹಿಸುವಿಕೆಯು ಅವರ ಸ್ವಯಮಿಚ್ಛೆಯಿಂದಲೇ ಆಗಬೇಕು.
- ಮಾನವೀಯ ಪ್ರತಿಸ್ಪಂದನೆಗೇ ಆದ್ಯತೆ ಇರಬೇಕು.

**5, ನಾಗರಿಕ ಸಮಾಜದ ಭಾಗವಹಿಸುವಿಕೆ:**

ಇಂದಿನ ಸಂದರ್ಭದಲ್ಲಿ ಕಾರ್ಯಕ್ಷೇತ್ರಗಳಿಂದ ಬರುವ ಅಭಿಪ್ರಾಯಗಳನ್ನು ಆಧರಿಸಿ ಮಾನವೀಯ ಮತ್ತು ಆರೋಗ್ಯ ಸೇವಾ ಸೌಲಭ್ಯಗಳನ್ನು ತಳಮಟ್ಟದಲ್ಲಿ  ಜನತೆಗೆ ತಲುಪಿಸುವಲ್ಲಿ ಎದುರಾಗುವ ದೊಡ್ಡ ಸವಾಲೆಂದರೆ, ಕೊನೆಯ ಮೈಲಿ ಸಂಪರ್ಕ ಹಾಗೂ ಅನುಷ್ಠಾನ ಮತ್ತು ಅದರಲ್ಲಿ ಅಗತ್ಯವಾದ ಸಹಾನುಭೂತಿ ಮತ್ತು ದಕ್ಷತೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಪರಿಹಾರ ಕ್ರಮಗಳನ್ನು ಘೋಷಿಸಿದ್ದರೂ, ಅಧಿಕಾರಶಾಹಿ ವ್ಯವಸ್ಥೆಯು ಪರಿಸ್ಥಿತಿಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದರೂ ಈ ಬಿಕ್ಕಟ್ಟಿನ ವ್ಯಾಪಕತೆ, ಪ್ರಸರಣದ ವೇಗ ಮತ್ತು ಗಂಭೀರ ಪರಿಣಾಮಗಳು ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಬೆಂಬಲ ದೊರೆತಲ್ಲಿ ಅನೇಕ ಜಿಲ್ಲಾ ಆಡಳಿತಗಳಿಗೆ ಅದರಿಂದ ಲಾಭವಾಗುತ್ತದೆ. ಸಮುದಾಯಗಳೊಂದಿಗೆ ಸಂಪರ್ಕವನ್ನು ಸಾಧಿಸುವುದು, ಅವರ ತುರ್ತು ಅಗತ್ಯಗಳನ್ನು ಗುರುತಿಸುವುದು, ಅವಶ್ಯಕ ಸಾಮಗ್ರಿ ಹಾಗೂ ಸೇವೆಯನ್ನು ಅವರಿಗೆ ತಲುಪಿಸುವುದು ಇಂಥ ಕೆಲಸಗಳಲ್ಲಿ ಹಿಂದಿನಿಂದಲೂ ನಾಗರಿಕ ಸಮಾಜದ ಸಂಘಟನೆಗಳು ಬೆಂಬಲ ನೀಡಿವೆ ಮತ್ತು ಈ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಈ ವಿಷಯಗಳಿಗೆ ಸಂಬಂಧಿಸಿದಂತೆ ಅವರು ಗಣನೀಯವಾಗಿ ಕಾಣಿಕೆ ನೀಡುವುದು ಸಾಧ್ಯ.

**6. ಈ ಕೈಪಿಡಿಯನ್ನು ಉಪಯೋಗಿಸಿಕೊಳ್ಳುವ ರೀತಿ:**

ಪರಿವಿಡಿಯನ್ನು ನೋಡಿ ಒಂದೋ ಎರಡೋ ಕಾರ್ಯಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಿ. ನೇರವಾಗಿ ಆ ವಿಭಾಗಕ್ಕೇ ಪ್ರವೇಶಿಸಿ. ಆ ವಿಭಾಗದಲ್ಲಿ ಮಾಡಬಹುದಾದ ಕೆಲಸಗಳ ಪಟ್ಟಿಯಿದ್ದು, ಅದನ್ನು ಗಮನಿಸಬೇಕು. ಪ್ರಕ್ರಿಯೆಯ ಹರಿವು, ಸ್ಥಾಪಿತ ಕಾರ್ಯನಿರ್ವಹಣಾ ಪ್ರಕ್ರಿಯೆ (ಎಸ್‌ಓಪಿ)

ಅಥವಾ ಮಾರ್ಗದರ್ಶಿ ಸೂತ್ರ ಇದ್ದಲ್ಲಿ ಅದು ಅನುಬಂಧದಲ್ಲಿ ಲಭ್ಯವಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಮಾಹಿತಿ ದೊರಕಿದಂತೆಲ್ಲಾ ಅದನ್ನು ಅನುಬಂಧದಲ್ಲಿ ಸೇರಿಸುತ್ತಾ ಹೋಗುವುದೂ ಸಾಧ್ಯ.

ಎಲ್ಲಾ ಸಂದರ್ಭದಲ್ಲಿಯೂ ಸ್ಥಳೀಯ/ಜಿಲ್ಲಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಸಂಪರ್ಕಿಸಿ ಅವರಿಂದ ಅನುಮತಿ ಪಡೆದುಕೊಳ್ಳಬೇಕು ಮತ್ತು ಸರ್ಕಾರದ ಕೆಲಸಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕು.

## 7. ಪ್ರತಿಸ್ಪಂದನೆಯ ಕ್ಷೇತ್ರಗಳು:

### 7.1 ಮಾನವೀಯ ನೆರವು:

ಈ ಗಾತ್ರದ, ಪ್ರಮಾಣದ ವಿಶ್ವವ್ಯಾಧಿಗಳು ಅನೇಕ ಅಲ್ಪಾವಧಿಯ, ಮಧ್ಯಮಾವಧಿಯ ಹಾಗೂ ದೀರ್ಘಾವಧಿಯ ಮಾನವೀಯ ಸಮಸ್ಯೆಗಳನ್ನು ಸಹ ಸೃಷ್ಟಿಸುತ್ತವೆ. ಜನತೆಯ, ವಿಶೇಷವಾಗಿ ಬಡಜನತೆಯ ಅಶಕ್ತತೆ ಇನ್ನಷ್ಟು ಹೆಚ್ಚಾಗುತ್ತದೆ. ಹೀಗಾಗಿ ಬಡಜನತೆಯು ಈ ಪರಿಸ್ಥಿತಿಯಲ್ಲಿ ಬಲಿಯಾಗುವುದನ್ನು ತಪ್ಪಿಸಲು, ಇಡೀ ಹೋರಾಟದ ಯೋಜನೆಯಲ್ಲಿ ನಮ್ಮ ಮಧ್ಯಪ್ರವೇಶವು ಅಂಥವರನ್ನೇ ಗುರಿಯಾಗಿಸಿಕೊಂಡಿರಬೇಕಾಗುತ್ತದೆ.

ಇಲ್ಲಿರುವ ಸಾಮಾನ್ಯ ಅಂಶವೆಂದರೆ ಆಹಾರ ಮತ್ತು ಆಹಾರೇತರ ಅವಶ್ಯಕ ವಸ್ತುಗಳನ್ನು ಪೂರೈಸುವುದು. ಇದಕ್ಕೆ ಮೊದಲು ಗಮನ ನೀಡಲಾಗಿದೆ. ನಂತರದ ವಿಭಾಗಗಳಲ್ಲಿ ಬೇರೆ ಬೇರೆ ಸಂದರ್ಭಗಳು ಮತ್ತು ಆಯಾಯಾ ಸಂದರ್ಭಗಳಲ್ಲಿ ಪ್ರಸಕ್ತವಾಗುವ ಸಮರ್ಪಕ ಕಾರ್ಯಾಚರಣೆಗಳನ್ನು ಸೂಚಿಸಲಾಗಿದೆ.

#### 7.1.1 ಆಹಾರ ಮತ್ತು ಆಹಾರೇತರ ಅವಶ್ಯಕತೆಗಳ ನೆರವು

ಈ ಕೂಡಲೇ ಕೈಗೊಳ್ಳಬೇಕಾದ ಎರಡು ಮುಖ್ಯ ಕ್ರಮಗಳೆಂದರೆ ಆಹಾರ ಸಾಮಗ್ರಿಗಳ ಪೂರೈಕೆ (ದಿನಸಿಯ ರೂಪದಲ್ಲಿ ಅಥವಾ ಬೇಯಿಸಿದ ಆಹಾರದ ರೂಪದಲ್ಲಿ) ಮತ್ತು ಆಹಾರೇತರ ಅವಶ್ಯಕತೆಗಳ ಪೂರೈಕೆ. ಅನುಬಂಧ ಬಿ1 ರಲ್ಲಿ ಆಹಾರ ಸಾಮಗ್ರಿಗಳ ಮೂಲಕ ಬೆಂಬಲ ನೀಡುವುದರ ಕುರಿತು ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಲಾಗಿದೆ. ಅನುಬಂಧ ಬಿ2ರಲ್ಲಿ ಆಹಾರೇತರ ಅವಶ್ಯಕ ವಸ್ತುಗಳನ್ನು ಒದಗಿಸುವ ಮೂಲಕ ಬೆಂಬಲ ನೀಡುವುದರ ಕುರಿತು ಮಾಹಿತಿ ನೀಡಲಾಗಿದೆ. ಎಲ್ಲ ಸಂದರ್ಭಗಳಲ್ಲೂ ಸರ್ಕಾರ ನೀಡಿರುವ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಮುಖ್ಯ. ಹಾಗೆಯೇ ವೈಯಕ್ತಿಕ ಸುರಕ್ಷತೆಯ ಕ್ರಮಗಳನ್ನು ಹಾಗೂ ಭೌತಿಕವಾಗಿ ದೂರವಿರಬೇಕಾದ ಕ್ರಮಗಳನ್ನು ಅನುಸರಿಸಬೇಕು.

#### 7.1.2 ವಾಪಸಾಗಿರುವ ವಲಸೆ ಕಾರ್ಮಿಕರನ್ನು ಕುರಿತು

ಲಾಕ್‌ಡೌನ್ ಕಾರಣದಿಂದಾಗಿ ಹಾಗೂ ಭಾರತದ ಅನೇಕ ನಗರ ಪ್ರದೇಶಗಳಲ್ಲಿ ಉದ್ಯೋಗ ನಷ್ಟವಾಗಿರುವುದರಿಂದ, ದಿನಗೂಲಿ ಪಡೆಯುವಂತಹ ಬಹುತೇಕ ವಲಸಿಗ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ತಮ್ಮ ತಮ್ಮ ಹಳ್ಳಿಗಳಿಗೆ ಹಿಂದಿರುಗಿದ್ದಾರೆ. ಅವರು ಎದುರಿಸುವ ಕೆಲವು ಮುಖ್ಯ ಸಮಸ್ಯೆಗಳು ಕೆಳಕಂಡಂತಿವೆ:

- ಈಗಷ್ಟೇ ಹಬ್ಬದ ದಿನಗಳು ಮುಗಿದಿರುವುದರಿಂದ, ಅವರ ಕೈಯಲ್ಲಿ ಹೆಚ್ಚು ಕಡಿಮೆ ಹಣ ಇರುವುದಿಲ್ಲ. ಹಳ್ಳಿಗಳಲ್ಲಿ ಕೈ ಖಾಲಿ ಮಾಡಿಕೊಂಡು ಅವರುಗಳು ಮತ್ತೆ ತಮ್ಮ ದುಡಿಯುವ ಸ್ಥಳಗಳಾದ ನಗರ ಪ್ರದೇಶಕ್ಕೆ ಕೆಲವೇ ದಿನಗಳ ಹಿಂದೆ ವಾಪಸಾಗಿದ್ದಿರಬಹುದಾದ ಸಾಧ್ಯತೆಯೇ ಹೆಚ್ಚು, ಅಲ್ಲದೆ ಮಾಸಾಂತ್ಯದಲ್ಲಿ ಸಂಬಳ ಸಿಗಬೇಕಾದದ್ದು ಪಾವತಿಯಾಗಿರುವುದಿಲ್ಲ.
- ಇನ್ನೂ ಬೆಳೆ ಕಟಾವು ಮತ್ತು ಸುಗ್ಗಿ ಆಗಿಲ್ಲದೇ ಇರುವುದರಿಂದ ಮನೆಗಳಲ್ಲಿ ಆಹಾರ ಸಾಮಗ್ರಿಯ ದಾಸ್ತಾನಿರುವುದಿಲ್ಲ; ವಾರ್ಷಿಕವಾಗಿ ಅಥವಾ ಈ ಅವಧಿಯಲ್ಲಿ ಸ್ಥಳೀಯವಾಗಿ ಕೊಂಡುಕೊಳ್ಳುವ ಸಾಮಗ್ರಿಗಳನ್ನು ಕೊಂಡುಕೊಂಡಿರುವುದಿಲ್ಲ.
- ಕೆಲವು ವಲಸೆ ಕಾರ್ಮಿಕರು ತಮ್ಮ ಊರು ಅಥವಾ ಸ್ವಸ್ಥಳಗಳಿಗೆ ಹಿಂದಿರುಗಿದ್ದರೂ, ಇನ್ನು ಕೆಲವರು ಮಾರ್ಗ ಮಧ್ಯದಲ್ಲೇ ತಡೆಹಿಡಿಯಲ್ಪಟ್ಟಿದ್ದಾರೆ.
- ಅನೌಪಚಾರಿಕ ಕೃಷಿಯಲ್ಲಿ ಮತ್ತು ಅದೇ ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವವರು ಕೂಲಿ ಹಣವನ್ನೇ ನೆಚ್ಚಿಕೊಂಡಿರುತ್ತಾರೆ. ಅವರಿಗೆ ಈಗ ಯಾವ ಕೆಲಸವೂ ಇಲ್ಲ. ಆದ್ದರಿಂದ ಆದಾಯದ ಮೂಲವೂ ಇಲ್ಲ. (ಉದಾಹರಣೆಗೆ ರಿಕ್ಷಾ ಮತ್ತು ಇ–ರಿಕ್ಷಾ ಚಾಲಕರು, ಕಟ್ಟಡ ಕಾರ್ಮಿಕರು, ಗಾರೆ ಕೆಲಸದವರು, ನಗರಗಳಲ್ಲಿ ಬೀದಿ ವ್ಯಾಪಾರಿಗಳು ಮುಂತಾದವರು.)

ಇವರ ಅಶಕ್ತತೆಗಳನ್ನು ಕಡಿಮೆಮಾಡಲು ಕೆಳಕಂಡ ಕ್ರಮಗಳನ್ನು ಸೂಚಿಸಲಾಗಿದೆ.

##### *7.1.2.1* ಹಿಂದಿರುಗಿದ ವಲಸೆ ಕಾರ್ಮಿಕರ ದತ್ತಾಂಶ ಸಂಚಯ

**ಆದ್ಯತೆ– ತತ್‌ಕ್ಷಣದ್ದು**

ಈಗಾಗಲೇ ಹಿಂದಿರುಗಿದ ವಲಸಿಗ ಕಾರ್ಮಿಕರ ಅವಶ್ಯಕತೆಗಳನ್ನು ಪೂರೈಸುವಲ್ಲಿ, ಗ್ರಾಮ ಅಥವಾ ಪಂಚಾಯತ್ ಮಟ್ಟದಲ್ಲಿ ಅವರಿಗೆ ಸಂಬಂಧಿಸಿದ ವಿಶ್ವಾಸಾರ್ಹ ದತ್ತಾಂಶಗಳನ್ನು ಸಂಗ್ರಹಿಸುವುದು ಮೊದಲನೆಯ ಹೆಜ್ಜೆ. ಸರ್ಕಾರದ ಮುಂಚೂಣಿ ಕಾರ್ಯಕರ್ತರು (ಎಎನ್‌ಎಮ್/ಆಶಾ/ಅಂಗನವಾಡಿ ಕಾರ್ಯಕರ್ತರುಗಳು), ಆ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಎನ್‌ಜಿಓಗಳು, ಸ್ವಸಹಾಯ ಗುಂಪುಗಳು, ಯುವಕ ಸಂಘಗಳು, ಕಿಶೋರರ ತಂಡಗಳು, ಪಂಚಾಯತ್ ಕೆಲಸಗಾರರು ಮತ್ತು ಪಂಚಾಯತಿ ರಾಜ್ ಸಂಸ್ಥೆಗಳ ಸದಸ್ಯರು ಇಂಥ ದತ್ತಾಂಶ ಸಂಚಯವನ್ನು ಸೃಷ್ಟಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸಬಹುದು.

- ಕೋವಿಡ್ ಸೋಂಕು ಹರಡಿರುವ ಪ್ರದೇಶದಿಂದ ಯಾರಾದರೂ ವಾಪಸಾಗಿದ್ದಾರೆಯೇ,
- ಅವರ ಮನೆಯಲ್ಲಿ ಯಾರಾದರೂ ವಯಸ್ಸಾದವರಿದ್ದು ಅಥವಾ ಬೇರೆ ರೋಗಗಳಿಂದ ಬಳಲುತ್ತಿದ್ದವರು ಇದ್ದು ಆ ಕಾರಣದಿಂದಾಗಿ ವಿಶೇಷ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿದೆಯೇ

ಎಂಬುದನ್ನು ಅರಿಯಲು ಇಂತಹ ದತ್ತಾಂಶ ಸಂಚಯ ನೆರವಾಗುತ್ತದೆ. ಇಂಥ ಎಲ್ಲಾ ಪ್ರಕರಣಗಳಲ್ಲೂ ಆರೋಗ್ಯ ಸೇವಾ ವೃತ್ತಿನಿರತರಿಂದ ವಿಶೇಷ ಗಮನ ಅವಶ್ಯವಿರುತ್ತದೆ.

ಒಂದು ಹಳ್ಳಿಗೆ ಹಿಂದಿರುಗುವ ವಲಸಿಗ ಕಾರ್ಮಿಕರ ಪಟ್ಟಿಯನ್ನು ತಯಾರಿಸಲು ಅರ್ಜಿ ಮಾದರಿಯೊಂದನ್ನು ಉಪಯೋಗಿಸಬಹುದು. ಹಳ್ಳಿಗಳಿಗೆ ಹಿಂದಿರುಗುವ ವಲಸಿಗ ಕಾರ್ಮಿಕರ ಮೇಲೆ ಗಮನ ಇರಿಸಲು ಉಪಯೋಗಿಸಬಹುದಾದ ಅರ್ಜಿ ನಮೂನೆಗಾಗಿ ಅನುಬಂಧ ಬಿ–3 ಅನ್ನು ನೋಡಿರಿ. ಸ್ಥಳೀಯ ಪರಿಸ್ಥಿತಿ/ಅವಶ್ಯಕತೆಗಳಿಗನುಸಾರವಾಗಿ ಈ ಅರ್ಜಿ ನಮೂನೆಯನ್ನು ಉತ್ತಮ ಪಡಿಸಿಕೊಳ್ಳಬಹುದು.

**ನಾಗರಿಕ ಸಮಾಜದ ಸಂಘಟನೆಗಳು ನೆರವಾಗಬಲ್ಲ ಕ್ಷೇತ್ರಗಳು:**

- ಸರ್ಕಾರ/ಪಂಚಾಯತ್‌ಗಳಿಗಾಗಿ ಇಂಥ ದತ್ತಾಂಶ ಸಂಚಯವನ್ನು ಸೃಷ್ಟಿಮಾಡುವುದಕ್ಕಾಗಿ ಮಾಹಿತಿಯನ್ನು ಸಂಗ್ರಹಿಸುವುದು, ಅದನ್ನು ದೃಢೀಕರಿಸುವುದು, ತಾಳೆ ಹಾಕುವುದು, ಈ ಕೆಲಸಗಳಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವುದು ಮತ್ತು ಮುಂದಾಳತ್ವವನ್ನು ವಹಿಸುವುದು.
- ಸಾಧ್ಯವಿರುವೆಡೆಯಲ್ಲಿ ಜಿಲ್ಲಾ ಮಟ್ಟದ ಕೋವಿಡ್–19 ಪ್ರತಿಸ್ಪಂದನಾ ಕೋಶದಲ್ಲಿ ಈ ದತ್ತಾಂಶಗಳನ್ನು ನಿರ್ವಹಿಸಲು ಅಗತ್ಯವಾದ ಸಾಫ್ಟ್‌ವೇರ್ ಅನ್ನು ಸಿದ್ಧಪಡಿಸುವುದು.

### 7.1.2.2 ಪಂಚಾಯತ್–ಆಹಾರ ಲಭ್ಯತಾ ಯೋಜನೆ:

**ಆದ್ಯತೆ: ತತ್‌ಕ್ಷಣದ್ದು**

ವಲಸೆಯ ಮೇಲೆ ನಿರ್ಬಂಧವಿರುವುದರಿಂದ/ಕೂಲಿ ತಪ್ಪಿದ್ದರಿಂದ, ಅಶಕ್ತ ಕುಟುಂಬಗಳು ಅದರಲ್ಲೂ ವಿಶೇಷವಾಗಿ ಹಿಂದಿರುಗಿದ ವಲಸೆ ಕಾರ್ಮಿಕರಿರುವ ಕುಟುಂಬಗಳು ತೀವ್ರವಾದ ಆಹಾರದ ಕೊರತೆಗೆ ತುತ್ತಾಗಿರುತ್ತವೆ. ಹೀಗಾಗಿ ಅಂಥ ಕುಟುಂಬಗಳಿಗೆ ಆಹಾರವನ್ನು ಖಾತ್ರಿಪಡಿಸುವ ಯೋಜನೆಯನ್ನು ಪಂಚಾಯತಿಗಳು/ ಗ್ರಾಮಗಳು ಅಭಿವೃದ್ಧಿಪಡಿಸಬೇಕಾಗುತ್ತದೆ. ಅಲ್ಲದೆ ಯೋಜನೆಯನ್ನು ಜಾರಿಗೊಳಿಸಲು ಪಂಚಾಯತಿಗಳು/ಗ್ರಾಮಗಳು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳೊಂದಿಗೆ ಮತ್ತು ಆ ಪ್ರದೇಶದಲ್ಲಿ ಕೆಲಸ ಮಾಡುವ ಎನ್‌ಜಿಓಗಳೊಂದಿಗೆ ಸಂಪರ್ಕವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಸ್ಪಿಯರ್ ಇಂಡಿಯಾ ಸಂಸ್ಥೆಯು ನಿಗದಿ ಮಾಡಿರುವ ಅಂಗೀಕೃತ ಗುಣಮಟ್ಟಗಳ ಆಧಾರದ ಮೇಲೆ (ಎಂದರೆ ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ 2100 ಕಿಲೋ ಕ್ಯಾಲರಿ ಖಚಿತಪಡಿಸುವಂತೆ) ಆಹಾರದ ಕಿಟ್‌ಗಳನ್ನು ಮುಂದಿನ 2–3 ತಿಂಗಳಿಗಾಗುವಂತೆ ವಿತರಿಸುವುದು ತುಂಬಾ ಮುಖ್ಯವಾದದ್ದು. ಮೇಲಿನ ಮಾನದಂಡಗಳಿಗೆ ಅನುಗುಣವಾದ ಮಾದರಿ ಕಿಟ್‌ನ ವಿವರಗಳನ್ನು ಅನುಬಂಧ ಬಿ–1 ರಲ್ಲಿ ನೀಡಲಾಗಿದೆ.

**ನಾಗರಿಕ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಅಶಕ್ತ ಕುಟುಂಬಗಳಿಗೆ ಆಹಾರ ಲಭ್ಯತೆ ಯೋಜನೆಗಳನ್ನು ಸಿದ್ಧಪಡಿಸಲು ಪಂಚಾಯತಿ/ಗ್ರಾಮಗಳಿಗೆ ಬೆಂಬಲ ನೀಡುವುದು.
- ಅಶಕ್ತ ಕುಟುಂಬಗಳಿಗೆ ಆಹಾರ ಲಭ್ಯತೆ ಯೋಜನೆಯನ್ನು ಜಾರಿಗೊಳಿಸಲು ಒಟ್ಟಾಗಿ ಯೋಜನೆಗಳನ್ನು ಸಿದ್ಧಪಡಿಸಲು ಪಂಚಾಯತಿ/ಗ್ರಾಮಗಳಿಗೆ ಬೆಂಬಲ ನೀಡುವುದು.
- ನಿಗದಿಯಾದ ಮಾದರಿಗೆ ಅನುಗುಣವಾಗಿ ಆಹಾರ ಸಿದ್ಧತಾ ಕಿಟ್‌ಗಳನ್ನು ತಯಾರಿಸುವಲ್ಲಿ, ಸಂಗ್ರಹಿಸುವಲ್ಲಿ, ವಿತರಿಸುವಲ್ಲಿ ಬೆಂಬಲ ನೀಡುವುದು.

### *7.1.3* ಕುಟುಂಬಗಳನ್ನು ಸರ್ಕಾರಿ ಯೋಜನೆಗಳಿಗೆ ಜೋಡಿಸುವುದು:

**ಆದ್ಯತೆ: ತತ್‌ಕ್ಷಣದ್ದು**

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಹಕ್ಕು ಮತ್ತು ಅರ್ಹತೆಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಅದರೊಂದಿಗೆ ಸರ್ಕಾರದಿಂದ (ಕೇಂದ್ರ ಮತ್ತು ರಾಜ್ಯ) ಕೋವಿಡ್–19ಕ್ಕೆ ನಿರ್ದಿಷ್ಟವಾದ ಗರೀಬ್ ಕಲ್ಯಾಣ್‌ನಂಥ ಯೋಜನೆಗಳನ್ನೂ ಜಾರಿಗೆ ತರಲಾಗಿದೆ. ಅಶಕ್ತ ಕುಟುಂಬಗಳನ್ನು ಇಂಥ ಯೋಜನೆಗಳಿಗೆ ಜೋಡಿಸುವುದರಿಂದ ಅವರ ಅಶಕ್ತತೆಯನ್ನು ಬಹುಮಟ್ಟಿಗೆ ನಿವಾರಿಸಬಹುದು. ಮಾರ್ಗದರ್ಶಿ ಸೂತ್ರಗಳಿಗಾಗಿ ಅನುಬಂಧ ಬಿ–5ನ್ನು ನೋಡಿರಿ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಪಂಚಾಯತ್ ರಾಜ್ ಸಂಸ್ಥೆಗಳ (ಪಿಆರ್‌ಐ) ಸದಸ್ಯರಿಗೆ ಇತ್ತೀಚೆಗೆ ಘೋಷಿಸಲಾದ ಕೋವಿಡ್–19 ಯೋಜನೆಗಳನ್ನು ಪರಿಚಯಿಸುವುದು.
- ಆ ಯೋಜನೆಗಳಿಗೆ ಸಂಬಂಧಿಸಿದ, ಅರ್ಹತೆ, ಹಕ್ಕು ಮತ್ತು ಅರ್ಜಿ ಹಾಕುವ ಪ್ರಕ್ರಿಯೆ ಮುಂತಾದ ವಿವರಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.
- ಅಶಕ್ತ ಕುಟುಂಬಗಳಿಗೆ ಪ್ರಸ್ತುತವಾದ ಯೋಜನೆಗಳಿಗೆ ಅರ್ಜಿ ಹಾಕಲು ನೆರವು ನೀಡುವುದು.

### *7.1.2.4* ಸರ್ಕಾರ ನೀಡುವ ಸವಲತ್ತುಗಳಿಗೆ ವಲಸೆ ಕಟ್ಟಡ ಕಾರ್ಮಿಕರನ್ನು ಜೋಡಿಸುವುದು:

**ಆದ್ಯತೆ: ತತ್‌ಕ್ಷಣದ್ದು**

ಕಟ್ಟಡ ಮತ್ತು ನಿರ್ಮಾಣ ಕಂಪನಿಗಳ ಮೇಲೆ ಹೇರಿರುವ ವಿಶೇಷ ತೆರಿಗೆ (ಸೆಸ್) ಯಿಂದ ಸಂಗ್ರಹವಾಗಿರುವ ಸುಮಾರು 52,000 ಕೋಟಿ ರೂಗಳನ್ನು, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ವಿನಿಯೋಗಿಸಬೇಕೆಂದು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಆದರೆ ದುರದೃಷ್ಟವಶಾತ್ ಕಟ್ಟಡ ನಿರ್ಮಾಣದಲ್ಲಿ ತೊಡಗಿಕೊಂಡಿರುವ ಅನೇಕ ಕೆಲಸಗಾರರು ನಿರ್ಮಾಣ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಿಕೊಂಡಿಲ್ಲ. ರಾಜ್ಯದಿಂದ ಸಾಮಾಜಿಕ ಭದ್ರತೆಯನ್ನು ಪಡೆದುಕೊಳ್ಳಲು ಅಂಥವರಿಗೆ ಅಂತರ್ಜಾಲದ ಮೂಲಕ ನೋಂದಾಯಿಸಿಕೊಳ್ಳಬಹುದಾದ ಸೌಲಭ್ಯವನ್ನು ಕಲ್ಪಿಸಬೇಕಾದ ಅಗತ್ಯತೆ ಇದೆ. ಮೇಲೆ ಹೇಳಿದ ಕೇಂದ್ರ ಸರ್ಕಾರದ ಸೂಚನೆಯನ್ನು ಅನುಬಂಧ ಬಿ–4ರಲ್ಲಿ ನೀಡಲಾಗಿದೆ. ಅದೇ ರೀತಿ ಅನುಬಂಧದಲ್ಲಿ ಅದನ್ನು ದೊರಕಿಸಿಕೊಳ್ಳುವ ಕುರಿತು ಮಾರ್ಗದರ್ಶಿ ಸೂತ್ರಗಳನ್ನು ಸಹ ನೀಡಲಾಗಿದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ನಿರ್ಮಾಣ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಅಂತರ್ಜಾಲದ ಮೂಲಕ ನೋಂದಾಯಿಸುವ ಕುರಿತು ಮತ್ತು ಅವರಿಗೆ ನೀಡುವ ಕಾರ್ಮಿಕ ಕಾರ್ಡುಗಳ ಕುರಿತು ಪಂಚಾಯತ್ ರಾಜ್ ಸಂಸ್ಥೆಯ ಸದಸ್ಯರಿಗೆ ತಿಳುವಳಿಕೆ ನೀಡುವುದು.
- ನಿರ್ಮಾಣ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸುವ ಪ್ರಕ್ರಿಯೆಯ ಕುರಿತು ಜನಸಮುದಾಯದಲ್ಲಿ ಅರಿವು ಮೂಡಿಸುವುದು.
- ಕೋವಿಡ್–19ಕ್ಕೆ ಸಂಬಂಧಿಸಿದಂತೆ ಜಾರಿಯಾಗಿರುವ ವಿಶೇಷ ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು ನೋಂದಾಯಿಸಿಕೊಳ್ಳಲು ನೆರವು ನೀಡುವುದು, ಅವಕಾಶ ಕಲ್ಪಿಸುವುದು.

### *7.1.2.5* ಮನರೇಗ (ಎಂಜಿಎನ್‌ಆರ್‌ಇಜಿಎಸ್) ಯೋಜನೆಗೆ ಸಂಪರ್ಕ

**ಆದ್ಯತೆ: ಆ ನಂತರದ್ದು**

ಈ ಒಂದು ಸಂಕಷ್ಟದ ಸಂದರ್ಭದಲ್ಲಿ ಅಶಕ್ತ ಕುಟುಂಬಗಳ ಕೈಯಲ್ಲಿ ಒಂದಷ್ಟು ಹಣ ಓಡಾಡುವಂತೆ ಮಾಡಲು ಮನರೇಗ ಒಂದು ಉತ್ತಮ ಯೋಜನೆ. ಆದ್ದರಿಂದ ಗ್ರಾಮೀಣ ಸಮುದಾಯವು ಮನರೇಗದ ಮೂಲಕ ಒಂದಿಷ್ಟು ಕೂಲಿಹಣವನ್ನು ಪಡೆದುಕೊಳ್ಳಲಾಗುವಂತೆ ಅವರಿಗೆ ನೆರವು ನೀಡಲು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ. ಜನರ ಓಡಾಟದ ಮೇಲಿನ ನಿರ್ಬಂಧವನ್ನು ತೆಗೆದ ಮೇಲೆ ಸೂಕ್ತ ಸಮಯದಲ್ಲಿ ಇದನ್ನು ಕೈಗೆತ್ತಿಕೊಳ್ಳಬೇಕು. ಇದಲ್ಲದೆ ಮನರೇಗ ಕೆಲಸಗಾರರಿಗೆ ಕೂಲಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಸಮರ್ಪಕ ಪ್ರಯತ್ನಗಳನ್ನು ಮಾಡಬೇಕು.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು**

- ಮನರೇಗ ಕಾರ್ಡ್ ಚಾಲ್ತಿಯಲ್ಲಿರುವಂತೆ ಮಾಡುವುದು ಮತ್ತು ಸೂಕ್ತ ಬ್ಯಾಂಕ್ ಜೋಡಣೆಯನ್ನು ಏರ್ಪಡಿಸುವುದು. ಈ ಕಾರ್ಯಗಳಲ್ಲಿ ಅಶಕ್ತ ಕುಟುಂಬಗಳಿಗೆ ಬೆಂಬಲ ನೀಡುವುದು.
- ಗ್ರಾಮ/ಪಂಚಾಯತ್ ಮಟ್ಟದಲ್ಲಿ ಕೆಲಸ ನೀಡಬೇಕೆಂದು ಅಭಿಯಾನ ನಡೆಸುವುದು.

**7.1.2.6: ಗೌರವದಿಂದ ನಡೆಸಿಕೊಳ್ಳುವುದು:**

**ಆದ್ಯತೆ: ತತ್‌ಕ್ಷಣದ್ದು**

ಕೋವಿಡ್–19 ಕುರಿತಾಗಿ ಇರುವ ಅನೇಕ ತಪ್ಪಾದ ಪ್ರಚಾರಗಳಿಂದಾಗಿ ಹಳ್ಳಿಗೆ ಹಿಂತಿರುಗಿದ ವಲಸಿಗ ಕುಟುಂಬಗಳನ್ನು ಕುರಿತು ಉಳಿದವರು ಬೇಧ–ಭಾವ ತೋರಿಸಬಹುದು. ಅವರ ಮೇಲೊಂದು ಕಳಂಕವೇ ಉಂಟಾಗಬಹುದು. ಇದರಿಂದಾಗಿ ಆ ಕುಟುಂಬಗಳು ಇನ್ನೂ ಅಶಕ್ತರಾಗುವ, ಬಲಿಪಶುವಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಆದ್ದರಿಂದ ಸರಿಯಾದ ಮಾಹಿತಿಯನ್ನು ನೀಡಿ ಜಾಗೃತಿಯನ್ನು ಸೃಷ್ಟಿಸಲು ಸಮರ್ಪಕ ಪ್ರಯತ್ನಗಳನ್ನು ಮಾಡಬೇಕು. ಸಂವಹನದ ಯೋಜನೆಯನ್ನು ಸ್ಥಳೀಯ ಅಗತ್ಯತೆಗನುಗುಣವಾಗಿ ಅಳವಡಿಸಿಕೊಳ್ಳಬೇಕು. ಗ್ರಾಮೀಣ ಪ್ರದೇಶದಲ್ಲಿ ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಸಮರ್ಥರಾದ ಮುಂದಾಳುಗಳನ್ನು ಒಲಿಸಿಕೊಳ್ಳುವುದು ಒಂದು ಉಪಯುಕ್ತ ಕಾರ್ಯತಂತ್ರವಾಗುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವಾಗಬಹುದಾದ ಕ್ಷೇತ್ರಗಳು:**

- ಸಂವಹನ/ಜನಜಾಗೃತಿ ಯೋಜನೆ ಹಾಗೂ ಅದಕ್ಕೆ ಅವಶ್ಯವಾದ ಸಾಮಗ್ರಿಗಳನ್ನು ತಯಾರಿಸುವಲ್ಲಿ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಬೆಂಬಲ ನೀಡುವುದು.
- ಸಮೂಹ ವಿತರಣೆಗಾಗಿ, ಡಿಜಿಟಲ್ ಸಾಮಗ್ರಿಯೂ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ತಯಾರಿಸಲು ತಾಂತ್ರಿಕ ಬೆಂಬಲವನ್ನು ಒದಗಿಸುವುದು.
- ಯೋಜನೆಯ ಅನುಷ್ಠಾನದಲ್ಲಿ ಮುಂದಾಳತ್ವ ವಹಿಸುವುದು.

***7.1.2.7* ಮಾನಸಿಕ–ಸಾಮಾಜಿಕ ಬೆಂಬಲ:**

**ಆದ್ಯತೆ: ತತ್‌ಕ್ಷಣದ್ದು**

ಇಂಥದೊಂದು ವಿಶ್ವವ್ಯಾಧಿಯು ಬಹಳಷ್ಟು ಮಾನಸಿಕ ಒತ್ತಡ, ಆತಂಕ ಹಾಗೂ ಖಿನ್ನತೆಯನ್ನು ಸೃಷ್ಟಿಸುತ್ತದೆ. ಇದರಿಂದಾಗಿ ಅವರು ಮಾಮೂಲಿ ಜೀವನಕ್ಕೆ ವಾಪಸಾಗಲು ಅಡೆತಡೆಗಳು ಉಂಟಾಗುತ್ತವೆ. ಆದ್ದರಿಂದ ನಂತರದ ದಿನಗಳಲ್ಲಿ ಅಂಥವರಿಗೆ ಮಾನಸಿಕ ಸಾಮಾಜಿಕ ಒತ್ತಾಸೆಯನ್ನು ನೀಡಲು ತರಬೇತಿ ಹೊಂದಿದ ಸಮಾಲೋಚಕರಿಂದ ಆಪ್ತಸಮಾಲೋಚನೆಗೆ ವ್ಯವಸ್ಥೆ ಮಾಡಬೇಕಾಗುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು**

- ಅಂತಹ ಒತ್ತಾಸೆ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವುದು.
- ರಾಜ್ಯ/ಜಿಲ್ಲಾ ಮಟ್ಟಗಳಲ್ಲಿ ಅಂಥ ಸೇವೆಯನ್ನು ನಡೆಸುವಲ್ಲಿ ವೃತ್ತಿಪರರೊಂದಿಗೆ ಸರ್ಕಾರಕ್ಕೆ ಬೆಂಬಲ ನೀಡುವುದು.

**7.1.2.8 ಕಟಾವಿಗೆ ಬಂದಿರುವ ಬೆಳೆಗಳ ಸುಗ್ಗಿ:**

**ಆದ್ಯತೆ: ಆ ನಂತರದ್ದು**

ಇದು ಬೆಳೆದು ನಿಂತ ಬೆಳೆಗಳನ್ನು ಕಟಾವು ಮಾಡಬೇಕಾದ ಕಾಲವೂ ಹೌದು. ಆದ್ದರಿಂದ ಗ್ರಾಮಸ್ಥರು ಬೆಳೆಯನ್ನು ಕಟಾವು ಮಾಡುವುದಕ್ಕೆ ಬೆಂಬಲ ನೀಡಲಿಕ್ಕಾಗಿ ಪಂಚಾಯತಿಗಳು ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳುವುದು ಅಗತ್ಯ. ನಿರ್ಬಂಧಗಳು ಸಡಿಲಗೊಂಡ ಮೇಲೆ ಇದು ಜಾರಿಗೆ ಬರಬೇಕಾಗುತ್ತದೆ. ಅಲ್ಲದೆ ಕಟಾವಾದ ಧಾನ್ಯಗಳನ್ನು ಹತ್ತಿರದ ಮಂಡಿಗೆ ತಲುಪಿಸಲು ಸರ್ಕಾರದೊಂದಿಗೆ ಸಮನ್ವಯವನ್ನು ಮಾಡಿಕೊಳ್ಳಬೇಕಾಗುತ್ತದೆ. ಪಂಚಾಯತಿಯೊಂದಿಗೆ ಮತ್ತು ಗ್ರಾಮೀಣ ಮಟ್ಟದ ಎನ್‌ಜಿಓಗಳೊಂದಿಗೆ ಸಮನ್ವಯ ನಡೆಸಿ ಕೃಷಿ ಉತ್ಪನ್ನದ

ಪ್ರಮಾಣವನ್ನು ಅಂದಾಜಿಸುವುದು ಮತ್ತು ಗ್ರಾಮೀಣ ಮಟ್ಟದಲ್ಲಿ ದತ್ತಾಂಶ ಸಂಚಯ ಮಾಡುವುದು. ಇದೆಲ್ಲಾ ರಾಜ್ಯವು ಸೂಕ್ತ ಸಾಮೂಹಿಕ ಕಾರ್ಯತಂತ್ರವನ್ನು ರೂಪಿಸುವಲ್ಲಿ ನೆರವಾಗುತ್ತವೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವಾಗಬಹುದಾದ ಕ್ಷೇತ್ರಗಳು:**

- ಅಂತಹ ನೆರವಿನ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಪಂಚಾಯಿತಿಗಳಿಗೆ ತಾಂತ್ರಿಕ ಬೆಂಬಲ ನೀಡುವುದು.
- ಭೌತಿಕ ಅಂತರವನ್ನು ಪರಸ್ಪರ ಕಾಯ್ದುಕೊಳ್ಳುವುದರ ಪ್ರಾಮುಖ್ಯತೆಯ ಬಗ್ಗೆ ಕೃಷಿ ಕಾರ್ಮಿಕರಿಗೆ ತಿಳುವಳಿಕೆ ನೀಡುವುದು.
- ಸರ್ಕಾರವು ಒಟ್ಟಾರೆ ಕೃಷಿ ಉತ್ಪನ್ನವನ್ನು ಅಂದಾಜು ಮಾಡಲಿಕ್ಕೆ ನೆರವಾಗುವಂತೆ, ಗ್ರಾಮ/ಪಂಚಾಯತಿ ಮಟ್ಟದಲ್ಲಿ ಕಟಾವಾದ ಬೆಳೆಯ ಕುರಿತು ದತ್ತಾಂಶವನ್ನು ಸೃಷ್ಟಿಸಿ ಬೆಂಬಲ ಒದಗಿಸುವುದು.
- ರೈತರಿಂದ ಕೊಂಡುಕೊಂಡ ಬೆಳೆಗೆ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಬೆಂಬಲ ನೀಡುವುದು.

**7.1.2.9 ಕೆಲಸಕ್ಕೆ ಹಿಂದಿರುಗಲು ಅನುಕೂಲ ಮಾಡಿಕೊಡುವುದು:**
**ಆದ್ಯತೆ: ಆ ನಂತರದ್ದು**

ಪರಿಸ್ಥಿತಿ ಮಾಮೂಲಾಗುತ್ತಿದ್ದಂತೆ, ತಮ್ಮ ಉದ್ಯೋಗ ಸ್ಥಳಗಳಿಗೆ ವಾಪಸಾಗಿ ಕೆಲಸವನ್ನು ಪುನರಾರಂಭಿಸಲು ಇಷ್ಟ ಪಡುವ ಕೆಲಸಗಾರರಿಗೆ ಬೆಂಬಲ ನೀಡಬೇಕಾದ ಅವಶ್ಯಕತೆ ಉಂಟಾಗುತ್ತದೆ. ಅಲ್ಲದೆ ಆ ಹಿಂದಿನ ಸ್ಥಳಗಳಲ್ಲಿ ಅವರುಗಳ ಬಾಕಿ ಉಳಿದಿರುವ ಕೂಲಿ/ಸಂಬಳಗಳನ್ನು ಪಡೆದುಕೊಳ್ಳಲು ಅವರಿಗೆ ಬೆಂಬಲ ನೀಡಬೇಕಾದ ಅಗತ್ಯತೆ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯ ಪಾತ್ರವು ಬಹಳ ಮುಖ್ಯವಾದದ್ದು.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿಕೊಳ್ಳಲು ಕಾರ್ಮಿಕರಲ್ಲಿ ಜಾಗೃತಿ ಮೂಡಿಸುವುದು.
- ಅವರು ಮುಗಿಸಿರುವ ಕೆಲಸಕ್ಕೆ ಬಾಕಿ ಇರುವ ವೇತನ ದೊರೆಯುವಂತೆ ಬೆಂಬಲ ನೀಡುವುದು.
- ಕೆಲಸಕ್ಕೆ ವಾಪಸಾಗುವ ಯೋಜನೆಗಳಿಗೆ ಬೆಂಬಲ ನೀಡುವುದು.

**7.1.3 ಮಾರ್ಗ ಮಧ್ಯದಲ್ಲಿರುವ ವಲಸಿಗರು:**

ತಮ್ಮ ಹಳ್ಳಿಗಳಿಗೆ, ಊರುಗಳಿಗೆ ಹೊರಟಿದ್ದ ದೊಡ್ಡ ಸಂಖ್ಯೆಯ ಕಾರ್ಮಿಕರು ಲಾಕ್‌ಡೌನ್‌ನಿಂದಾಗಿ, ತಾವು ಮುಟ್ಟಬೇಕಾದ ಸ್ಥಳವನ್ನು ತಲುಪದೆ ದೂರದಲ್ಲೇ ಸಿಕ್ಕಿಹಾಕಿಕೊಂಡಿದ್ದಾರೆ. ಇದರಿಂದ ಒಂದು ದೊಡ್ಡ ಮಾನವೀಯ ಬಿಕ್ಕಟ್ಟು ಉದ್ಭವಿಸಿದೆ. ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸದಿದ್ದರೆ ಸೋಂಕು ಪಸರಿಸುವ ದೊಡ್ಡ ಸಾಧ್ಯತೆ ಇದೆ. ಹೀಗಾದರೆ ಈ ವಿಶ್ವವ್ಯಾಧಿಯ ಸಂದರ್ಭದಲ್ಲಿ ದೇಶದ ಪರಿಸ್ಥಿತಿ ಇನ್ನಷ್ಟು ಉಲ್ಬಣವಾಗುತ್ತದೆ. ಈ ಅಭೂತಪೂರ್ವ ಸಂದರ್ಭವನ್ನು ನಿಭಾಯಿಸಲು ಕೆಳಕಂಡ ತುರ್ತು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**7.1.3.1 ಬಿಕ್ಕಟ್ಟು ಮತ್ತು ಸಹಾಯದ ಕೇಂದ್ರಗಳು – ಸ್ಥಳ ಮಾಹಿತಿಯನ್ನು ಹಂಚಿಕೊಳ್ಳುವುದು:**
**ಆದ್ಯತೆ: ತತ್‌ಕ್ಷಣದ್ದು**

ವಲಸಿಗ ಕಾರ್ಮಿಕರು ಪ್ರಯಾಣ ಮಾಡುತ್ತಿರುವ ದಾರಿಯಲ್ಲಿ ಅನೇಕ ಬಿಕ್ಕಟ್ಟು ಮತ್ತು ಸಹಾಯ ಕೇಂದ್ರಗಳನ್ನು ಸರ್ಕಾರ ಮತ್ತು ನಾಗರಿಕ ಸಮಾಜ ತೆರೆದಿವೆ. ಆದರೆ ಇದಕ್ಕೆ ಸಂಬಂಧಿಸಿದ ಮಾಹಿತಿಯು ಪ್ರಯಾಣಿಸುತ್ತಿರುವ ವಲಸಿಗ ಕಾರ್ಮಿಕರಿಗೆ ಗೊತ್ತಿರಲಿಕ್ಕಿಲ್ಲ. ಆದ್ದರಿಂದ ಸರ್ಕಾರ ಮತ್ತು ನಾಗರಿಕ ಸಮಾಜ ಆರಂಭಿಸಿರುವ ಇಂತಹ ಬಿಕ್ಕಟ್ಟು ಮತ್ತು ಸಹಾಯ ಕೇಂದ್ರಗಳ ಕುರಿತಾದ ಮಾಹಿತಿಯನ್ನು ಸಂಬಂಧಪಟ್ಟವರಿಗೆ ತಲುಪಿಸುವುದು ತುರ್ತು ಅಗತ್ಯ. ಯಾರನ್ನು ಸಂಪರ್ಕಿಸಬೇಕು, ಕೇಂದ್ರಗಳಲ್ಲಿ ಯಾವ ಸೇವೆಗಳು ಲಭ್ಯ ಇವೆ ಎಂಬ ಮಾಹಿತಿಗಳನ್ನು ಮುದ್ರಣ/ವಿದ್ಯುನ್ಮಾನ/ ಸಾಮಾಜಿಕ ಹೀಗೆ ಅನೇಕ ಮಾಧ್ಯಮಗಳ ಮೂಲಕ ಹಂಚಿಕೊಳ್ಳಬೇಕು.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಬಿಕ್ಕಟ್ಟಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಸರ್ಕಾರಕ್ಕೆ ಬೆಂಬಲ ನೀಡುವುದು ಮತ್ತು ವಿವಿಧ ಮಾರ್ಗಗಳಲ್ಲಿ ಕಾರ್ಯನಿರತವಾಗಿರುವ ಕೇಂದ್ರಗಳಿಗೆ ನೆರವು ನೀಡುವುದು.
- ಸಂವಹನ ಕಾರ್ಯತಂತ್ರ ಹಾಗೂ ಯೋಜನೆಯನ್ನು ರೂಪಿಸುವಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವುದು.

- ಮುದ್ರಣ/ ವಿದ್ಯುನ್ಮಾನ/ ಸಾಮಾಜಿಕ ಮಾಧ್ಯಮ ಹೀಗೆ ವಿಭಿನ್ನ ಮಾಧ್ಯಮಗಳಿಗಾಗಿ ಸಂದೇಶಗಳನ್ನು ಸಿದ್ಧಪಡಿಸುವಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವುದು.
- ಸಂವಹನದ ಯೋಜನೆಯನ್ನು ಜಾರಿಗೊಳಿಸುವಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವುದು.

**7.1.3.2 ಮಾರ್ಗಮಧ್ಯದಲ್ಲಿ ವಲಸಿಗ ಕುಟುಂಬಗಳಿಗೆ ಆಹಾರ ಮತ್ತು ಆಹಾರೇತರ ಬೆಂಬಲ:**
**ಆದ್ಯತೆ: ತತ್‌ಕ್ಷಣದ್ದು**

ಮಾರ್ಗಮಧ್ಯದಲ್ಲಿ ಸಿಲುಕಿಕೊಂಡಿರುವ ವಲಸಿಗ ಕುಟುಂಬಗಳಿಗೆ ಆಹಾರ ಮತ್ತು ಆಹಾರೇತರ ಸಾಮಗ್ರಿಗಳನ್ನು ಒದಗಿಸಬೇಕಾಗುತ್ತದೆ. ದಯಮಾಡಿ ಇನ್ನಷ್ಟು ವಿವರಗಳಿಗಾಗಿ ಅನುಬಂಧ ಬಿ–1 ಮತ್ತು ಬಿ–2ನ್ನು ನೋಡಿರಿ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಲಾಕ್‌ಡೌನ್‌ನಿಂದಾಗಿ ಮಾರ್ಗಮಧ್ಯದಲ್ಲಿ ಸಿಲುಕಿರುವ ವಲಸಿಗ ಕುಟುಂಬಗಳಿಗಾಗಿ ಸಮುದಾಯ ಅಡಿಗೆ ಶಾಲೆಯನ್ನು ನಡೆಸಲು ಸರ್ಕಾರಕ್ಕೆ ಬೇಂಬಲ ನೀಡುವುದು.
- ವಲಸಿಗ ಕುಟುಂಬಗಳಿಗಾಗಿ ಆಹಾರ ಮತ್ತು ಆಹಾರೇತರ ವಸ್ತುಗಳ ಸಂಗ್ರಹ ಮತ್ತು ವಿತರಣೆ.

**7.1.3.3 ನೊಂದ ಕುಟುಂಬಗಳಿಗೆ ಮಾನಸಿಕ ಸಾಮಾಜಿಕ ಬೆಂಬಲ:**
**ಆದ್ಯತೆ: ತತ್‌ಕ್ಷಣದ್ದು**

ಲಾಕ್‌ಡೌನ್ ಸಂದರ್ಭದಲ್ಲಿ ಮಾರ್ಗಮಧ್ಯದಲ್ಲಿ ಸಿಲುಕಿಕೊಂಡ ಕುಟುಂಬಗಳು ಅನಿಶ್ಚಿತ ಪರಿಸ್ಥಿತಿಗಳಿಂದಾಗಿ ತೀವ್ರವಾದ ಮಾನಸಿಕ ಒತ್ತಡಗಳಿಗೆ ತುತ್ತಾಗಿರುತ್ತವೆ. ಭೌತಿಕ ಅಂತರವನ್ನು ಉಳಿಸಿಕೊಳ್ಳುವ ನಿಯಮಗಳನ್ನು ಅನುಸರಿಸುತ್ತಲೇ, ಅಂಥವರಿಗೆ ಮಾನಸಿಕ ಸಾಮಾಜಿಕ ಬೆಂಬಲವನ್ನು ಒದಗಿಸಲು ತರಬೇತಿ ಹೊಂದಿದ ಸಮಾಲೋಚಕರಿಂದ ಆಪ್ತಸಮಾಲೋಚನೆಯನ್ನು ಒದಗಿಸಬೇಕಾದ ಅವಶ್ಯಕತೆಯಿರುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಅಂತಹ ಬೆಂಬಲ ವ್ಯವಸ್ಥೆಯನ್ನು ರೂಪಿಸುವಲ್ಲಿ ಸರ್ಕಾರಕ್ಕೆ ನೆರವು ನೀಡುವುದು.
- ಅಂಥ ಸೇವೆಗಳನ್ನು ವೃತ್ತಿಪರರೊಂದಿಗೆ ನಡೆಸಲು ಸರ್ಕಾರಕ್ಕೆ ನೆರವು ನೀಡುವುದು.

**7.1.4 ನಗರಗಳಲ್ಲಿ ವಲಸಿಗರು:**

ಲಾಕ್‌ಡೌನ್‌ನಿಂದಾಗಿ ದೊಡ್ಡ ಸಂಖ್ಯೆಯಲ್ಲಿ ವಲಸಿಗ ಕಾರ್ಮಿಕರು (ಬಹುತೇಕ ದಿನಗೂಲಿಗಳು) ಆಹಾರವಿಲ್ಲದೆ, ಹಣವಿಲ್ಲದೆ ನಗರಗಳಲ್ಲಿ ಸಿಲುಕಿಕೊಂಡಿದ್ದಾರೆ. ಇವರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಅವರ ಕಷ್ಟಗಳನ್ನು ಕಡಿಮೆ ಮಾಡಿ ಸುರಕ್ಷಿತವಾಗಿ ಇರಿಸಲು ಕೆಳಗಿನ ತುರ್ತು ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕ.

**7.1.4.1 ವಲಸಿಗ ಕುಟುಂಬಗಳಿಗೆ ಆಹಾರ ಮತ್ತು ಆಹಾರೇತರ ಸಾಮಗ್ರಿಗಳ ಬೆಂಬಲ:**
**ಆದ್ಯತೆ: ತತ್‌ಕ್ಷಣದ್ದು**

ಹೆಚ್ಚಿನ ವಿವರಗಳಿಗಾಗಿ ಅನುಬಂಧ ಬಿ–1 ಮತ್ತು ಬಿ–2 ನ್ನು ನೋಡಿರಿ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಲಾಕ್‌ಡೌನ್‌ನಿಂದಾಗಿ ಸಿಲುಕಿಕೊಂಡಿರುವ ಅಶಕ್ತ ವಲಸಿಗ ಕುಟುಂಬಗಳನ್ನು ಗುರುತಿಸುವುದು ಮತ್ತು ಅವರಿಗೆ ಸಂಬಂಧಿಸಿದ ದತ್ತಾಂಶ ಸಂಚಯವನ್ನು ಸೃಷ್ಟಿ ಮಾಡುವುದು. ಈ ಕೆಲಸದಲ್ಲಿ ಸರ್ಕಾರಕ್ಕೆ ನೆರವು ನೀಡುವುದು.
- ವಲಸಿಗ ಕುಟುಂಬಗಳಿಗೆ ಆಹಾರ ಮತ್ತು ಆಹಾರೇತರ ಸಾಮಗ್ರಿಗಳನ್ನು ಸಂಗ್ರಹಿಸಿ ವಿತರಿಸುವುದು.

**7.1.4.2 ವಾಸಕ್ಕೆ ಸುರಕ್ಷಿತ ಸ್ಥಳ:**
**ಆದ್ಯತೆ: ತತ್‌ಕ್ಷಣದ್ದು**

ಅನೇಕ ವಲಸಿಗ ಕಾರ್ಮಿಕ ಕುಟುಂಬಗಳು ಕಟ್ಟಡ ನಿರ್ಮಾಣ/ಇನ್ಯಾವುದೇ ಕೆಲಸದ ಸ್ಥಳಗಳಲ್ಲಿ ತಾತ್ಕಾಲಿಕ ವಾಸದ ವ್ಯವಸ್ಥೆ ಮಾಡಿಕೊಂಡು ಬದುಕುತ್ತಿದ್ದರು. ರಾಷ್ಟ್ರಮಟ್ಟದ ಲಾಕ್‌ಡೌನ್‌ನ ಘೋಷಣೆ ಆದ ಮೇಲೆ ಅನೇಕರು ತೀರಾ ಇಕ್ಕಟ್ಟಾದ ಸ್ಥಳಗಳಲ್ಲಿ ವಾಸಿಸುತ್ತಿದ್ದು ಅಲ್ಲಿ ಯಾವುದೇ ರೀತಿ ಭೌತಿಕವಾಗಿ ದೂರವಿರುವ ಕ್ರಮಗಳನ್ನು ಅನುಸರಿಸುವುದು ಕಷ್ಟವಾಗಿರುತ್ತದೆ. ಹೀಗಾಗಿ ಲಾಕ್‌ಡೌನ್ ಸಹಜ ಸ್ಥಿತಿಗೆ ಮರಳುವವರೆಗೂ ಅವರನ್ನು ಸರ್ಕಾರ ಬೆಂಬಲಿಸುವ ಶಿಬಿರಗಳಿಗೆ ಅಥವಾ ನಾಗರಿಕ ಸಮಾಜವು ನಡೆಸುತ್ತಿರುವ ಕೇಂದ್ರಗಳಿಗೆ ಸೇರಿಸುವ ತುರ್ತು ಅವಶ್ಯಕತೆ ಇರುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ವಾಸಿಸಲು ಸುರಕ್ಷಿತ ಸ್ಥಳದ ಅಗತ್ಯವಿರುವ ಅಶಕ್ತ ವಲಸಿಗ ಕುಟುಂಬಗಳನ್ನು ಗುರುತಿಸಿ ಅವರಿಗೆ ಸಂಬಂಧಿಸಿದ ದತ್ತಾಂಶ ಸಂಚಯವನ್ನು ಸಿದ್ಧಪಡಿಸುವಲ್ಲಿ ಸರ್ಕಾರಕ್ಕೆ ನೆರವು ನೀಡುವುದು.
- ವಲಸಿಗ ಕಾರ್ಮಿಕ ಕುಟುಂಬಗಳಿಗೆ ಅಂತಹ ಅಲ್ಪಾವಧಿ ಸುರಕ್ಷಿತ ವಸತಿ ಕೇಂದ್ರಗಳನ್ನು ಆರಂಭಿಸುವುದು ಮತ್ತು ಅಲ್ಲಿ ಭೌತಿಕ ಅಂತರದ ಕ್ರಮಗಳನ್ನು ಅನುಸರಿಸುವುದು.

**7.1.4.3 ಮೂಲಾಧಾರ ಹಣಕಾಸು ಬೆಂಬಲ:**
**ಆದ್ಯತೆ: ತತ್‌ಕ್ಷಣದ್ದು**

ಕೆಲವೊಂದು ವಲಸೆ ಕಾರ್ಮಿಕ ಕುಟುಂಬಗಳಿಗೆ ವಸತಿಗೆ ಸ್ಥಳವಿದ್ದು, ಆದರೆ ಬದುಕನ್ನು ನಡೆಸಿಕೊಂಡು ಹೋಗಲು ಹಣ ಇರುವುದಿಲ್ಲ. ಕೆಲವೊಂದು ರಾಜ್ಯ ಸರ್ಕಾರಗಳು ಇಂಥ ಕುಟುಂಬಗಳಿಗೆ ನೇರ ಸೌಲಭ್ಯ ವರ್ಗಾವಣೆ (ಡಿಟಿಬಿ)ಯ ಮೂಲಕ ಒಂದಷ್ಟು ಸವಲತ್ತುಗಳನ್ನು ತಲುಪಿಸುತ್ತಿವೆ. ಆದರೆ ಇಂತಹ ನೆರವು ಅನೇಕ ಕಾರಣಗಳಿಂದಾಗಿ ದೊರೆಯದಿರುವ ಕುಟುಂಬಗಳು ದೊಡ್ಡ ಸಂಖ್ಯೆಯಲ್ಲಿಯೇ ಇರುತ್ತವೆ. ಆದ್ದರಿಂದ ದಿನಸಿಯನ್ನು ಸರಬರಾಜು ಮಾಡುವುದರೊಂದಿಗೆ, ಅವರು ತಮ್ಮ ಅವಶ್ಯಕತೆಗಳನ್ನು ಪಡೆದುಕೊಳ್ಳುವಂತೆ ಅವರ ಘನತೆಯನ್ನೂ ಸಾಮರ್ಥ್ಯವನ್ನೂ ಕಾಪಾಡಲು ಹಣಕಾಸಿನ ಬೆಂಬಲವನ್ನು ಒದಗಿಸಬೇಕಾಗುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

ಇಂಥ ಬೆಂಬಲದ ಅವಶ್ಯಕತೆ ಇರುವ ವಲಸಿಗ ಕುಟುಂಬಗಳನ್ನು ಗುರುತಿಸುವುದು ಮತ್ತು ಅವರ ಕುರಿತಾದ ದತ್ತಾಂಶ ಸಂಚಯವನ್ನು ಸಿದ್ಧಪಡಿಸುವುದು, ಈ ಕೆಲಸಗಳಲ್ಲಿ ಸರ್ಕಾರಕ್ಕೆ ನೆರವು ನೀಡುವುದು.

**7.1.4.4 ಸಂಕಷ್ಟದಲ್ಲಿರುವವರಿಗೆ ಮತ್ತು ಅಗತ್ಯವಿರುವವರಿಗೆ ಮಾನಸಿಕ–ಸಾಮಾಜಿಕ ಬೆಂಬಲ:**
**ಆದ್ಯತೆ: ಆ ನಂತರದ್ದು**

- ಇಂಥ ಒಂದು ವಿಶ್ವವ್ಯಾಧಿಯು ಬಹಳಷ್ಟು ಮಾನಸಿಕ ಒತ್ತಡ, ಆತಂಕ ಹಾಗೂ ಖಿನ್ನತೆಯನ್ನು ಸೃಷ್ಟಿಸುತ್ತದೆ. ಇದರಿಂದಾಗಿ ಅವರು ತಮ್ಮ ಮಾಮೂಲಿ ಬದುಕಿಗೆ ಹಿಂತಿರುಗಲು ಅಡತಡೆಗಳು ಉಂಟಾಗುತ್ತವೆ. ಆದ್ದರಿಂದ ಮಾನಸಿಕ–ಸಾಮಾಜಿಕ ಬೆಂಬಲವನ್ನು ಒದಗಿಸಲು ತರಬೇತಿಹೊಂದಿದ ಸಮಾಲೋಚಕರಿಂದ ಆಪ್ತಸಮಾಲೋಚನೆಯನ್ನು ಏರ್ಪಡಿಸಬೇಕಾಗುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಅಂತಹ ಬೆಂಬಲ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಸರ್ಕಾರಕ್ಕೆ ನೆರವಾಗುವುದು.
- ಅಂತಹ ಸೇವೆಯನ್ನು ವೃತ್ತಿನಿರತರೊಂದಿಗೆ ನಡೆಸಲು ಸರ್ಕಾರಕ್ಕೆ ಬೆಂಬಲ ನೀಡುವುದು.

## 7.1.5 ನಗರದ ಬಡವರು:

ಭಾರತದಾದ್ಯಂತ ನಗರದಲ್ಲಿ ಮನೆಗಳಿಲ್ಲದೆ ಇರುವವರು ಮತ್ತು ಅನೌಪಚಾರಿಕ ವಸತಿ ಪ್ರದೇಶಗಳಲ್ಲಿ ಇರುವ ಲಕ್ಷಗಟ್ಟಲೆ ಜನರು ತಮ್ಮ ಅತ್ಯಂತ ದುರ್ಭರವಾದ ಬದುಕಿನ ಸನ್ನಿವೇಶದಿಂದಾಗಿಯೇ ಸೋಂಕಿನ ಅಪಾಯಕ್ಕೆ ತುತ್ತಾಗುವಂತಿದ್ದಾರೆ. ವಸತಿ ಪ್ರದೇಶಗಳಲ್ಲಿ ಇರುವ ವಿಪರೀತ ಜನದಟ್ಟಣೆ, ಗಾಳಿ ಓಡಾಡಲು ಕಿಟಕಿಗಳೇ ಇಲ್ಲದ ಕೊಠಡಿಗಳು ಮತ್ತು ಶುಚಿತ್ವವೇ ಇಲ್ಲದ ಸೌಲಭ್ಯಗಳು ಇವೆಲ್ಲಾ ಸೇರಿ ನಗರದ ಬಡವರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ. ಲಾಕ್‌ಡೌನ್ ಅವಧಿಯಲ್ಲಿನ ಉದ್ಯೋಗ ನಷ್ಟ ಮತ್ತು ಇಂತಹ ಕೊಳೆಗೇರಿಗಳಿಂದ ಬರುವ ಬಹುತೇಕ ಕಾರ್ಮಿಕರು ಅನೌಪಚಾರಿಕ, ದಿನಗೂಲಿಯ ಕೂಲಿಗಾರರಾಗಿರುವುದು ಅವರ ಬದುಕಿನ ಮೇಲೆ ದೊಡ್ಡ ಪೆಟ್ಟು ನೀಡಿ ಇನ್ನಷ್ಟು ಸಂಕಟಗಳನ್ನು ಸೃಷ್ಟಿಸುತ್ತಿದೆ.

**ಪ್ರಮುಖ ಅಂಶಗಳು:**

- ಬಹುತೇಕ ಜನರಿಗೆ ತಾತ್ಕಾಲಿಕ ಉದ್ಯೋಗವಾಗಲಿ, ದಿನಗೂಲಿ ಕೆಲಸವಾಗಲಿ ಸಿಕ್ಕಿರುವುದಿಲ್ಲ.
- ಲಾಕ್‌ಡೌನ್‌ನಿಂದಾಗಿ ನಷ್ಟವಾಗಿರುವ ದಿನಗಳ ಸಂಬಳವನ್ನು ಮಾಲೀಕರು ಕೊಡಲಾರರು.
- ನೀರಿನ ಮೂಲ, ಸ್ಥಳೀಯ ಅಂಗಡಿ ಮುಗ್ಗಟ್ಟುಗಳು ಮತ್ತು ಸಾಮುದಾಯಿಕ ಶೌಚಾಲಯಗಳು ಇಂಥ ಸಾಮಾನ್ಯ ಬಳಕೆಯ ಸ್ಥಳಗಳಲ್ಲಿ ಭೌತಿಕ ಅಂತರವನ್ನು ಕಾಪಾಡಿಕೊಳ್ಳುವುದು ಕಷ್ಟ.
- ಇಂಥ ಕೊಳೆಗೇರಿಗಳಲ್ಲಿ, ಜನನಿಬಿಡ ಪ್ರದೇಶಗಳಲ್ಲಿ ಮಕ್ಕಳಿಗೆ ಸುರಕ್ಷಿತ ಸಾಮಗ್ರಿಗಳಾಗಲೀ, ಸುರಕ್ಷಿತ ಸ್ಥಳಗಳಾಗಲೀ ಸಿಗುವುದಿಲ್ಲ.
- ಬಳಕೆ ವಸ್ತುಗಳ ಬೆಲೆ ಏರುತ್ತದೆ ಮತ್ತು ಮೂಲಭೂತ ಪೌಷ್ಟಿಕ ಆಹಾರ ದೊರಕುವುದಿಲ್ಲ.

ಇಂಥ ಅಭೂತಪೂರ್ವ ಪರಿಸ್ಥಿತಿಯಲ್ಲಿ ಕೆಳಗಿನ ಮುಖ್ಯ ಕ್ರಮಗಳು ಉಪಯುಕ್ತವಾಗುತ್ತವೆ.

### 7.1.5.1 ಪ್ಯಾಕ್ ಮಾಡಿದ ದವಸಧಾನ್ಯ.:

**ಆದ್ಯತೆ: ತತ್‌ಕ್ಷಣದ್ದು.**

ಬಹುತೇಕ ಕುಟುಂಬಗಳು ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುತ್ತಿರುವುದರಿಂದ ದವಸಧಾನ್ಯಗಳನ್ನು (ಅನುಬಂಧ ಬಿ–1ನ್ನು ನೋಡಿ) ಪೊಟ್ಟಣದಲ್ಲಿ ಕಟ್ಟಿ, ಸಮುದಾಯದಿಂದ ಬಂದ ಸ್ವಯಂ ಸೇವಕರನ್ನು ಉಪಯೋಗಿಸಿಕೊಂಡು ಸರಬರಾಜನ್ನು ಆರಂಭಿಸಬಹುದು.

**ನಾಗರಿಕ ಸಮಾಜದ ಸಂಘಟನೆಗಳು ನೆರವಾಗಬಹುದಾದ ಕ್ಷೇತ್ರಗಳು:**

- ಅಶಕ್ತ ಕುಟುಂಬಗಳಿಗೆ ಆಹಾರ ಸಿಗುವಂತೆ ಮಾಡುವ ಯೋಜನೆಗಳನ್ನು ಸಿದ್ಧಪಡಿಸಲು ನಗರ ಸ್ಥಳೀಯ ಸಂಸ್ಥೆಗಳಿಗೂ ಸರ್ಕಾರಕ್ಕೂ ನೆರವು ನೀಡುವುದು.
- ಸ್ಫಿಯರ್ ಇಂಡಿಯಾ ಸಂಸ್ಥೆಯು ನಿಗದಿಪಡಿಸಿರುವ ನಿಯಮಕ್ಕನುಗುಣವಾಗಿ ಆಹಾರ ತಯಾರಿಕಾ ಕಿಟ್‌ಗಳನ್ನು ಹೊಂದಿಸಿಕೊಳ್ಳುವುದು, ತಯಾರಿಸುವುದು ಮತ್ತು ವಿತರಿಸುವುದರಲ್ಲಿ ಬೆಂಬಲ ನೀಡುವುದು.
- ಈ ಕೆಲಸಕಾರ್ಯಗಳಿಗೆ ಸಮುದಾಯದಿಂದಲೇ ಸ್ವಯಂಸೇವಕರನ್ನು ಸೇರಿಸಿಕೊಳ್ಳುವುದು.

### 7.1.5.2 ಆಹಾರೇತರ ಅವಶ್ಯಕ ವಸ್ತುಗಳು:

**ಆದ್ಯತೆ: ತತ್‌ಕ್ಷಣದ್ದು**

ಪ್ರತಿಯೊಂದು ಕುಟುಂಬಕ್ಕೂ ಒಂದು ಮೂಲಾಧಾರ ಶೌಚದ ಕಿಟ್ ಅನ್ನು ಸರಬರಾಜು ಮಾಡುವುದು ತುಂಬಾ ಮುಖ್ಯವಾದದ್ದು, ಏಕೆಂದರೆ ಅನೇಕ ಕುಟುಂಬಗಳಿಗೆ ತಾವಾಗಿಯೇ ಅದನ್ನು ಪಡೆದುಕೊಳ್ಳುವುದು ಸಾಧ್ಯವಾಗಿರುವುದಿಲ್ಲ. (ನೋಡಿ ಅನುಬಂಧ ಬಿ–2)

### 7.1.5.3 ವೈದ್ಯಕೀಯ ಬೆಂಬಲ:

**ಆದ್ಯತೆ: ತತ್‌ಕ್ಷಣದ್ದು**

ಸರಿಯಾದ ಆಹಾರ ಹಾಗೂ ಔಷಧವಿಲ್ಲದೆ ಅನೇಕ ನಗರ ಪ್ರದೇಶದ ಕೊಳಗೇರಿಗಳು ಆರೋಗ್ಯದ ದೃಷ್ಟಿಯಿಂದ ಈಗಾಗಲೇ ಕಷ್ಟದಲ್ಲಿವೆ. ಆದ್ದರಿಂದ ಕೋವಿಡ್–19 ಅಲ್ಲದೆ ಬೇರೆಯ ತುರ್ತು ಪ್ರಕರಣಗಳೂ ಇರುತ್ತವೆ. ಅವುಗಳಿಗೆ ತುರ್ತು ಸಹಾಯದ ಅವಶ್ಯಕತೆ ಇರುತ್ತದೆ. ಇಂಥ

ಸಂದರ್ಭದಲ್ಲಿ ಮೂಲಭೂತ ವೈದ್ಯಕೀಯ ಸಲಹೆ ಮತ್ತು ಲಭ್ಯವಿದ್ದೆಡೆ ಟೆಲಿಮೆಡಿಸಿನ್ (ಆಂತರ್ಜಾಲದ ಮೂಲಕ ಸಿಗುವ ವೈದ್ಯಕೀಯ ಸಲಹೆ) ನೆರವು ಅಗತ್ಯವಿರುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಸ್ಥಳೀಯ ಆರೋಗ್ಯ ಇಲಾಖೆಯೊಂದಿಗೆ ಸಮನ್ವಯ ಸಂಪರ್ಕ.
- ಬಡಾವಣೆಯಲ್ಲಿ ಅಂಥ ಪ್ರಕರಣಗಳನ್ನು ಗುರುತಿಸಲು ಸ್ವಯಂಸೇವಕರನ್ನು ಸಂಘಟಿಸುವುದು.

### *7.1.5.4* ನಗರದ ಬಡವರಲ್ಲಿ ಜಾಗೃತಿಯನ್ನು ಮೂಡಿಸುವುದು:

**ಆದ್ಯತೆ: ತತ್‌ಕ್ಷಣದ್ದು**

ಇಂಥದೊಂದು ವಿಸ್ತಾರವಾಗಿ ಹರಡಿರುವ ಬಿಕ್ಕಟ್ಟಿನಲ್ಲಿ ಸರಿಯಾದ ಮಾಹಿತಿಯನ್ನು ಹಂಚಿಕೊಳ್ಳುವುದು ಮತ್ತು ಹಾದಿತಪ್ಪಿಸುವ ವದಂತಿಗಳನ್ನು ದೂರವಿಡುವುದು ಮುಖ್ಯ ಸಂಗತಿಯಾಗುತ್ತದೆ. ಅಂತಹ ಜಾಗೃತಿ ಅಭಿಯಾನವು ಜನತೆಗೆ ತಿಳಿವಳಿಕೆಯನ್ನು ನೀಡುತ್ತದೆ ಮತ್ತು ಒಂದು ರೀತಿಯ ಪ್ರಶಾಂತತೆಯನ್ನು ಹರಡುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವಾಗಬಹುದಾದ ಕ್ಷೇತ್ರಗಳು:**

- ಸಂವಹನ/ಜಾಗೃತಿ ಉಂಟು ಮಾಡುವ ಯೋಜನೆಯನ್ನು ಸಿದ್ಧಪಡಿಸುವಲ್ಲಿ ಸರ್ಕಾರಕ್ಕೆ ನೆರವಾಗುವುದು.
- ಸಾಮೂಹಿಕ ವಿತರಣೆಗಾಗಿ ಡಿಜಿಟಲ್ ಸ್ವರೂಪವೂ ಸೇರಿದಂತೆ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಸಾಮಗ್ರಿಗಳನ್ನು ಸಿದ್ಧಪಡಿಸುವಲ್ಲಿ ತಾಂತ್ರಿಕ ನೆರವನ್ನು ನೀಡುವುದು.
- ಯೋಜನೆಯ ಅನುಷ್ಠಾನದಲ್ಲಿ ಮುಂದಾಳತ್ವ ವಹಿಸುವುದು.
- ಸ್ಥಳೀಯ ನಗರಾಡಳಿತ/ಜಿಲ್ಲಾ ಪ್ರತಿಸ್ಪಂದನಾ ತಂಡಕ್ಕೆ ಬೆಂಬಲ ಒದಗಿಸುವುದು.

### *7.1.5.5* ಅನುಮತಿ ಇರುವಲ್ಲಿ ಬೇಯಿಸಿದ ಆಹಾರ ಸೌಲಭ್ಯವನ್ನು ಒದಗಿಸುವುದು:

**ಆದ್ಯತೆ: ತತ್‌ಕ್ಷಣದ್ದು**

ಸಾಮುದಾಯಿಕ ಅಡುಗೆ ಕೋಣೆ, ಕ್ಯಾಂಟೀನ್‌ಗಳನ್ನು ಸರ್ಕಾರದ ಪೂರ್ವಾನುಮತಿಯೊಂದಿಗೇ ಮಾಡಬೇಕು ಮತ್ತು ಅಲ್ಲಿ ಭೌತಿಕ ಅಂತರದ ನಿಯಮಗಳನ್ನು ಪಾಲಿಸಬೇಕು. ಆಯಾ ಸಂದರ್ಭದಲ್ಲಿ ಜಾರಿಯಿರುವ ಸರ್ಕಾರದ ಸಲಹೆ–ಸೂಚನೆಗಳನ್ನು/ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಲಾಗುವುದು ಎಂಬುದನ್ನು ಖಚಿತಪಡಿಸಬೇಕು.

ನಗರ ಪ್ರದೇಶದ ಕೊಳೆಗೇರಿಗಳಲ್ಲಿ ಇರುವ ದುಡಿಯುವ ಜನರ ಕಾರ್ಯಪಡೆಯು ಅನೌಪಚಾರಿಕ ವಲಯಕ್ಕೆ ಸೇರಿದ್ದು, ಅವರಲ್ಲಿ ಅನೇಕರಿಗೆ ಈಗ ಕೆಲಸ ಇಲ್ಲ. ಅವರು ಯಾವ ಉದ್ಯೋಗವೂ ಇಲ್ಲದೆ ನಗರಗಳಲ್ಲಿ ಸಿಲುಕಿಕೊಂಡಿದ್ದಾರೆ. ಅಂಥವರಿಗೆ ಆಹಾರ ಮತ್ತು ವಸತಿ ಅಗತ್ಯವಾಗಿದೆ. ಅವರಿಗೆ ಈ ಕೂಡಲೇ ಆಹಾರ ಒದಗಿಸಲು ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಓ) ಸಾಮುದಾಯಿಕ ಅಡಿಗೆ ಶಾಲೆಗಳನ್ನು ನಡೆಸಬಹುದು. (ತಮಿಳುನಾಡಿನ 'ಅಮ್ಮಾ' ಕ್ಯಾಂಟೀನ್, ಕರ್ನಾಟಕದ 'ಇಂದಿರಾ ಕ್ಯಾಂಟೀನ್', ಒರಿಸ್ಸಾ, ಜಾರ್‌ಖಂಡ್ ಮತ್ತು ಛತ್ತೀಸ್‌ಘರ್‌ನ 'ದಾಲ್–ಭಾತ್ ಕೇಂದ್ರ' ಗಳು ಮತ್ತು ಕೇರಳದ 'ಕುಡುಂಬಶ್ರೀ' ಮಾದರಿಯಲ್ಲಿ). ಇದನ್ನು ಒಂದು ಸಮುದಾಯ ತಾನೇ ನಡೆಸಿಕೊಂಡು ಹೋಗಬಹುದು. ಇದು ಅವರಿಗೆ ಒಂದು ಆದಾಯದ ದಾರಿಯನ್ನೂ ತೋರಿಸಬಹುದು.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಯಾವುದೇ ಒಂದು ಸ್ಥಳೀಯ ಪ್ರದೇಶದಲ್ಲಿ ಅಂಥ ಸೌಲಭ್ಯವನ್ನು ಸ್ಥಾಪಿಸಲು ಸರ್ಕಾರಕ್ಕೆ ನೆರವು ನೀಡುವುದು.
- ಆ ಸೌಲಭ್ಯವನ್ನು ನಡೆಸಲು ಹಾಗೂ ಆಹಾರವನ್ನು ವಿತರಿಸಲು ಸ್ವಯಂಸೇವಕರನ್ನು ಸೇರಿಸಿಕೊಳ್ಳುವುದು.
- ಯಾವುದೇ ಗೊಂದಲವಿಲ್ಲದೆ, ಕುಟುಂಬಗಳು ಬೇಯಿಸಿದ ಆಹಾರವನ್ನು ಪಡೆಯಲು ಪ್ರಕ್ರಿಯೆಯನ್ನು ಸೃಷ್ಟಿಸುವುದು.
- ಭೌತಿಕ ಅಂತರವನ್ನು ಜನತೆ ಕಾಯ್ದುಕೊಳ್ಳುವಂತೆ ನೋಡಿಕೊಳ್ಳುವುದು.

### 7.1.5.6 ಸ್ಥಳೀಯ ಮತ್ತು ತತ್‌ಕ್ಷಣದ ಉದ್ಯೋಗ ಅವಕಾಶಗಳು:

**ಆದ್ಯತೆ: ಆ ನಂತರದ್ದು**

ಈ ಕಾಲಾವಧಿಯಲ್ಲಿ ನಗರ ಪ್ರದೇಶದ ಕೊಳೇಗೇರಿಗಳ ಬಹುತೇಕ ಕುಟುಂಬಗಳ ಸದಸ್ಯರು, ಅವರು ಇಲ್ಲಿಯವರೆಗೂ ಅನೌಪಚಾರಿಕ ಕ್ಷೇತ್ರದಲ್ಲೇ ತೊಡಗಿಕೊಂಡದ್ದರಿಂದ ಈಗ ನಿರುದ್ಯೋಗಿಗಳಾಗಿರುತ್ತಾರೆ. ಇದರಿಂದ ಅವರಿಗೆ ಒಂದೆಡೆ ಜೀವನೋಪಾಯ ಕಷ್ಟವಾಗುತ್ತದೆ ಮತ್ತು ಇನ್ನೊಂದೆಡೆ ಅವರುಗಳು ಯಾರೊಂದಿಗೂ ಹೆಚ್ಚಾಗಿ ಬೆರೆಯಬಾರದ್ದಾಗಿರುವುದರಿಂದ ಅವರಿಗೆ ಅರ್ಥಪೂರ್ಣ ಚಟುವಟಿಕೆಗಳೇ ಇರುವುದಿಲ್ಲ. ಆದ್ದರಿಂದ ಅವರಿಗೂ ಒಂದಷ್ಟು ಆದಾಯ ಸಿಗುವಂತೆ ಮತ್ತು ಈಗ ತುರ್ತಾಗಿ ಅಗತ್ಯವಿರುವ ಕೆಲವೊಂದು ಪದಾರ್ಥಗಳು ತಯಾರಾಗುವಂತೆ ಅವರಿಗೆ ಒಂದಿಷ್ಟು ಔದ್ಯೋಗಿಕ ಚಟುವಟಿಕೆಗಳನ್ನು ಸೃಷ್ಟಿಸುವುದು ಅಗತ್ಯ. ಯಾವ ಸರ್ಕಾರಿ ಯೋಜನೆಗಳನ್ನು ಈ ದಿಶೆಯಲ್ಲಿ ಉಪಯೋಗಿಸಿಕೊಳ್ಳಬಹುದು ಎಂಬ ಬಗ್ಗೆ ಅನುಬಂಧ ಬಿ–6 ರಲ್ಲಿ ಹೆಚ್ಚುವರಿ ಮಾಹಿತಿ ಇದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಈಗ ಎಲ್ಲೆಡೆ ಅಗತ್ಯವಿರುವ ಮಾಸ್ಕ್ ಇತ್ಯಾದಿಗಳನ್ನು ತಯಾರಿಸಲು ಜನರಿಗೆ ತರಬೇತಿ ನೀಡುವಲ್ಲಿ ಬೆಂಬಲ ನೀಡುವುದು, ಭಾಗವಹಿಸುವುದು.
- ಈ ಸಾಮಗ್ರಿಗಳನ್ನು ಮಾರಾಟ ಮಾಡಲು ಅಗತ್ಯವಾದ ಮಾರುಕಟ್ಟೆ ಸಂಪರ್ಕವನ್ನು ಸೃಷ್ಟಿಸಲು ಬೆಂಬಲ ನೀಡುವುದು.

### 7.1.6 ವಿಶಾಲ ಹಳ್ಳಿ ಪ್ರದೇಶ:

ವಿಶ್ವವ್ಯಾಧಿಯಂತಹ ಸಂದರ್ಭಗಳಲ್ಲಿ ಎಲ್ಲ ಹಳ್ಳಿಗಳೂ ಸಂಕಷ್ಟದ ಪರಿಸ್ಥಿತಿಗಳನ್ನು ಎದುರಿಸುತ್ತವೆ. ಇಡೀ ಸಮುದಾಯಕ್ಕೇ ಸಾಮಾನ್ಯವಾಗಿಯೂ ಮತ್ತು ಅಶಕ್ತ ಕುಟುಂಬಗಳಿಗೆ ವಿಶೇಷವಾಗಿಯೂ ಇದು ದುರ್ಭರ ಸಂದರ್ಭ. ಆಗ ಉದ್ಭವಿಸುವ ಪ್ರಮುಖ ಪ್ರಶ್ನೆಗಳೆಂದರೆ:

- ಆಹಾರದ ಕೊರತೆ ಅದರಲ್ಲೂ ಬೇಸಿಗೆಯಲ್ಲಿ ನೀರಿನಂತಹ ಅವಶ್ಯಕತೆಗಳ ಅಭಾವ.
- ಆರೋಗ್ಯ ಸೇವೆಯು ಕೈಗೆಟುಕದಿರುವುದರಿಂದ ಉಂಟಾಗುವ ತೊಂದರೆಗಳು.
- ಗ್ರಾಮೀಣ ಪ್ರದೇಶದಲ್ಲಿ ನುರಿತ ಆರೋಗ್ಯ ಸಿಬ್ಬಂದಿ/ವೈದ್ಯರು ಇಲ್ಲದಿರುವುದು.
- ಅಶಕ್ತರು, ಬಡವರು, ಅನಾಥರು, ಭೂರಹಿತ ಕೃಷಿಕಾರ್ಮಿಕರು, ಒಬ್ಬಂಟಿ ಹೆಂಗಸರು ಮುಂತಾದವರಿಗೆ ಸಾಮಾಜಿಕ ಬೆಂಬಲ ವ್ಯವಸ್ಥೆಯನ್ನು ಮಾಡಬೇಕಾದದ್ದು.
- ಅಂಗನವಾಡಿಗಳು ಮತ್ತು ಶಾಲೆಗಳನ್ನು ಮುಚ್ಚುವುದರಿಂದ ಮಕ್ಕಳಿಗೆ ಪೌಷ್ಟಿಕಾಂಶ/ಆಹಾರ ದೊರೆಯದಿರುವುದು. (ಅಲ್ಲಿ ಮನೆಗೆ ವಿತರಿಸುವ ಪಡಿತರ, ಅಂಗನವಾಡಿಯಲ್ಲಿ ದೊರೆಯುವ ಬಿಸಿಯಾದ ಆಹಾರ, ಶಾಲೆಗಳಲ್ಲಿನ ಮಧ್ಯಾಹ್ನದ ಬಿಸಿಊಟ ಇತ್ಯಾದಿ ನಿಂತು ಹೋಗಿರುತ್ತದೆ)

ಇಂತಹ ಸಂದರ್ಭದಲ್ಲಿ ನೆರವಾಗುವ ತುರ್ತುಕ್ರಮಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

#### 7.1.6.1 ಅಶಕ್ತ ಕುಟುಂಬಗಳ ಕುರಿತಾದ ದತ್ತಾಂಶ ಸಂಚಯ:

**ಆದ್ಯತೆ: ತತ್‌ಕ್ಷಣ**

ಆಹಾರದ ಅಭದ್ರತೆ ಇರುವ ಅಶಕ್ತ ಕುಟುಂಬಗಳ ಹಾಗೂ ವ್ಯಕ್ತಿಗಳ ಕುರಿತಾದ ದತ್ತಾಂಶ ಸಂಚಯ ನಾವು ತೆಗೆದುಕೊಳ್ಳಬೇಕಾದ ಮೊದಲನೆಯ ತುರ್ತುಕ್ರಮ. ಮಕ್ಕಳು, ವೃದ್ಧರು, ಒಬ್ಬಂಟಿ ಹೆಂಗಸರು, ಅಂಗವಿಕಲರು ಇವರೆಲ್ಲರ ಬಗ್ಗೆ ದತ್ತಾಂಶ ಸಂಚಯವನ್ನು ಸೃಷ್ಟಿಸುವಾಗ ಗಮನ ಇಡಬೇಕು. ಇಂಥ ದತ್ತಾಂಶ ಸಂಚಯವನ್ನು ಮಾಡುವಾಗ ಪಂಚಾಯತಿ ರಾಜ್ ಸದಸ್ಯರು ಮುಖ್ಯ ಪಾತ್ರ ವಹಿಸುತ್ತಾರೆ ಮತ್ತು ಅಶಕ್ತ ಕುಟುಂಬಗಳ ಬಗ್ಗೆ ದೃಢೀಕರಿಸಬಲ್ಲ ಅಧಿಕಾರ ಅವರಿಗಿರುತ್ತದೆ. ಅಂಥವರಿಗೆ ಅತ್ಯವಶ್ಯಕವಾದ ಬೆಂಬಲವನ್ನು ಒದಗಿಸುವಲ್ಲಿ ಅಧಿಕಾರಶಾಹಿಯ ಎಲ್ಲ ಹಂತಗಳಲ್ಲೂ ಈ ದತ್ತಾಂಶ ಸಂಚಯ ನೆರವಾಗುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಅಶಕ್ತರು ಯಾರು ಎಂದು ಗುರುತಿಸಲು ಮಾನದಂಡಗಳನ್ನು ರೂಪಿಸಲು ಪಂಚಾಯತಿ/ಬ್ಲಾಕ್‌ಗೆ ಬೆಂಬಲ ನೀಡುವುದು.

- ಅಂಗೀಕೃತವಾದ ಅಶಕ್ತರ ಗುರುತಿಸುವಿಕೆ ಮಾನದಂಡವನ್ನು ಆಧರಿಸಿ ದತ್ತಾಂಶ ಸಂಚಯವನ್ನು ಸೃಷ್ಟಿಸಲು ಪಂಚಾಯತಿ/ಬ್ಲಾಕ್‌ಗೆ ಬೆಂಬಲ ನೀಡುವುದು.

**7.1.6.2 ಶಾಲೆ/ ಅಂಗನವಾಡಿಯ ಮೂಲಕ ದವಸಧಾನ್ಯ ವಿತರಣೆ:**

**ಆದ್ಯತೆ: ತತ್‌ಕ್ಷಣದ್ದು**

ಕೋವಿಡ್–19 ವಿಶ್ವವ್ಯಾಧಿಯಿಂದಾಗಿ ಸರ್ಕಾರವು ದೀರ್ಘಕಾಲ ಶಾಲೆಗಳನ್ನು ಮತ್ತು ಅಂಗನವಾಡಿಗಳನ್ನು ಮುಚ್ಚಬೇಕಾಗಿ ಬಂದಿದೆ. ಶಾಲೆಗಳಲ್ಲಿ ನೀಡುವ ಪಡಿತರ, ಅಂಗನವಾಡಿಯಲ್ಲಿ ಸಿಗುವ ಬೇಯಿಸಿದ ಅಡುಗೆ ಮತ್ತು ಶಾಲೆಗಳಲ್ಲಿ ದೊರೆಯುತ್ತಿದ್ದ ಮಧ್ಯಾಹ್ನದ ಬಿಸಿಊಟ ಇವುಗಳೆಲ್ಲಾ ಸೇರಿ ಯಾವುದೇ ಮಗುವಿನ ದೈನಂದಿನ ಆಹಾರದ ದೊಡ್ಡಭಾಗಕ್ಕೆ ಒಂದು ದಾರಿಯಾಗಿತ್ತು. ಶಾಲೆಗಳು ಮತ್ತು ಅಂಗನವಾಡಿಗಳನ್ನು (ಎಡ್ಬ್ಲ್ಯುಸಿ) ದೀರ್ಘಕಾಲ ಮುಚ್ಚಿರುವುದರಿಂದ ಮಕ್ಕಳ ಆಹಾರ ಸೇವನೆಗೇ ಖೋತಾ ಬಿದ್ದಿದೆ. ಆದ್ದರಿಂದ ಅನೇಕ ಸರ್ಕಾರಗಳು ಶಾಲೆ ಮತ್ತು ಅಂಗನವಾಡಿಯಲ್ಲಿ ದವಸಧಾನ್ಯಗಳನ್ನು ನೀಡಲು ನಿರ್ಧರಿಸಿವೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಗ್ರಾಮೀಣ ಸಮುದಾಯದಲ್ಲಿ ಸರ್ಕಾರದ ನಿರ್ಧಾರಗಳ ಕುರಿತು ಅರಿವು ಮೂಡಿಸುವುದು.
- ಅವು ಹೇಗೆ ಜಾರಿಯಾಗುತ್ತಿವೆ ಎಂಬುದರ ಕುರಿತು ಜನತೆಯಿಂದ ಅಭಿಪ್ರಾಯ ಸಂಗ್ರಹಿಸುವುದು.
- ಜಾರಿಯಾಗುವುದರಲ್ಲಿ ಲೋಪವಿದ್ದರೆ, ಅದನ್ನು ಸರಿಪಡಿಸಿ ದವಸಧಾನ್ಯದ ವಿತರಣೆಯನ್ನು ಪೂರೈಸಲು ಶಿಕ್ಷಕರೊಂದಿಗೆ, ಅಂಗನವಾಡಿ ಕಾರ್ಯಕರ್ತೆಯೊಂದಿಗೆ ಸಮನ್ವಯ ಸಾಧಿಸುವುದು.
- ಜಾರಿಯಲ್ಲಿರುವ ಲೋಪದೋಷಗಳನ್ನು ಪಂಚಾಯತಿ/ತಾಲೂಕು/ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತರುವುದು.
- ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರ ಸಹಾಯದಿಂದ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳಿಗೆ ಸೂಕ್ತ ಗಮನ ನೀಡಲು ಕಾರ್ಯತಂತ್ರವನ್ನು ರೂಪಿಸುವುದು.

**7.1.6.3 ಸಾರ್ವಜನಿಕ ಪಡಿತರ ವಿತರಣಾ ಸೇವೆಯ ಮೇಲೆ ಸಮುದಾಯದ ಮೇಲ್ವಿಚಾರಣೆ:**

**ಆದ್ಯತೆ: ತತ್‌ಕ್ಷಣದ್ದು**

ಪಡಿತರ ವಿತರಣಾ ವ್ಯವಸ್ಥೆಯು (ಪಿಡಿಎಸ್) ಹಳ್ಳಿಯಲ್ಲಿನ ಅಶಕ್ತ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಖಚಿತ ಪಡಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಕೋವಿಡ್–19 ವಿಶ್ವವ್ಯಾಧಿಯಿಂದಾಗುತ್ತಿರುವ ಮಾನವೀಯ ಪರಿಣಾಮಗಳನ್ನು ನಿಭಾಯಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಲ್ಯಾಣ ಯೋಜನೆಗಳ ಭಾಗವಾಗಿ ಪಡಿತರ ವ್ಯವಸ್ಥೆಗೆ (ಪಿಡಿಎಸ್) ಸಂಬಂಧಿಸಿದ ಅನೇಕ ವಿಶೇಷ ಕ್ರಮಗಳನ್ನು ಘೋಷಿಸಿವೆ. ಆದರೆ ಇವುಗಳನ್ನು ಜಾರಿಗೊಳಿಸುವಲ್ಲಿ ಕೆಲವೊಂದು ಲೋಪಗಳು ಕಂಡು ಬರಬಹುದು. ಆದ್ದರಿಂದ ಪಡಿತರ ವ್ಯವಸ್ಥೆಯ ಅನುಷ್ಠಾನದ ಮೇಲೆ ಸಮುದಾಯವೇ ನಿಗಾವಹಿಸುವುದು ಅಗತ್ಯ. ಸ್ಥಳೀಯ ಸ್ವಯಂಸೇವಾಸಂಘಟನೆಗಳ (ಎನ್‌ಜಿಒ) ಕಾರ್ಯಕರ್ತರು/ಯುವಕ ಸಂಘಗಳು/ಸ್ವಸಹಾಯ ಗುಂಪುಗಳು/ ರೈತ ಸಂಘಗಳು ಇವರುಗಳ ನೆರವು ಪಡೆದು ಗ್ರಾಮ/ ಪಂಚಾಯತಿ ಮಟ್ಟದಲ್ಲಿ ಪಿಡಿಎಸ್ ಕಾರ್ಯವೈಖರಿಯ ಬಗ್ಗೆ ನಿಗಾ ಇರಿಸಿ, ಅಶಕ್ತ ಕುಟುಂಬಗಳಿಗೆ ರೇಷನ್ ಪಡಿತರವು ದೊರಕುವಂತೆ ನೋಡಿಕೊಳ್ಳಬೇಕು. ಅಲ್ಲದೆ ವಿತರಣೆ, ಮನೆಬಾಗಿಲಿಗೆ ರೇಷನ್ ತಲುಪಿಸುವುದು ಈ ಕ್ರಮಗಳಿಗೆ ವಾಸ್ತವದಲ್ಲಿ ಎಲ್ಲಿ, ಯಾವಾಗ ಅಡಚಣೆಯುಂಟಾಗುತ್ತಿದೆ ಎಂಬುದನ್ನು ಸರ್ಕಾರಿ ಇಲಾಖೆಗಳಿಗೆ ವರದಿ ಮಾಡಲು ಸಂಪರ್ಕವನ್ನು ಏರ್ಪಡಿಸಬೇಕಾಗುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ರೇಷನ್ ಪಡಿತರ ವಿತರಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಸರ್ಕಾರದ ನಿರ್ಧಾರಗಳ ಕುರಿತು ಗ್ರಾಮೀಣ ಸಮುದಾಯದಲ್ಲಿ ಅರಿವು ಮೂಡಿಸುವುದು [ಇದು ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನವಾಗಿರುತ್ತದೆ. ಆದ್ದರಿಂದ ಎನ್‌ಜಿಒಗಳು ನಿರ್ದಿಷ್ಟ ರಾಜ್ಯದ ಪಿಡಿಎಸ್ ವೆಬ್‌ಸೈಟ್ (ಜಾಲತಾಣ) ಅನ್ನು ನೋಡಬೇಕು]
- ಅದು ಜಾರಿಯಾಗುತ್ತಿರುವ ಬಗ್ಗೆ ಸಮುದಾಯದ ಅಭಿಪ್ರಾಯವನ್ನು ಸಂಗ್ರಹಿಸುವುದು.
- ಅನುಷ್ಠಾನದಲ್ಲಿ ಯಾವುದೇ ದೋಷವಿದ್ದರೆ, ಪಿಡಿಎಸ್ (ರೇಷನ್) ವಿತರಕರನ್ನು ಸಂಪರ್ಕಿಸಿ ಬಿಟ್ಟು ಹೋದ ಕುಟುಂಬಗಳಿಗೆ ರೇಷನ್ ತಲುಪಲು ವ್ಯವಸ್ಥೆ ಮಾಡುವುದು.

- ಜಾರಿಯಲ್ಲಿ ಕಂಡುಬರುವ ಲೋಪದೋಷಗಳ ಬಗ್ಗೆ ಪಂಚಾಯತಿ/ತಾಲೂಕು/ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಿಮ್ಮಾಹಿತಿಯನ್ನು ತಲುಪಿಸುವುದು.

## 7.2 ಆರೋಗ್ಯ ವ್ಯವಸ್ಥೆಗಳು:

### 7.2.1 ರೋಗ ಪ್ರತಿಬಂಧಕ ಆರೋಗ್ಯ ಸೇವೆಗಳು:

ಪ್ರತಿಬಂಧಕ ಆರೋಗ್ಯ ಸೇವೆಯ ಮೇಲೆ ವಿಶೇಷ ಲಕ್ಷ್ಯವಿರಿಸಿ ಗುರಿಕೇಂದ್ರಿತ ಕ್ಷೇತ್ರಗಳ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಬೇಕಾದ ತುರ್ತು ಅವಶ್ಯಕತೆಯಿದೆ. ಜನಸಾಮಾನ್ಯರಿಗೆ ಅದರಲ್ಲೂ ಯಾರನ್ನು ತಲುಪುವುದು ಸುಲಭವಲ್ಲವೋ ಹಾಗೂ ಯಾರು ದುರ್ಬಲ ವರ್ಗಕ್ಕೆ ಸೇರಿರುತ್ತಾರೋ ಅಂತಹವರಿಗೆ ಕ್ರಮಬದ್ಧವಾದ/ ರಚನಾತ್ಮಕವಾದ, ವ್ಯವಸ್ಥಿತ ಸಂದೇಶಗಳನ್ನು ರವಾನಿಸುವ ಮೂಲಕ ಮತ್ತು ಅರಿವು ಮೂಡಿಸುವ ಮೂಲಕ ಕೋವಿಡ್–19 ವಿಶ್ವವ್ಯಾಧಿಯ ಪರಿಣಾಮವಾಗಿ ಉಂಟಾಗುತ್ತಿರುವ ರೋಗದ ಹರಡುವಿಕೆ ಹಾಗೂ ಸಾವಿನ ಸಂಖ್ಯೆಯ ಪ್ರಮಾಣವನ್ನು ಅನೇಕ ಪಟ್ಟುಗಳಷ್ಟು ಕಡಿಮೆ ಮಾಡಬಹುದು. ತುರ್ತಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

#### 7.2.1.1 ಆಧಾರಪೂರ್ವಕ ಮಾಹಿತಿಯ ಸೃಷ್ಟಿ ಹಾಗೂ ನಿರ್ವಹಣೆ:

**ಆದ್ಯತೆ: ತತ್‌ಕ್ಷಣದ್ದು.**

ಕೋವಿಡ್–19 ಕ್ಕೆ ಸಂಬಂಧಿಸಿದಂತೆ ಪ್ರತಿಬಂಧಕಾತ್ಮಕ ಕ್ರಮಗಳ ಕುರಿತು ಆಧಾರಪೂರ್ವಕವಾದ ಮಾಹಿತಿಯನ್ನು ಸೃಷ್ಟಿಸಿ, ಅದನ್ನು ನಿರ್ವಹಿಸಬೇಕಾದ ಅಗತ್ಯ ಇದೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಹುಸಿ ಮಾಹಿತಿಗಳನ್ನು ಹರಡಲಾಗುತ್ತಿರುವುದರಿಂದ ಜಿಲ್ಲೆಗಳ ಮಟ್ಟದಲ್ಲಿ ಅಧಿಕೃತ/ನಂಬಲರ್ಹ ಮೂಲಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವುದು ಮುಖ್ಯವಾಗಿದೆ. ಈ ಮಾಹಿತಿಗಳನ್ನು ಪಡೆದುಕೊಳ್ಳಬಹುದಾದ ಮೂಲಗಳೆಂದರೆ;

- ವಿಶ್ವ ಆರೋಗ್ಯ ಸಂಸ್ಥೆ (www.who.int)
- ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ (GOI) (https://mohfw.gov.in)
- ಆಯಾ ರಾಜ್ಯ ಸರ್ಕಾರಗಳ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯದ ಜಾಲತಾಣ

ಭಾರತ ಸರ್ಕಾರದ ಈ ಜಾಲತಾಣಗಳು ಮಾಹಿತಿಗಳನ್ನು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ನೀಡುತ್ತವೆ. ಅವುಗಳನ್ನು ಸ್ಥಳೀಯ ಭಾಷೆಗಳಿಗೆ ಅನುವಾದ ಮಾಡಿಕೊಳ್ಳಬೇಕಾಗಬಹುದು.

**ನಾಗರಿಕ ಸಮಾಜದ ಸಂಸ್ಥೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು**

- ಮಾಹಿತಿಗಳನ್ನು ಸ್ಥಳೀಯ ಭಾಷೆಗೆ ಅನುವಾದ ಮಾಡುವುದು.
- ಈ ವಿಷಯಗಳನ್ನು ಚಿತ್ರಗಳು ಹಾಗೂ ಡಿಜಿಟಲ್ ಮಾಧ್ಯಮದ ಮೂಲಕ ಸಂವಹನಕ್ಕಾಗುವಂತೆ ತಯಾರು ಮಾಡುವುದು.

#### *7.2.1.2* ಮಾಹಿತಿಯ ವ್ಯಾಪಕ ಪ್ರಸಾರ:

**ಆದ್ಯತೆ: ತತ್‌ಕ್ಷಣದ್ದು**

ಈ ಮಾಹಿತಿಯನ್ನು ಲಭ್ಯವಿರುವ ಹಲವಾರು ಮಾರ್ಗಗಳು/ ಮಾಧ್ಯಮಗಳನ್ನು ಬಳಸಿ ಪ್ರಸಾರ ಮಾಡಬಹುದು. ಅವುಗಳಲ್ಲಿ ಕೆಲವೆಂದರೆ–

- ಸಾಮಾಜಿಕ ಮಾಧ್ಯಮ
- ಉದ್ದೇಶಿತ ಗುರಿಯ ಪ್ರದೇಶಗಳಲ್ಲಿ ಪ್ರಭಾವಶಾಲಿ ನಾಯಕರಿಗೆ ಸಂದೇಶಗಳನ್ನು ತಲುಪಿಸುವುದು. ಇದು ಅತ್ಯಂತ ಪರಿಣಾಮಕಾರಿಯಾದದ್ದು.
- ಸಾಮೂಹಿಕವಾಗಿ ಸಂದೇಶಗಳನ್ನು ಕಳುಹಿಸುವುದು.

- ಜನತೆಯ ಸಂಪರ್ಕಜಾಲ ಹಾಗೂ ಸ್ವಸಹಾಯ ಗುಂಪುಗಳು/ಯುವಜನರ ಗುಂಪುಗಳು/ ಹದಿಹರೆಯದವರ ಗುಂಪುಗಳು/ ರೈತರ ಸಂಘಟನೆಗಳು ಮುಂತಾದ ಸಾಮಾಜಿಕ ತಾಣಗಳು.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಉದ್ದೇಶಿತ ಗುರಿಯ ಗುಂಪುಗಳನ್ನು ಕಂಡುಹಿಡಿಯಲು ಕಾರ್ಯತಂತ್ರವನ್ನು ರೂಪಿಸಲು ಸರ್ಕಾರಕ್ಕೆ ಸಹಾಯ ಮಾಡುವುದು.
- ಮಾಹಿತಿ ಪ್ರಸಾರವನ್ನು ಹೇಗೆ ಮಾಡಬೇಕೆಂಬ ಕಾರ್ಯತಂತ್ರವನ್ನು ರೂಪಿಸಲು ಸರ್ಕಾರಕ್ಕೆ ಸಹಾಯ ಮಾಡುವುದು.
- ವಿಶಾಲ ಜನಸ್ತೋಮಕ್ಕೆ ವಿಶೇಷವಾಗಿ ಪ್ರಭಾವಶಾಲಿ ವ್ಯಕ್ತಿಗಳ ಮೂಲಕ ಮಾಹಿತಿ ಪ್ರಸಾರ ಮಾಡಲು ಸರ್ಕಾರಕ್ಕೆ ಸಹಾಯ ಮಾಡುವುದು.

**7.2.1.3 ಕೋವಿಡ್–19ರ ವಿರುದ್ಧ ಪ್ರತಿಬಂಧಕ ಕಾರ್ಯತಂತ್ರಗಳ ಬಗ್ಗೆ ತಿಳುವಳಿಕೆ ನೀಡುವುದು:**
**ಆದ್ಯತೆ: ತತ್‌ಕ್ಷಣದ್ದು**

ಪ್ರಮುಖ ಪ್ರತಿಬಂಧಕ ಕಾರ್ಯತಂತ್ರಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವುದು.

- ದೈಹಿಕ ಅಂತರ ಕಾಯ್ದುಕೊಳ್ಳುವುದು (ಉದಾ: ಓಡಾಟಗಳನ್ನು ಕಡಿಮೆ ಮಾಡುವುದು ಮತ್ತು ಗುಂಪುಗಳಿಗೆ ಒಡ್ಡಿಕೊಳ್ಳದಿರುವುದು)
- ಹೆಚ್ಚು ಶುಚಿತ್ವದ ಅಭ್ಯಾಸಗಳು (ಉದಾ: ಚೆನ್ನಾಗಿ ಕೈ ತೊಳೆದುಕೊಳ್ಳುವುದು ಮತ್ತು ಮುಖ ಮುಟ್ಟಿಕೊಳ್ಳದಿರುವುದು).
- ಮನೆಯಲ್ಲೇ ಪ್ರತ್ಯೇಕವಾಗಿರುವುದು – ವಿಧಿ ನಿಷೇಧಗಳು (ಮಾಡಬಹುದಾದದ್ದು ಹಾಗೂ ಮಾಡಬಾರದ್ದು).
- ಹಿರಿಯರು ಹಾಗೂ ಇತರ–ಕಾಯಿಲೆಗಳಿಂದ ಬಳಲುತ್ತಿರುವವರನ್ನು ರಕ್ಷಿಸುವುದು.
- ಕೊರೊನಾ ವೈರಸ್ ಹರಡುವುದರೊಂದಿಗೆ ತಳುಕು ಹಾಕಿಕೊಂಡಿರುವ ಮೌಢ್ಯಗಳನ್ನು ಬಯಲುಗೊಳಿಸುವುದು.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಸರ್ಕಾರ ಅನುಕೂಲ ಮಾಡಿಕೊಟ್ಟರೆ ತಳಮಟ್ಟದ ಪ್ರಚಾರ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು. ಪ್ರಕಟಣೆಗಳನ್ನು ಮಾಡುವ ಮೂಲಕ ಸಮುದಾಯದ ರೇಡಿಯೋ ಮೂಲಕ ಹಾಗೂ ಇಂತಹ ಯಾವುದೇ ರೀತಿಯಲ್ಲೂ ಪ್ರಚಾರ ಮಾಡಬಹುದು.

**7.2.1.4 ಸರ್ಕಾರದ ಯೋಜನೆಗಳ ಬಗ್ಗೆ ಸಾಮುದಾಯಿಕ ತಿಳುವಳಿಕೆ ಬೆಳೆಸುವುದು:**
**ಆದ್ಯತೆ; ತದನಂತರದ್ದು**

ಕೋವಿಡ್–19ಕ್ಕೆ ಸಂಬಂಧಿಸಿದ ನಿರ್ದಿಷ್ಟ ಯೋಜನೆಗಳನ್ನು ಒಳಗೊಂಡಂತೆ (ಕೇಂದ್ರ ಹಾಗೂ ರಾಜ್ಯ) ಸರ್ಕಾರದ ವಿವಿಧ ಹಕ್ಕುಗಳು ಹಾಗೂ ಯೋಜನೆಗಳ ಬಗ್ಗೆ ಸಮುದಾಯದಲ್ಲಿ ತಿಳುವಳಿಕೆ ಮೂಡಿಸುವುದು. ಇದು ಒಳಗೊಳ್ಳಬೇಕಾದ ಅಂಶಗಳು;

- ಈ ಯೋಜನೆಗಳನ್ನು ಪಡೆದುಕೊಳ್ಳಲು ಬೇಕಾದ ಅರ್ಹತೆ
- ಈ ಯೋಜನೆಗಳ ಕುರಿತಾದ ಹಕ್ಕು

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ನಮ್ಮ ಗುರಿಕೇಂದ್ರಿತ ಪ್ರೇಕ್ಷಕರ ಬಹುದೊಡ್ಡ ಭಾಗ ಅನಕ್ಷರಸ್ತರು ಅಥವಾ ಅರ್ಧಂಬರ್ಧ ಅಕ್ಷರಸ್ತರು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸಚಿತ್ರ ಹಾಗೂ ಡಿಜಿಟಲ್ ಸಂವಹನಕ್ಕಾಗುವಂತೆ ಮಾಹಿತಿಯನ್ನು ತಯಾರಿಸುವುದು.
- ಆನ್‌ಲೈನ್ ಮೂಲಕ ಅರ್ಜಿ ಹಾಕಲು ಸಮುದಾಯಗಳಿಗೆ ಸಹಾಯ/ನೆರವು ನೀಡುವುದು.

***7.2.2* ಆರೋಗ್ಯ ಸೇವೆಯ ವ್ಯವಸ್ಥೆಯನ್ನು ಬಲಪಡಿಸುವುದು:**

ಜನಗಳ ಮಧ್ಯೆ ರೋಗದ ಹರಡುವಿಕೆ ಇದ್ದಕ್ಕಿದ್ದಂತೆ ಏರಿಕೆಯಾಗಬಹುದಾದ ಇಂತಹ ಒಂದು ವಿಶ್ವವ್ಯಾಪಿ ವ್ಯಾಧಿಯನ್ನು ನಿರ್ವಹಿಸಲು ನಮ್ಮ ಪ್ರಸಕ್ತ ಆರೋಗ್ಯ ಸೇವಾ ವಿತರಣಾ ವ್ಯವಸ್ಥೆಯು ಸಂಪೂರ್ಣವಾಗಿ ಸಜ್ಜುಗೊಂಡಿಲ್ಲ. ಇದು ಅತೀವ ಅವ್ಯವಸ್ಥೆಗೆ, ಆರೋಗ್ಯ ಸೇವಾ ವಿತರಣಾ ವ್ಯವಸ್ಥೆಯು ಕುಸಿದು ಬೀಳುವುದಕ್ಕೆ ಎಡೆಮಾಡಿಕೊಡಬಹುದು. ಇದಕ್ಕೆ ಸಂಬಂಧಿಸಿದ ಪ್ರಮುಖ ಅಂಶಗಳೆಂದರೆ:

- ಸಿಬ್ಬಂದಿಯ ಕೊರತೆ
- ಕೋವಿಡ್–19 ರಂತಹ ವಿಪತ್ತುಗಳನ್ನು ನಿರ್ವಹಿಸುವ ಸಿಬ್ಬಂದಿಯ ಸಾಮರ್ಥ್ಯ
- ಇಂತಹ ವಿಪತ್ತುಗಳನ್ನು ನಿರ್ವಹಿಸಲು ಬೇಕಾದ ಮೂಲ ಸೌಕರ್ಯಗಳ (ಹಾಸಿಗೆ/ತೀವ್ರ ನಿಗಾ ಘಟಕ/ಆಮ್ಲಜನಕ/ಔಷಧಿಗಳು ಇತ್ಯಾದಿ) ಕೊರತೆ
- ಆರೋಗ್ಯ ಸೇವಾ ವಿತರಣೆಯನ್ನು ಹೆಚ್ಚಿಸುವ ಭಾರಿ ಅವಶ್ಯಕತೆ ಉಂಟಾದಾಗ ಆರೋಗ್ಯ ಸೇವೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಹೆಚ್ಚಿಸಲು ಬೇಕಾದ ನೈಪುಣ್ಯದ ಕೊರತೆ.

**7.2.2.1 ಸರ್ಕಾರದೊಂದಿಗೆ ಸಹಭಾಗಿತ್ವ:**
**ಆದ್ಯತೆ: ತತ್‌ಕ್ಷಣದ್ದು**

ರಾಜ್ಯ–ಜಿಲ್ಲೆ–ಪಂಚಾಯತ್ ಹೀಗೆ ಎಲ್ಲಾ ಹಂತಗಳಲ್ಲೂ ಎಲ್ಲಾ ಪ್ರಯತ್ನಗಳೂ ಸಹಭಾಗಿತ್ವವನ್ನು ಒಳಗೊಳ್ಳುವಂತಿರಬೇಕಾದದ್ದು ಬಹಳ ಮುಖ್ಯ. ಭಾರತ ಸರ್ಕಾರವು ಕೋವಿಡ್–19 ಅನ್ನು ರಾಷ್ಟ್ರೀಯ ಆರೋಗ್ಯ ವಿಪತ್ತು ಎಂದು ಘೋಷಿಸಿರುವುದರಿಂದ ಜಿಲ್ಲಾ–ರಾಜ್ಯ ಅಧಿಕಾರಿಗಳೊಂದಿಗೆ ಸೂಕ್ತ ಸಮನ್ವಯವನ್ನು ಏರ್ಪಡಿಸಿಕೊಳ್ಳುವುದು ಅವಶ್ಯಕ.

ಎಲ್ಲೆಲ್ಲಿ ಅಗತ್ಯ ಕಂಡುಬರುತ್ತದೋ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಸರಿಯಾದ ಅನುಮೋದನೆ ಪಡೆದುಕೊಳ್ಳಬೇಕು. ಇದು ಪ್ರಯತ್ನಗಳು ಪುನರಾವರ್ತನೆಯಾಗುವುದನ್ನು ಕಡಿಮೆ ಮಾಡುತ್ತದೆ.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಕೊರತೆಗಳನ್ನು ಗುರುತಿಸಲು ಸರ್ಕಾರದೊಂದಿಗೆ ತೊಡಗಿಕೊಳ್ಳುವುದು.
- ಗುರುತಿಸಿದ ಕೊರತೆಗಳನ್ನು ನೀಗಿಸಲು ಇತರ ನಾಗರಿಕ ಸಮಾಜದ ಸಂಘಟನೆಗಳೊಂದಿಗೆ ಕೆಲಸ ಮಾಡುವುದು.
- ಜಿಲ್ಲಾ/ರಾಜ್ಯ ಅಧಿಕಾರಿಗಳೊಂದಿಗೆ ವಿಸ್ತೃತ ಕಾರ್ಯ ಯೋಜನೆಯನ್ನು ಹಂಚಿಕೊಳ್ಳುವುದು ಹಾಗೂ ಅವರಿಂದ ಅನುಮೋದನೆ ಪಡೆದುಕೊಳ್ಳುವುದು.
- ಸರ್ಕಾರದ ಪ್ರಯತ್ನಗಳಲ್ಲಿರುವ ಕೊರತೆಯು ಪುನರಾವರ್ತನೆಯಾಗದಂತೆ ನೀಗಿಸುವತ್ತ ಕೆಲಸ ಮಾಡುವುದು.
- ಉದ್ಭವಿಸುತ್ತಿರುವ ಪರಿಸ್ಥಿತಿಗೆ ಸಂವೇದನಾಶೀಲವಾಗಿ ಸ್ಪಂದಿಸುವುದು ಹಾಗೂ ಬದಲಾದ ಅವಶ್ಯಕತೆಗಳಿಗೆ ಅನುಗುಣವಾಗಿ ವ್ಯತ್ಯಾಸಗಳನ್ನು ಮಾಡಿಕೊಳ್ಳುವುದು.

**7.2.2.2 ಪ್ರಸಕ್ತ ಆರೋಗ್ಯ ಸೇವೆಯ ಮೂಲಸೌಕರ್ಯಗಳ ವಿಶ್ಲೇಷಣೆ:**

ವಿವಿಧ ಜಿಲ್ಲೆಗಳ ಮಧ್ಯೆ ಅವುಗಳ ಆರೋಗ್ಯ ಸೇವೆಯ ಬಲ ಸಾಮರ್ಥ್ಯಗಳಲ್ಲಿ ಅಪಾರ ವ್ಯತ್ಯಾಸಗಳಿರಲು ಸಾಧ್ಯ. ಕೆಲವು ಜಿಲ್ಲೆಗಳು ತಮ್ಮ ಗಡಿಗಳೊಳಗೆ ಹೆಚ್ಚು ನಗರೀಕೃತ ಪ್ರದೇಶಗಳನ್ನು ಹೊಂದಿರುವುದರಿಂದಾಗಿ ಉತ್ತಮ ಸೌಲಭ್ಯಗಳು ಲಭ್ಯವಿರುವ ಮೂರನೇ ಹಂತದ ಆರೋಗ್ಯ ಸೇವಾ ಕೇಂದ್ರಗಳಿಗೆ ಸುಲಭವಾಗಿ ಪ್ರವೇಶ ಪಡೆದುಕೊಂಡರೆ ಹೆಚ್ಚು ಗ್ರಾಮೀಣವಾದ ಜಿಲ್ಲೆಗಳು ಕಡಿಮೆ ಸಂಪನ್ಮೂಲಗಳನ್ನು ಹೊಂದಿರುತ್ತವೆ. ಆಯಾ ಜಿಲ್ಲೆಯ ಪ್ರಸಕ್ತ ಆರೋಗ್ಯ ಸೇವೆಯ ಮೂಲ ಸೌಕರ್ಯದ ಸೂಕ್ತವಾದ ಮೌಲ್ಯಮಾಪನವು ಇಂತಹ ಭಾರಿ ವಿಪತ್ತನ್ನು ಉತ್ತಮವಾಗಿ ನಿರ್ವಹಿಸಲು ಬೇಕಾದ ಕ್ರಮಬದ್ಧ ಯೋಜನೆಯ ಬೆನ್ನೆಲುಬು. ಇದು ಆಯಾ ಜಿಲ್ಲೆಯಲ್ಲಿ ಕಂಡು ಬರಬಹುದಾದಂತಹ ರೋಗಿಗಳ ಎಣಿಕೆಯ ಆಧಾರದ ಮೇಲೆ ಆರೋಗ್ಯ ಸೇವೆಯ ಮೂಲ ಸೌಕರ್ಯಗಳಲ್ಲಿರುವ ಕೊರತೆಯನ್ನು ಕಂಡುಹಿಡಿಯಲು ನಮಗೆ ಸಹಾಯ ಮಾಡುತ್ತದೆ. ಇದರಿಂದಾಗಿ ಉತ್ತಮ ಯೋಜನೆ ತಯಾರಾಗುತ್ತದೆ. ಮಾರ್ಗದರ್ಶಿ ಸೂತ್ರಗಳಿಗಾಗಿ ಅನುಬಂಧ ಎ 10ನ್ನು ನೋಡಿ.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಜಿಲ್ಲಾ /ಬ್ಲಾಕ್ ಮಟ್ಟದ ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯವನ್ನು ಬೆಳೆಸಲು ಮೌಲ್ಯಮಾಪನ ಉಪಕರಣಗಳನ್ನು ಹೇಗೆ ಬಳಸಬೇಕು ಎಂಬಲ್ಲಿ ಸರ್ಕಾರಕ್ಕೆ ನೆರವು ನೀಡುವುದು.
- ಮಾಹಿತಿಯನ್ನು ಉತ್ತಮವಾಗಿ ಸಂಯೋಜಿಸಿ, ವಿಶ್ಲೇಷಿಸಲು ಆನ್‌ಲೈನ್ ಮೌಲ್ಯಮಾಪನ ಸಾಧನಗಳನ್ನು ತಯಾರು ಮಾಡಲು ಸರ್ಕಾರಕ್ಕೆ ನೆರವು ನೀಡುವುದು.
- ಆರೋಗ್ಯ ಕಾರ್ಯಕರ್ತರು ಭರ್ತಿ ಮಾಡಬೇಕಾದ ಮೌಲ್ಯಮಾಪನ ಸಾಧನಗಳ ಅರ್ಜಿ ನಮೂನೆಯ ಮೇಲೆ ಸತತವಾಗಿ ನಿಗಾ ಇಡಲು ಸರ್ಕಾರಕ್ಕೆ ನೆರವು ನೀಡುವುದು.
- ಜಿಲ್ಲಾ ಮಟ್ಟದ ಮೌಲ್ಯಮಾಪನ ವರದಿಯನ್ನು ತಯಾರುಮಾಡಿ, ಅನುಸರಿಸಲು ಸರ್ಕಾರಕ್ಕೆ ನೆರವಾಗುವುದು.
- ಆಯಾ ಜಿಲ್ಲೆಯ ಅಂದಾಜು ಕೋವಿಡ್–19 ಪ್ರಕರಣದ ಪ್ರಮಾಣವನ್ನು ಆಧರಿಸಿ ಆರೋಗ್ಯ ಸೇವೆಯ ಮೂಲಸೌಕರ್ಯದ ಕೊರತೆಯನ್ನು ನೀಗಿಸಲು ಯೋಜನೆಯನ್ನು ತಯಾರಿಸಲು ಸರ್ಕಾರಕ್ಕೆ ನೆರವಾಗುವುದು.

### 7.2.2.3 ಎಎನ್‌ಎಮ್, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರ ಸಾಮರ್ಥ್ಯವನ್ನು ಬೆಳೆಸುವುದು:

**ಆದ್ಯತೆ: ತತ್‌ಕ್ಷಣದ್ದು**

ಕೋವಿಡ್–19 ವಿಶ್ವವ್ಯಾಧಿಯು ಸಂಪೂರ್ಣವಾಗಿ ವಿಭಿನ್ನವಾದಂತಹ ಆಪತ್ತಾಗಿದ್ದು, ಈ ವಿಪತ್ತಿನ ಪರಿಸ್ಥಿತಿಯನ್ನು ನಿರ್ವಹಿಸಲು ಮುಂಚೂಣಿ ಕಾರ್ಯಕರ್ತರ (ಎಎನ್‌ಎಮ್, ಆಶಾ ಹಾಗೂ ಅಂಗನವಾಡಿ) ಸಾಮರ್ಥ್ಯವನ್ನು ಬೆಳೆಸುವ ಜರೂರು ಅವಶ್ಯಕತೆಯಿದೆ. ಏಕೆಂದರೆ ಮುಂಚೂಣಿ ಆರೋಗ್ಯ ಕಾರ್ಯಕರ್ತರಾಗಿ ಇವರಿಗೆ ಸಮುದಾಯಗಳ ಬಗ್ಗೆ ಜವಾಬ್ದಾರಿಯಿದೆ, ಅವರನ್ನು ತಲುಪಲು, ಅವರನ್ನು ಪ್ರಭಾವಿಸಲು ಸಾಧ್ಯವಿದೆ. ಪ್ರತ್ಯೇಕಿಸಲ್ಪಟ್ಟ ಜನರ ಅಥವಾ ಸೋಂಕಿನ ಸಮೂಹಗಳಿರುವ ಮನೆಗಳಿಗೆ ಭೇಟಿ ನೀಡುವ ಮೂಲಕ ಕ್ಷೇತ್ರಗಳ ಮೇಲೆ ನಿಗಾ ಇರಿಸುವ ಚಟುವಟಿಕೆಗಳನ್ನು ನಡೆಸುವವರೆಂದು ಸದ್ಯದಲ್ಲಿ ಎಎನ್‌ಎಮ್, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರನ್ನು ಅಂದಾಜಿಸಲಾಗಿದೆ ಹಾಗೂ ಇವರು ಕಾಯಿಲೆಯ ಮೇಲೆ ನಿಗಾ ಇಡುವ ಹಾಗೂ ತಗ್ಗಿಸುವ ವಿಧಾನದ ಮುಖ್ಯವಾದ ಭಾಗವಾಗಿದ್ದಾರೆ. ದಿನನಿತ್ಯದ ಚಟುವಟಿಕೆಗಳಾದ ಪ್ರಸವಪೂರ್ವ ಆರೈಕೆ, ದುರ್ಬಲ ವರ್ಗದವರಿಗೆ ಪೌಷ್ಟಿಕಾಂಶ ಪೂರೈಕೆಗಳಂತಹವುಗಳನ್ನು ಮುಂದುವರೆಸಲೂ ಸಹ ಅವರು ಬಹಳ ಮುಖ್ಯವಾಗುತ್ತಾರೆ. ವಿಪತ್ತುಗಳು ಸ್ಫೋಟಿಸಿದಾಗ ದಿನನಿತ್ಯದ ಚಟುವಟಿಕೆಗಳನ್ನು ನಿರ್ವಹಿಸುವುದು ಸಾಕಷ್ಟು ಅಪಾಯವನ್ನು ಒಡ್ಡುತ್ತದೆ ಹಾಗೂ ಅದಕ್ಕೆ ಪರಿಣಿತಿಯ ಅವಶ್ಯಕತೆಯಿರುತ್ತದೆ. ಆದ್ದರಿಂದ ಅವರ ಸಾಮರ್ಥ್ಯವನ್ನು ಹೆಚ್ಚಿಸಿ, ಅವರನ್ನು ತಮ್ಮ ಕಾರ್ಯ ನಿರ್ವಹಿಸಲು ಸಜ್ಜುಗೊಳಿಸಬೇಕಾಗುತ್ತದೆ. ಸಾಮರ್ಥ್ಯ ಬೆಳವಣಿಗೆ ಘಟಕವು ಇದರ ಆಧಾರದಲ್ಲಿರಬಹುದು. ಸಾಮರ್ಥ್ಯ ಅಭಿವೃದ್ಧಿ ಕೈಪಿಡಿಯನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಿಂದ ಪ್ರಕಟಿಸಲಾದ, 'ಕೋವಿಡ್–19 ಫೆಸಿಲಿಟೇಟರ್ ಮಾರ್ಗದರ್ಶಿ ಪ್ರತಿಸ್ಪಂದನಾ ಮತ್ತು ನಿಯಂತ್ರಣ ಕ್ರಮಗಳು, ಎಎನ್‌ಎಮ್, ಆಶಾ, ಅಂಗನವಾಡಿ ಕಾರ್ಯಕರ್ತರಿಗಾಗಿ ತರಬೇತಿ ಟೂಲ್ ಕಿಟ್' ಅನ್ನು ಆಧರಿಸಿ ತಯಾರಿಸಬಹುದು. ಇದನ್ನು ಅನುಬಂಧ ಎ1 ರಲ್ಲಿ ಸೂಚಿಸಲಾಗಿದೆ.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಸ್ಥಾಪಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಓಪಿ) ಆಧರಿಸಿ ಅಭಿಪ್ರಾಯ ವಿನಿಮಯ ತರಬೇತಿ ಕೈಪಿಡಿಯನ್ನು, ಡಿಜಿಟಲ್ ಸ್ವರೂಪ (ಟಿಕ್‌ಟಾಕ್ ವಿಡಿಯೋ/ ಸಚಿತ್ರ ಆವೃತ್ತಿ) ವನ್ನು ಒಳಗೊಂಡಂತೆ ತಯಾರು ಮಾಡುವುದು.
- ತಾಂತ್ರಿಕ ನೆರವು ಹಾಗೂ ತಾರ್ಕಿಕ ಬೆಂಬಲಗಳೆರಡರೊಂದಿಗೆ ತರಬೇತಿ ನೀಡಲು ಸರ್ಕಾರಕ್ಕೆ ನೆರವು ನೀಡುವುದು.
- ತರಬೇತಿಯ ನಂತರ ಭಾಗವಸಿದ್ದವರ ತಿಳುವಳಿಕೆಯ ಮಟ್ಟದಲ್ಲಿ ಬದಲಾವಣೆ ಆಗಿದೆಯೇ ಎಂಬುದನ್ನು ಅರ್ಥಮಾಡಿಕೊಳ್ಳಲು ಸತತ ನಿಗಾ ಇಡುವುದು ಹಾಗೂ ಅಪಾಯ ಹೆಚ್ಚಾಗುತ್ತಿರುವ ಪ್ರಕರಣಗಳಿದ್ದಲ್ಲಿ ಅಥವಾ ವಿಶ್ವವ್ಯಾಧಿಯ ಬೆಳವಣಿಗೆಯಲ್ಲಿ ಬದಲಾವಣೆಗಳಿದ್ದಲ್ಲಿ ನಿಯತವಾಗಿ ತರಬೇತಿಯನ್ನು ನೀಡುವುದು.

### 7.2.2.4 ವೈಯಕ್ತಿಕ ಸುರಕ್ಷತಾ ಸಲಕರಣೆ (ಪಿಪಿಇ) ಸರಬರಾಜು:

**ಆದ್ಯತೆ: ತತ್‌ಕ್ಷಣದ್ದು**

ಕೋವಿಡ್–19 ಸೋಂಕು, ಮೂಗು ಬಾಯಿಯ ಹನಿಗಳು ಮತ್ತು ಫೊಮೈಟ್‌ಗಳ (ವೈರಸ್‌ನ ಕಣಗಳು, ಹನಿಗಳು ನೆಲೆಸಿರುವಂತಹ ವಸ್ತು/ಪದಾರ್ಥಗಳು) ಮೂಲಕ ಹರಡುತ್ತದೆಯೆಂದು ಕಂಡುಬಂದಿದೆ. ಆದ್ದರಿಂದ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಯನ್ನೂ ಒಳಗೊಂಡಂತೆ ರೋಗಿಗಳ ಶುಶ್ರೂಷಕರು ಸೋಂಕು ತಗುಲಿಸಿಕೊಳ್ಳುವ ಅತ್ಯಂತ ಹೆಚ್ಚಿನ ಅಪಾಯಕ್ಕೆ ಒಳಗಾಗುತ್ತಾರೆ ಹಾಗೂ ಈ ವಿಶ್ವವ್ಯಾಧಿಯ ವಿರುದ್ಧದ ಸಮರದಲ್ಲಿ ಅತಿ ಮುಖ್ಯ ಪಾಲುದಾರರಾಗುತ್ತಾರೆ. ಹಾಗಾಗಿ ಅವರ ಸುರಕ್ಷೆಯು ಅತ್ಯಂತ ಮುಖ್ಯವಾದದ್ದು ಹಾಗೂ ವೈಯಕ್ತಿಕ

ಸುರಕ್ಷತಾ ಸಲಕರಣೆ (ಪಿಪಿಇ)ಗಳ ಸೂಕ್ತ ಬಳಕೆಯು ಅವರ ಸುರಕ್ಷತೆಯನ್ನು ಕಾಪಾಡುವಲ್ಲಿ ಅತ್ಯಂತ ನಿರ್ಣಾಯಕವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಗೆ ಪಿಪಿಇಗಳ ಸರಬರಾಜನ್ನು ಸಾಕಷ್ಟು ಪ್ರಮಾಣದಲ್ಲಿ ಖಾತ್ರಿಗೊಳಿಸುವುದಕ್ಕೆ ಸೂಕ್ತ ಪ್ರಾಮುಖ್ಯತೆಯನ್ನು ನೀಡಬೇಕು. ಕೋವಿಡ್–19 ವಿಪತ್ತಿನ ಸಂದರ್ಭದಲ್ಲಿ ಪಿಪಿಇಗಳ ವಿವೇಕಯುಕ್ತ ಬಳಕೆಯ ಬಗ್ಗೆ ಸರ್ಕಾರ ಈಗಾಗಲೇ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಿದೆ. ಸರ್ಕಾರದ ಸಂಪೂರ್ಣ ಮಾರ್ಗದರ್ಶಿ ಸೂತ್ರಗಳಿಗೆ ಸಂಬಂಧಿಸಿದ ಲಿಂಕ್ (ಕೊಂಡಿ) ನೊಂದಿಗೆ, ಮಾರ್ಚ್ 30, 2020 ರಂದು ಹೊರಡಿಸಿರುವ ಪಟ್ಟಿಯನ್ನು ಅನುಬಂಧ ಎ2 ನಲ್ಲಿ ಪ್ರಸ್ತಾಪಿಸಲಾಗಿದೆ. ಈ ಮಾರ್ಗದರ್ಶಿ ಸೂತ್ರಗಳು ವಿವಿಧ ರೀತಿಯ ಅಪಾಯಕರ ಆರೋಗ್ಯ ಸೇವೆಯ ಪರಿಸ್ಥಿತಿಗಳಲ್ಲಿ ಪಿಪಿಇಗಳನ್ನು ಬಳಸುವ ಬಗ್ಗೆ ನಿರ್ದಿಷ್ಟ ಸೂಚನೆಗಳನ್ನು ನೀಡುತ್ತವೆ. ಈ ಮೂಲಕ ಸಮರ್ಪಕವಾದ ಸುರಕ್ಷತೆಯನ್ನು ಕಾಪಾಡಿಕೊಳ್ಳಲು ಬೇಕಾದಷ್ಟು ಉಪಯೋಗಿಸಿಕೊಳ್ಳುವಂತೆ, ಆದರೆ ವ್ಯರ್ಥವಾಗಿ ಹಾಳಾಗುವುದನ್ನು ತಡೆಯುವಂತೆ ಹಾಗೂ ಅಭಾವವುಂಟಾಗುವಷ್ಟು ಅನವಶ್ಯಕವಾಗಿ ಪಿಪಿಇಗಳನ್ನು ಪೇರಿಸಿಡುವುದರ ವಿರುದ್ಧ ಮಾರ್ಗದರ್ಶನ ನೀಡುತ್ತವೆ.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಒಂದು ಜಿಲ್ಲೆಗೆ ಬೇಕಾಗುವಷ್ಟು ಪಿಪಿಇಗಳ ಸಂಖ್ಯೆಯನ್ನು ನಿರ್ಧರಿಸಲು ಸರ್ಕಾರಕ್ಕೆ ನೆರವು ನೀಡುವುದು.
- ಅಂದಾಜು ಮಾಡಿರುವ ಲೆಕ್ಕಾಚಾರದ ಪ್ರಕಾರ ಪಿಪಿಇಗಳನ್ನು ಪಡೆದುಕೊಳ್ಳಲು, ಸಾಗಿಸಲು ಹಾಗೂ ಸರಬರಾಜು ಮಾಡಲು ಸರ್ಕಾರಕ್ಕೆ ನೆರವು ನೀಡುವುದು.
- ಪಿಪಿಇಗಳ ಪ್ರಾಮುಖ್ಯತೆ ಹಾಗೂ ಬಳಸುವ ವಿಧಾನ, ಅವುಗಳನ್ನು ಧರಿಸುವುದು ಹಾಗೂ ತೆಗೆಯುವುದು ಹಾಗೂ ಇಡೀ ಸೋಂಕಿನ ತಡೆಗಟ್ಟುವಿಕೆ ಹಾಗೂ ನಿಯಂತ್ರಣದ ಸರಣಿಯಲ್ಲಿ ಅವುಗಳ ಪಾತ್ರದ ಬಗ್ಗೆ ವೈದ್ಯಕೀಯ ಹಾಗೂ ಅರೆ–ವೈದ್ಯಕೀಯ ಸಿಬ್ಬಂದಿಗಳ ಮಧ್ಯೆ ತಿಳುವಳಿಕೆ ಮೂಡಿಸುವುದು.

### 7.2.2.5 ಪ್ರತ್ಯೇಕವಾಸದ/ಕ್ವಾರಂಟೈನ್ ಸೌಕರ್ಯವನ್ನು ಒದಗಿಸುವುದು:

**ಆದ್ಯತೆ: ತತ್‌ಕ್ಷಣದ್ದು**

ಸುದೀರ್ಘ ಲಾಕ್‌ಡೌನ್‌ನಿಂದ ಹಾಗೂ ಕೆಲಸಗಳನ್ನು ಕಳೆದುಕೊಂಡಿರುವುದರಿಂದ ಬಹಳ ದೊಡ್ಡ ಸಂಖ್ಯೆಯ ವಲಸೆ ಕಾರ್ಮಿಕರು/ದಿನಗೂಲಿ ನೌಕರರು ತಂತಮ್ಮ ಹಳ್ಳಿಗಳಿಗೆ ವಾಪಸ್ಸಾಗುತ್ತಿದ್ದಾರೆ. ಅವರಲ್ಲಿ ಹಲವಾರು ಜನರಿಗೆ ಈಗಾಗಲೇ ಕೋವಿಡ್–19ರ ಸೋಂಕು ತಗುಲಿರಬಹುದು. ಅವರ ಸಮುದಾಯದಲ್ಲಿ ಸೋಂಕಿನ ಹರಡುವಿಕೆಯನ್ನು ಕಡಿಮೆ ಮಾಡಲು ಅವರನ್ನು ಹದಿನಾಲ್ಕು ದಿನಗಳ ಕಾಲ ಪ್ರತ್ಯೇಕವಾಗಿರಿಸುವುದು, ಕ್ವಾರಂಟೈನ್ ಮಾಡುವುದು ಅವಶ್ಯಕ. ಹಾಗಾಗಿ ಹಳ್ಳಿ/ಪಂಚಾಯತಿ ಮಟ್ಟದಲ್ಲಿ ತಾತ್ಕಾಲಿಕವಾಗಿ ಪ್ರತ್ಯೇಕವಾಸದ, ಕ್ವಾರಂಟೈನ್‌ನ ಸೌಕರ್ಯಗಳನ್ನು ತಯಾರು ಮಾಡುವುದು ತತ್‌ಕ್ಷಣದ ಅವಶ್ಯಕತೆ. ಶಾಲೆಗಳು, ಪಂಚಾಯತಿ ಕಟ್ಟಡಗಳು, ವಿದ್ಯಾರ್ಥಿ ನಿಲಯಗಳು ಮುಂತಾದವನ್ನು ತಾತ್ಕಾಲಿಕವಾಗಿ ಪ್ರತ್ಯೇಕವಾಸದ/ಕ್ವಾರಂಟೈನ್ ವಾರ್ಡ್‌ಗಳಾಗಿ ಪರಿವರ್ತಿಸಬಹುದು. ಕಾಯಿಲೆ ನಿಯಂತ್ರಣದ ರಾಷ್ಟ್ರೀಯ ಕೇಂದ್ರ (ಎನ್‌ಸಿಡಿಸಿ)ವು ಕ್ವಾರಂಟೈನ್ ಸೌಕರ್ಯಗಳನ್ನು, ಪ್ರತ್ಯೇಕವಾಸದ ಸೌಕರ್ಯಗಳನ್ನು ಸಿದ್ಧ ಮಾಡುವುದರ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಕ್ವಾರಂಟೈನ್ ಸೌಕರ್ಯಗಳನ್ನು ಸಿದ್ಧ ಮಾಡುವುದರ ಬಗ್ಗೆ ಎನ್‌ಸಿಡಿಸಿ ಮಾರ್ಗದರ್ಶಿ ಸೂತ್ರಗಳಿಗಾಗಿ ಅನುಬಂಧ ಎ 3ನ್ನು ನೋಡಿರಿ. ಪ್ರತ್ಯೇಕವಾಸದ ಸೌಕರ್ಯಗಳನ್ನು/ ವಾರ್ಡ್‌ಗಳನ್ನು ಸಿದ್ಧಪಡಿಸುವುದರ ಬಗ್ಗೆ ಎನ್‌ಸಿಡಿಸಿ ಮಾರ್ಗದರ್ಶಿ ಸೂತ್ರಗಳಿಗಾಗಿ ಅನುಬಂಧ ಎ 4ನ್ನು ನೋಡಿರಿ.

**ನಾಗರಿಕ ಸಮಾಜದ ಸಂಘಟನೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಹಳ್ಳಿ/ಪಂಚಾಯತಿ ಮಟ್ಟದಲ್ಲಿ ಅಂತಹ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸ್ಥಳ ಆಯ್ಕೆ ಮಾಡುವುದಕ್ಕೆ ಸರ್ಕಾರಕ್ಕೆ ನೆರವು ನೀಡುವುದು.
- ಅಂತಹ ಸೌಕರ್ಯಗಳನ್ನು ಸಿದ್ಧಗೊಳಿಸಿ, ಬಳಸುವಂತೆ ಮಾಡಲು ಸರ್ಕಾರ/ಪಂಚಾಯತಿಗಳಿಗೆ ನೆರವು ನೀಡುವುದು.
- ಕಡ್ಡಾಯ ಪ್ರತ್ಯೇಕವಾಸ/ಕ್ವಾರಂಟೈನ್‌ನ ಪ್ರಾಮುಖ್ಯತೆಯ ಬಗ್ಗೆ ವಾಪಸ್ಸಾಗುತ್ತಿರುವ ವಲಸೆ ಕಾರ್ಮಿಕರಿಗೆ ಪ್ರೇರಣೆ/ ಆಪ್ತ ಸಮಾಲೋಚನೆ ಮಾಡುವುದು.
- ತಾಲ್ಲೂಕು/ಜಿಲ್ಲೆ/ರಾಜ್ಯ ಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ವಾರಂಟೈನ್‌ಗೆ ಒಳಗಾದ ವ್ಯಕ್ತಿಗಳ ಆರೋಗ್ಯ ಪರಿಸ್ಥಿತಿಯ ದತ್ತಾಂಶವನ್ನು ನವೀಕರಿಸುತ್ತಿರುವುದು.

### 7.2.2.6 ಔಷಧಿಗಳು ಹಾಗೂ ಆರೋಗ್ಯ ಸೇವೆಯ ಬಳಕೆ ವಸ್ತುಗಳ ಸರಬರಾಜು:

**ಆದ್ಯತೆ: ತತ್‌ಕ್ಷಣದ್ದು**

ಈ ಪ್ರಮಾಣದ ವಿಪತ್ತನ್ನು ಎದುರಿಸಬೇಕಾದ ಸನ್ನಿವೇಶದಲ್ಲಿ ಔಷಧಿಗಳು ಹಾಗೂ ಇತರ ಬಳಕೆ ವಸ್ತುಗಳಾದ ಆಮ್ಲಜನಕ, ನೈರ್ಮಲ್ಯ ಸಾಮಗ್ರಿಗಳನ್ನು, ಆರೋಗ್ಯ ಸೇವಾ ವಿತರಣೆಯ ವಿವಿಧ ಹಂತಗಳಿಗೆ (ಉಪ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾ ಆಸ್ಪತ್ರೆಗಳಿಗೆ) ಸರಾಗವಾಗಿ ಮತ್ತು ಅಡೆತಡೆರಹಿತವಾಗಿ ಸರಬರಾಜು ಮಾಡುವುದು ಅತ್ಯಂತ ನಿರ್ಣಾಯಕವಾದದ್ದು. ಹಾಗಾಗಿ ರೋಗಿಗಳ ಒಳಹರಿವಿನ ಅಂದಾಜಿನ ಆಧಾರದ ಮೇಲೆ ಅಗತ್ಯತೆಗಳ ಸರಿಯಾದ ಲೆಕ್ಕಾಚಾರ ಮಾಡುವುದು ಹಾಗೂ ಸರಬರಾಜು ಸರಪಳಿಯನ್ನು ತ್ವರಿತವಾಗಿ ವಿಸ್ತರಿಸುವುದು ಸಾವಿನ ಸಂಖ್ಯೆಯನ್ನು ಕಡಿಮೆ ಮಾಡುವಲ್ಲಿ ಅತ್ಯಂತ ನಿರ್ಣಾಯಕವಾದಂತಹ ಪಾತ್ರವನ್ನು ನಿರ್ವಹಿಸುತ್ತದೆ.

**ನಾಗರಿಕ ಸಮಾಜದ ಸಂಸ್ಥೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ಅವಶ್ಯಕತೆಗಳ ಲೆಕ್ಕಾಚಾರದಲ್ಲಿ ಸರ್ಕಾರಕ್ಕೆ ನೆರವು ನೀಡುವುದು.
- ಅಗತ್ಯ ಬಿದ್ದರೆ, ಆ ಅಗತ್ಯತೆಗಳನ್ನು ಸರಿಯಾದ ಒಪ್ಪಿಗೆ ಪಡೆದು, ಗುಣಮಟ್ಟ ಪರೀಕ್ಷೆ ಮಾಡಿ ತ್ವರಿತವಾಗಿ ಕೊಂಡುಕೊಳ್ಳಲು ಸರ್ಕಾರಕ್ಕೆ ನೆರವು ನೀಡುವುದು.
- ಆರಂಭದಲ್ಲಿ ಈ ಕೊಂಡುಕೊಳ್ಳುವಿಕೆಯು, ಯಾವುದೇ ನಿರ್ಬಂಧವಿಲ್ಲದ ಸಾಮಾನ್ಯ ಔಷಧಿಯೇತರ ಸಾಮಗ್ರಿಗಳಾದ ನೈರ್ಮಲ್ಯ ಸಾಮಗ್ರಿಗಳು, ಆಮ್ಲಜನಕ, ಸಿರಿಂಜುಗಳು, ಸೂಜಿಗಳು ಮುಂತಾದ ಅಗತ್ಯಗಳಿಗೆ ಸೀಮಿತವಾಗಿರುತ್ತದೆ. ನಿಯಮ ಪಾಲನೆಯ ಸಾಮರ್ಥ್ಯ ಹಾಗೂ ಗುಣಮಟ್ಟ ಕಾಯ್ದುಕೊಳ್ಳುವಿಕೆಗಳನ್ನು ಗಮನಿಸಿ ನಂತರ ಔಷಧೀಯ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಬಗ್ಗೆ ನಿರ್ಧರಿಸಲಾಗುವುದು.
- ಕೊಂಡುಕೊಂಡ ವಸ್ತುಗಳನ್ನು ವಿವಿಧ ಹಂತಗಳಲ್ಲಿ ವಿತರಿಸಲು ಸರ್ಕಾರಕ್ಕೆ ನೆರವು ನೀಡುವುದು.

**7.2.2.7 ಆಂಬ್ಯುಲೆನ್ಸ್ ಸೌಲಭ್ಯಗಳು:**

ಕೋವಿಡ್–19 ಸೋಂಕಿನ ರೋಗಿಗಳಿಗೆ ಸಕಾಲಿಕ ಚಿಕಿತ್ಸೆ ಒದಗಿಸುವಲ್ಲಿ ಆಂಬ್ಯುಲೆನ್ಸ್‌ಗಳು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಅತ್ಯಂತ ಗಂಭೀರಾವಸ್ಥೆಯ ರೋಗಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮೂರನೆಯ ಹಂತದ ಆರೋಗ್ಯ ಕೇಂದ್ರಗಳಿಗೆ ಜೀವರಕ್ಷಕಗಳ ಜೊತೆಗೆ ಸಾಗಿಸಬೇಕಾಗುತ್ತದೆ. ಗರ್ಭಿಣಿ ಮಹಿಳೆಯರನ್ನು /ಪ್ರಸವ ಹಾಗೂ ಇನ್ನಿತರ ಕಾಯಿಲೆಗಳಿಗಾಗಿ ಸಾಗಿಸುವ ಅವಶ್ಯಕತೆಯನ್ನು ಪೂರೈಸುವ ಜೊತೆಗೆ ಈಗ ಇದನ್ನೂ ಮಾಡಬೇಕಾಗಿದೆ. ಆದ್ದರಿಂದ ಕೋವಿಡ್–19 ಸೋಂಕಿನ ರೋಗಿಗಳನ್ನು ಸಾಗಿಸಲಿಕ್ಕೆ ನೆರವು ನೀಡಲು ಹೆಚ್ಚುವರಿ ಆಂಬ್ಯುಲೆನ್ಸ್‌ಗಳನ್ನು ಒಟ್ಟುಗೂಡಿಸಿಕೊಳ್ಳುವ ಜರೂರು ಅವಶ್ಯಕತೆಯಿದೆ. ಇಲ್ಲಿ ಅತ್ಯಂತ ಅಗತ್ಯವಿರುವ ಆಂಬ್ಯುಲೆನ್ಸ್/ ಸಾಗಿಸುವ ಸೌಲಭ್ಯವನ್ನು ಅವಶ್ಯವಿದ್ದಷ್ಟು ಮಾತ್ರ ಬಳಸಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಲು ಉತ್ತಮ ಸಮನ್ವಯವನ್ನು ಏರ್ಪಡಿಸಿಕೊಳ್ಳಬೇಕು. ಕೋವಿಡ್–19 ಸೋಂಕಿನ ರೋಗಿಯನ್ನು ಸಾಗಿಸುವ ಆಂಬ್ಯುಲೆನ್ಸ್ ಬಳಕೆಗೆ ಸಂಬಂಧಿಸಿದಂತೆ ಸರ್ಕಾರವು ಈಗಾಗಲೇ ಸ್ಥಾಪಿತ ಕಾರ್ಯಾಚರಣೆ ವಿಧಾನ (ಎಸ್‌ಓಪಿ)ವನ್ನು ಪ್ರಕಟಿಸಿದೆ. ಹಾಗೂ ಅದನ್ನು ಅನುಬಂಧ ಎ 5ರಲ್ಲಿ ಸೂಚಿಸಲಾಗಿದೆ.

**ನಾಗರಿಕ ಸಮಾಜದ ಸಂಸ್ಥೆಗಳು ಸಹಾಯ ಮಾಡಬಹುದಾದ ಕ್ಷೇತ್ರಗಳು:**

- ವಿವಿಧ ಹಂತಗಳಲ್ಲಿ ಹೆಚ್ಚುವರಿ ಆಂಬ್ಯುಲೆನ್ಸ್‌ಗಳನ್ನು ಒಟ್ಟುಗೂಡಿಸಿಕೊಳ್ಳಲು ಸರ್ಕಾರಕ್ಕೆ ನೆರವು ನೀಡುವುದು.
- ಸರ್ಕಾರ ಹೊರಡಿಸಿರುವ ಸ್ಥಾಪಿತ ಕಾರ್ಯಾಚರಣೆ ವಿಧಾನ (ಎಸ್‌ಓಪಿ)ದ ಬಗ್ಗೆ ಆಂಬ್ಯುಲೆನ್ಸ್ ಸಿಬ್ಬಂದಿಗೆ ತರಬೇತಿ ನೀಡುವುದು.
- ಆಂಬ್ಯುಲೆನ್ಸ್ ಕಾಲ್ ಸೆಂಟರ್‌ಗಳನ್ನು ಕಾರ್ಯಾಚರಣೆಗೆ ಸಿದ್ಧಪಡಿಸುವುದು ಹಾಗೂ ನಿರ್ವಹಿಸುವುದು.

**7.2.2.8 ವೈದ್ಯರು ಮತ್ತು ವೈದ್ಯಕೀಯ ಸಹಾಯಕ ಸಿಬ್ಬಂದಿಯ ಸಾಮರ್ಥ್ಯ ಬೆಳೆಸುವುದು:**
**ಆದ್ಯತೆ: ತತ್‌ಕ್ಷಣದ್ದು**

ಕೋವಿಡ್–19 ಸೋಂಕಿನ ರೋಗಿಗಳ ಚಿಕಿತ್ಸೆಯ ನಿಯಮಾವಳಿಗೆ (ಪ್ರೊಟೋಕಾಲ್) ಸಂಬಂಧಿಸಿದಂತೆ ಹಾಗೂ ಅಂತಹ ರೋಗಿಗಳನ್ನು ಸುರಕ್ಷಿತವಾಗಿಟ್ಟುಕೊಂಡು ಹೇಗೆ ನಿರ್ವಹಿಸಬೇಕೆಂಬುದನ್ನು ಕುರಿತಂತೆ ಅದಕ್ಕಾಗಿ ನಿಯೋಜಿಸಲ್ಪಟ್ಟಿರುವ ವೈದ್ಯರು ಹಾಗೂ ವೈದ್ಯಕೀಯ ಸಹಾಯಕ ಸಿಬ್ಬಂದಿಯ ಸಾಮರ್ಥ್ಯವನ್ನು ಬೆಳೆಸುವುದು ಈ ವಿಪತ್ತನ್ನು ಎದುರಿಸುವಲ್ಲಿ ಒಂದು ಪ್ರಮುಖವಾದ ಘಟ್ಟ. ಸಲಹಾ ತಜ್ಞರು ಹಾಗೂ ತುರ್ತು ಚಿಕಿತ್ಸಾ ತಜ್ಞರ ಸಹಾಯ ದೊರೆಯದಂತಹ ಸ್ಥಳಗಳಲ್ಲಿ ಉಸಿರಾಟದ ತೀವ್ರ ತೊಂದರೆ ಅನುಭವಿಸುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿರುವ ರೋಗಿಗಳ ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯರಿಗೆ ಇದು ಹೆಚ್ಚು ಅನ್ವಯಿಸುತ್ತದೆ. ವೈದ್ಯರು ಮತ್ತು ಇತರ ವೈದ್ಯಕೀಯ ಸಿಬ್ಬಂದಿಗಳ ಮಧ್ಯೆ ಇಂತಹ

ಅಗತ್ಯಗಳಿಗಾಗಿಯೇ ಎಐಎಂಎಂಎಸ್– ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ– ಈಗಾಗಲೇ ಒಂದು ಆನ್‌ಲೈನ್ ತರಬೇತಿ ಕೈಪಿಡಿಯನ್ನು ಸಿದ್ಧಪಡಿಸಿದೆ. ಈ ನಿಟ್ಟಿನಲ್ಲಿ ತ್ವರಿತ ತರಗತಿ ತರಬೇತಿಯನ್ನೂ ಸಹ ನಡೆಸಬಹುದು.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ತರಬೇತಿ ಯೋಜನೆ ಹಾಗೂ ತರಬೇತಿ ದಿನಾಂಕ ಪಟ್ಟಿಯನ್ನು ತಯಾರು ಮಾಡಲು ಸರ್ಕಾರಕ್ಕೆ ನೆರವು ನೀಡುವುದು.
- ಅಂತಹ ತರಬೇತಿಗಳನ್ನು ನಡೆಸಲು ತಾಂತ್ರಿಕ ಹಾಗೂ ಸಂಘಟನಾತ್ಮಕ ನೆರವನ್ನು ನೀಡುವುದು.

**7.2.2.9 ಪರೀಕ್ಷಾ ಕಿಟ್‌ಗಳು:**

**ಆದ್ಯತೆ: ತತ್‌ಕ್ಷಣದ್ದು**

ಕೋವಿಡ್–19 ವಿಶ್ವವ್ಯಾಧಿಯ ವಿರುದ್ಧದ ಹೋರಾಟದಲ್ಲಿ ರೋಗ ಪರೀಕ್ಷೆಯು ಪ್ರಮುಖ ಕಾರ್ಯತಂತ್ರವಾಗಿದೆ. ಇವತ್ತಿನವರೆಗೂ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್), ಮಾನ್ಯತೆ ಪಡೆದಿರುವ ಒಂದಷ್ಟು ಸರ್ಕಾರಿ ಪ್ರಯೋಗಾಲಯಗಳಿಗೆ ಪರೀಕ್ಷಾ ಕಿಟ್‌ಗಳನ್ನು ಸರಬರಾಜು ಮಾಡುತ್ತಿದೆ. ಉಳಿದಂತೆ ಸರ್ಕಾರದಿಂದ ಮಾನ್ಯತೆ ಪಡೆದ ಇತರ ಪ್ರಯೋಗಾಲಯಗಳು ಹಾಗೂ ಮಾನ್ಯತೆ ಪಡೆದ ಖಾಸಗಿ ಪ್ರಯೋಗಾಲಯಗಳು ಖಾಸಗಿಯಾಗಿ ತಮಗೆ ಬೇಕಾದ ಕಿಟ್‌ಗಳು ಹಾಗೂ ರಾಸಾಯನಿಕ ದ್ರವ್ಯಗಳನ್ನು ಪಡೆದುಕೊಳ್ಳುತ್ತವೆ. ಈ ಕಿಟ್‌ಗಳು ಐಸಿಎಂಆರ್, ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಗಳ ಮಾನ್ಯತೆ ಪಡೆದಿವೆ. ಈಗಿರುವಂತೆ, ಕೋವಿಡ್–19 ಸೋಂಕಿನ ಪರೀಕ್ಷೆ ನಡೆಸುತ್ತಿರುವ ಎಲ್ಲಾ ಪ್ರಯೋಗಾಲಯಗಳು ಐಸಿಎಂಆರ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಕಾಲದಿಂದ ಕಾಲಕ್ಕೆ (ರಿಯಲ್ ಟೈಮ್) ರಾಷ್ಟ್ರೀಯ ರೋಗಿ ಪಟ್ಟಿಯನ್ನು (ನ್ಯಾಷನಲ್ ಲೈನ್ ಲಿಸ್ಟಿಂಗ್) ನವೀಕರಿಸುತ್ತಿರಬೇಕು.

ಅದೇನೇ ಇರಲಿ, ಕೋವಿಡ್–19 ಸೋಂಕಿನ ಪರೀಕ್ಷೆಯ ವಿಸ್ತರಣೆಯನ್ನು ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳೆರಡರಲ್ಲೂ ಹೆಚ್ಚಿಸುವುದು, ಸೋಂಕಿನ ಪ್ರಕರಣಗಳ ಸಂಖ್ಯೆ ಹೆಚ್ಚಾದಂತೆಲ್ಲಾ ಅವಶ್ಯಕವಾಗಬಹುದು. ಹಾಗಾಗಿ, ಮಾನ್ಯತೆ ಪಡೆದ ಪ್ರಯೋಗಾಲಯಗಳ ಸಂಖ್ಯೆ ಹೆಚ್ಚಾಗಬೇಕಾಗಿದೆ ಹಾಗೂ ಈ ಪ್ರಯೋಗಾಲಯಗಳಿಗೆ ಅಧಿಕೃತವಾದ ಹಾಗೂ ಉತ್ತಮ ಗುಣಮಟ್ಟದ ಕೋವಿಡ್–19 ಪರೀಕ್ಷಾ ಕಿಟ್‌ಗಳು ಸಾಕಷ್ಟು ಪ್ರಮಾಣದಲ್ಲಿ ಸರಬರಾಜಾಗಬೇಕು. ಐಸಿಎಂಆರ್ ಈಗಾಗಲೇ ಒಂದು ಪರೀಕ್ಷಾ ಕಿಟ್ ತಯಾರಕರ ಪಟ್ಟಿಗೆ ಮಾನ್ಯತೆಯನ್ನು ನೀಡಿದೆ.

ಮತ್ತು ವಿಶಾಲ ಭೂಭಾಗದಲ್ಲಿ, ಜನಸಮುದಾಯದಲ್ಲಿ ರೋಗ ಹರಡಿದೆಯೇ ಎಂದು ನಿರ್ಧರಿಸಲಿಕ್ಕಾಗಿ ಪೂರ್ವಪರೀಕ್ಷೆ ನಡೆಸಲು, ತ್ವರಿತವಾಗಿ ಗುರುತಿಸಲು ಹಾಗೂ ಪ್ರತಿಬಂಧಕ ಕಾರ್ಯಾಚರಣೆ ನಡೆಸಲು ಇನ್ನು ಮುಂದೆ ಸೀರಮ್ ಶಾಸ್ತ್ರೀಯ (ಸೆರೊಲಾಜಿಕಲ್) ಪರೀಕ್ಷಾ ಕಿಟ್‌ಗಳಿಗೆ ಹೆಚ್ಚಿನ ಅವಶ್ಯಕತೆ ಉಂಟಾಗುತ್ತದೆ. (ಈಗ ಸದ್ಯದಲ್ಲಿ ರೋಗನಿರ್ಣಯಕ್ಕೆ ಇದನ್ನು ಬಳಸುತ್ತಿಲ್ಲ). ಸರ್ಕಾರದ ನಿಯಂತ್ರಣ ವಿಧಾನಗಳಿಗೆ ಒಳಪಟ್ಟು ಕಾರ್ಯತಂತ್ರವನ್ನು ಹಾಗೂ ಕಾರ್ಯಾಚರಣೆಯನ್ನು ಯೋಜಿಸಲು ಇದು ಸಹಾಯಕವಾಗುತ್ತದೆ. ಪರೀಕ್ಷಾ ಕಿಟ್‌ಗಳ ಅವಶ್ಯಕತೆಯನ್ನು ನಿರ್ಧರಿಸುವ ಅಗತ್ಯವಿದೆ. ಅದಕ್ಕೆ ತಕ್ಕಂತೆ, ಐಸಿಎಂಆರ್‌ನಿಂದ ಮಾನ್ಯತೆ ಪಡೆದ ಪರೀಕ್ಷಾ ಕಿಟ್ ತಯಾರಕರಿಂದ ಪರೀಕ್ಷಾ ಕಿಟ್‌ಗಳ ಪೂರೈಕೆಗಾಗಿ ಕೋರಿಕೆಯನ್ನು ಸಲ್ಲಿಸಬೇಕು. ಐಸಿಎಂಆರ್‌ನಿಂದ ಮಾನ್ಯತೆ ಪಡೆದ ಪರೀಕ್ಷಾ ಕಿಟ್ ತಯಾರಕರ ವಿವರವಾದ ಪಟ್ಟಿ ಹಾಗೂ ಅವುಗಳ ಬೆಲೆಗಳನ್ನು ಅನುಬಂಧ ಎ 6ರಲ್ಲಿ ಸೂಚಿಸಲಾಗಿದೆ.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಅಗತ್ಯವಿದ್ದರೆ, ಐಸಿಎಂಆರ್‌ನಿಂದ ಮಾನ್ಯತೆ ಪಡೆದ ಸರ್ಕಾರಿ ಪ್ರಯೋಗಾಲಯಗಳಿಗೆ ಪರೀಕ್ಷಾ ಕಿಟ್‌ಗಳನ್ನು ಸಂಗ್ರಹಿಸುವುದು.
- ವಿವಿಧ ಹಂತಗಳಲ್ಲಿ ಪರೀಕ್ಷಾ ಕಿಟ್‌ಗಳನ್ನು ವಿತರಿಸಲು ಯೋಜನಾತ್ಮಕ ನೆರವು ನೀಡುವುದು.
- ಪರೀಕ್ಷಾ ಕಿಟ್‌ಗಳ ಬಳಕೆಯ ವಿಧಾನದ ಬಗ್ಗೆ ವೈದ್ಯಕೀಯ ಸಹಾಯಕ ಸಿಬ್ಬಂದಿಗೆ ತರಬೇತಿ ನೀಡುವುದು.
- ಸರ್ಕಾರಿ ಮಾರ್ಗದರ್ಶಿ ಸೂತ್ರಗಳಿಗೆ ಅನುಸಾರವಾಗಿ ಸರ್ಕಾರಿ ಆರೋಗ್ಯ ಚಿಕಿತ್ಸಾಲಯ/ಆಸ್ಪತ್ರೆಗಳಲ್ಲಿ ಕೋವಿಡ್–19 ಸ್ಯಾಂಪಲ್ (ಮಾದರಿ) ಸಂಗ್ರಹ ಘಟಕಗಳನ್ನು ರಚಿಸಲು ಹಾಗೂ ಅವುಗಳನ್ನು ಮಾನ್ಯತೆ ಪಡೆದ ಪ್ರಯೋಗಾಲಯಗಳಿಗೆ ಕಳುಹಿಸಲು ಸಂಘಟನಾ ನೆರವು ನೀಡುವುದು.
- ಪ್ರೀ ಸ್ಕ್ರೀನಿಂಗ್ ಕಿಟ್‌ಗಳನ್ನು ಸಂಗ್ರಹಿಸುವುದು ಹಾಗೂ ಮಾನ್ಯತೆ ಪಡೆದ ಪ್ರಯೋಗಾಲಯಗಳಿಗೆ ಸ್ಯಾಂಪಲ್‌ಗಳನ್ನು ತಲುಪಿಸಲು ಸುದೀರ್ಘ ಕಾಲ ತೆಗೆದುಕೊಳ್ಳುವ ದೂರದ ಹಾಗೂ ತಲುಪಲು ಕಷ್ಟವಿರುವ ಪ್ರದೇಶಗಳಿಗೆ ಕಿಟ್‌ಗಳನ್ನು ತಲುಪಿಸುವುದು.

**7.2.2.10 ಹೆಚ್ಚುವರಿ ಆಸ್ಪತ್ರೆ ಹಾಸಿಗೆಗಳನ್ನು ಸಜ್ಜುಗೊಳಿಸುವುದು:**

**ಆದ್ಯತೆ: ತತ್‌ಕ್ಷಣದ್ದು**

ಇಂದಿನವರೆಗೆ ಲಭ್ಯವಿರುವ ಅನುಭವವು, ಸೋಂಕು ತಗುಲಿದವರಲ್ಲಿ ಶೇ. 20 ರಷ್ಟು ಜನರಿಗೆ ಆಸ್ಪತ್ರೆಯಲ್ಲಿ ಶುಶ್ರೂಷೆ ಬೇಕಾಗುತ್ತದೆಂದು ಸೂಚಿಸುತ್ತದೆ. ಸಮುದಾಯದ ಮಧ್ಯೆ ಹರಡುವಿಕೆಯ ಹಂತದಲ್ಲಿ ವೈರಸ್‌ನ ಸೋಂಕಿನ ಪ್ರಮಾಣ ಹೆಚ್ಚಿದರೆ ಆಸ್ಪತ್ರೆಯಲ್ಲಿ ಶುಶ್ರೂಷೆ ಬೇಕಾಗುವ ಜನರ ಸಂಖ್ಯೆ ಅಪಾರವಾಗಿ ಹೆಚ್ಚುತ್ತದೆ. ಆದ್ದರಿಂದ ಸಮುದಾಯ ಆರೋಗ್ಯ ಕೇಂದ್ರ (ಸಿಹೆಚ್‌ಸಿ) ಹಾಗೂ ಜಿಲ್ಲೆ (ಜಿಲ್ಲಾ ಆಸ್ಪತ್ರೆ)ಗಳ ಮಟ್ಟದಲ್ಲಿ ಕೋವಿಡ್–19 ಸೋಂಕಿನ ರೋಗಿಗಳಿಗೆ ಚಿಕಿತ್ಸೆ ನೀಡಲು ಅಗತ್ಯವಿರುವಷ್ಟು ಸಂಖ್ಯೆಯ ಹಾಸಿಗೆಗಳ ಲಭ್ಯತೆಯ ಬಗ್ಗೆ ತುರ್ತಾಗಿ ಗಮನ ಹರಿಸಬೇಕಾಗಿದೆ. ಹೆಚ್ಚುವರಿ ಹಾಸಿಗೆಗಳ ಅವಶ್ಯಕತೆಯು ರೋಗಿಗಳ ಒಳಹರಿವಿನ ಅಂದಾಜಿನ ಮೇಲೆ ಅವಲಂಬಿಸಿದೆ. ಅದಕ್ಕೆ ಅನುಗುಣವಾಗಿ ಮೂಲಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ. ಕೋವಿಡ್–19 ಸೋಂಕಿನ ರೋಗಿಗಳಿಗೆ ತಾತ್ಕಾಲಿಕ ಆಸ್ಪತ್ರೆ ಸೌಲಭ್ಯಗಳನ್ನು ಹೇಗೆ ಸಜ್ಜುಗೊಳಿಸಬೇಕು ಎಂಬ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ಅನುಬಂಧ ಎ 8ರಲ್ಲಿ ಸೂಚಿಸಲಾಗಿದೆ.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಕೋವಿಡ್–19 ರೋಗಿಗಳಿಗಾಗಿ ವಿಶೇಷ/ತಾತ್ಕಾಲಿಕ ಆಸ್ಪತ್ರೆಗಳನ್ನು ಸಜ್ಜುಗೊಳಿಸಲು ಹಾಸಿಗೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಮೂಲ ಸೌಕರ್ಯಗಳನ್ನು ತ್ವರಿತವಾಗಿ ಸಂಗ್ರಹಿಸಲು ಸರ್ಕಾರಕ್ಕೆ ನೆರವು ನೀಡುವುದು.
- ಕೋವಿಡ್–19 ರೋಗಿಗಳಿಗಾಗಿ ಇರುವ ವಿಶೇಷ/ತಾತ್ಕಲಿಕ ಆಸ್ಪತ್ರೆಗಳ ಸಾಮಾನ್ಯ ನಿರ್ವಹಣೆಯಲ್ಲಿ ಸರ್ಕಾರಕ್ಕೆ ನೆರವು ನೀಡುವುದು.

### 7.2.2.11 ಆಮ್ಲಜನಕ ಹಾಗೂ ಕೃತಕ ಉಸಿರಾಟದ ಉಪಕರಣ (ವೆಂಟಿಲೇಟರ್) ಹೊಂದಿರುವ ತೀವ್ರ ನಿಗಾ ಘಟಕಗಳನ್ನು ಸಜ್ಜುಗೊಳಿಸುವುದು:

ಕೋವಿಡ್–19 ರೋಗಿಗಳಲ್ಲಿ ಆಸ್ಪತ್ರೆಗೆ ದಾಖಲಾದ ಗಮನಾರ್ಹ ಸಂಖ್ಯೆಯ ರೋಗಿಗಳಿಗೆ ಆಮ್ಲಜನಕ/ವೆಂಟಿಲೇಟರ್‌ನ ಸಹಾಯ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ಸೋಂಕಿನಿಂದ ಬಾಧೆಗೊಳಗಾಗಿರುವ ಇತರ ದೇಶಗಳಲ್ಲಿ ಕಂಡುಬಂದಿರುವಂತೆ ಸೋಂಕು ಹೆಚ್ಚಾಗಲಾರಂಭಿಸಿದರೆ, ಬಿಕ್ಕಟ್ಟನ್ನು ನಿಭಾಯಿಸಲು ತೀವ್ರ ನಿಗಾ ಘಟಕದ ಸಾಮರ್ಥ್ಯವನ್ನು ಹೆಚ್ಚಿಸುವುದು ಬಹು ಮುಖ್ಯವಾಗುತ್ತದೆ. ವಿಶ್ವದಾದ್ಯಂತ ಈ ವಿಶ್ವವ್ಯಾಧಿಯಿಂದ ಉಂಟಾದ ಸಾವಿನ ಸಂಖ್ಯೆ ಹೆಚ್ಚಾಗಲು ವೆಂಟಿಲೇಟರ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿರುವುದೇ ಪ್ರಮುಖ ಕಾರಣಗಳಲ್ಲಿ ಒಂದು. ಆದ್ದರಿಂದ ಅಂತಹ ಸೌಲಭ್ಯಗಳನ್ನು ಸಿದ್ಧಗೊಳಿಸಿಕೊಳ್ಳಲು ಬೇಕಾದ ಸರಿಯಾದ ಯೋಜನೆ ನಿರ್ಣಾಯಕವಾದದ್ದು. ವೆಂಟಿಲೇಟರ್‌ಗಳನ್ನು ಹೊಂದಿರುವ ಹೆಚ್ಚುವರಿ ಸಂಖ್ಯೆಯ ತೀವ್ರ ನಿಗಾ ಘಟಕಗಳ ಅವಶ್ಯಕತೆಯು ರೋಗಿಗಳ ಒಳಹರಿವಿನ ಅಂದಾಜಿನ ಮೇಲೆ ಅವಲಂಬಿಸಿರುತ್ತದೆ. ಅಂತಹ ವೆಂಟಿಲೇಟರ್‌ಗಳನ್ನು ಹೊಂದಿರುವ ತೀವ್ರ ನಿಗಾ ಘಟಕಗಳನ್ನು ಸಜ್ಜುಗೊಳಿಸುವ ಬಗ್ಗೆ ಹಾಗೂ ಅದಕ್ಕೆ ತಗಲುವ ವೆಚ್ಚಕ್ಕೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ಅನುಬಂಧ 9 ರಲ್ಲಿ ಸೂಚಿಸಲಾಗಿದೆ.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಕೋವಿಡ್–19 ರೋಗಿಗಳಿಗೆ ತಾಲೂಕು/ಜಿಲ್ಲಾ ಮಟ್ಟದಲ್ಲಿ ತೀವ್ರ ನಿಗಾ ಘಟಕಗಳನ್ನು ಸಜ್ಜುಗೊಳಿಸಲು ಬೇಕಾದ ಹಾಸಿಗೆಗಳು, ವೆಂಟಿಲೇಟರ್‌ಗಳು ಹಾಗೂ ಅದಕ್ಕೆ ಸಂಬಂಧಿಸಿದ ಇತರ ಮೂಲಸೌಕರ್ಯಗಳನ್ನು ತ್ವರಿತವಾಗಿ ಸಂಗ್ರಹಿಸಲು ಸರ್ಕಾರಕ್ಕೆ ನೆರವು ನೀಡುವುದು.

### 7.2.2.12 ಜಿಲ್ಲಾ ಮಟ್ಟದ ಕೋವಿಡ್–19 ಪ್ರತಿಸ್ಪಂದನ ಕೋಶ:

**ಆದ್ಯತೆ: ತತ್‌ಕ್ಷಣದ್ದು**

ಇಂತಹ ಬೃಹತ್ ಪ್ರಮಾಣದ ವಿಶ್ವವ್ಯಾಧಿಯನ್ನು ನಿಭಾಯಿಸಲು, ಪ್ರತಿಸ್ಪಂದನ ಕೋಶದೊಡನೆ ತೊಡಗಿಕೊಂಡಿರುವ/ಭಾಗಿಯಾಗಿರುವ ವಿವಿಧ ಪಾಲುದಾರರೊಡನೆ ಸರಿಯಾದ ಸಮನ್ವಯ ಸಾಧಿಸುವುದರ ಜೊತೆಗೆ ದತ್ತಾಂಶ ಸಂಗ್ರಹ, ಅವುಗಳ ವಿಶ್ಲೇಷಣೆ ಹಾಗೂ ಪ್ರಸಾರವು, ಜಿಲ್ಲೆಯೊಳಗೆ ಕಾರ್ಯತಂತ್ರವನ್ನು ಹಾಗೂ ಕಾರ್ಯನಿರ್ವಹಣೆಯನ್ನು ರೂಪಿಸಲು ಅವಶ್ಯಕವಾಗುತ್ತದೆ. ಆದ್ದರಿಂದ ಜಿಲ್ಲಾಮಟ್ಟದಲ್ಲಿ ಅದರಲ್ಲೂ ಅಪಾಯ ಸ್ಥಳಗಳಾದ ಜಿಲ್ಲೆಗಳಲ್ಲಿ ಕೋವಿಡ್–19 ಪ್ರತಿಸ್ಪಂದನಾ ಕೋಶವನ್ನು ರಚಿಸುವುದು ಅಗತ್ಯವಾಗುತ್ತದೆ. ಈ ಕೋವಿಡ್–19 ಪ್ರತಿಸ್ಪಂದನಾ ಕೋಶದ ಸರಳ ಸ್ಥಾಪಿತ ಕಾರ್ಯಾಚರಣೆಯ ವಿಧಾನ (ಎಸ್‌ಓಪಿ) ವನ್ನು ಅನುಬಂಧ ಎ 7ರಲ್ಲಿ ಸೂಚಿಸಲಾಗಿದೆ.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಜಿಲ್ಲಾ ಮಟ್ಟದಲ್ಲಿ ಕೋವಿಡ್–19 ಪ್ರತಿಸ್ಪಂದನಾ ಕೋಶವನ್ನು ರಚಿಸಲು ಯೋಜನಾತ್ಮಕ ನೆರವು ನೀಡುವುದು.
- ಸರ್ಕಾರಿ ಇಲಾಖೆಗಳ ಸಮನ್ವಯದೊಂದಿಗೆ ಈ ಕೋಶವನ್ನು ನಡೆಸಲು ಕೌಶಲ್ಯವಿರುವ ವ್ಯಕ್ತಿಗಳನ್ನು ನಿಯೋಜಿಸುವುದು.

**7.2.2.13 ಶುದ್ಧ ಕುಡಿಯುವ ನೀರು ಹಾಗೂ ಶೌಚದ ಸೌಕರ್ಯಗಳನ್ನು ಒದಗಿಸುವುದು:**

**ಆದ್ಯತೆ: ತತ್‌ಕ್ಷಣದ್ದು**

ಪ್ರಾಯಶಃ ವಿಶ್ವವ್ಯಾಧಿಯಿಂದಾಗಿ ತೀವ್ರವಾಗಿ ಸಮಸ್ಯೆಯಾಗುವ ವಿಷಯವೆಂದರೆ ಅದು ಶುದ್ಧ ಕುಡಿಯುವ ನೀರಿನ ಲಭ್ಯತೆ. ಕರ್ಫ್ಯೂನಿಂದಾಗಿ ಕುಡಿಯುವ ನೀರಿನ (ಸ್ಥಳೀಯ ಬಾವಿಗಳು, ನೀರಿನ ಪಂಪ್‌ಗಳು, ನೀರಿನ ಟ್ಯಾಂಕ್‌ಗಳು) ಮಾಮೂಲಿ ಮೂಲಗಳಿಗೆ ಖಂಡಿತವಾಗಿಯೂ ತಡೆಯೊಡ್ಡಲಾಗಿರುತ್ತದೆ. ಜನರು (ವಿಶಿಷ್ಟವಾಗಿ ತಮ್ಮ ಹಳ್ಳಿಗಳಿಗೆ ಇತ್ತೀಚಿಗೆ ಮರಳುತ್ತಿರುವ ವಲಸಿಗರಿಂದಾಗಿ ನೀರಿನ ಮೂಲಗಳ ಮೇಲೆ ಒತ್ತಡ ಹೆಚ್ಚುತ್ತಿರುವ ಪ್ರದೇಶದ ಜನರು) ಶುದ್ಧ ಕುಡಿಯುವ ನೀರನ್ನು ಪಡೆದುಕೊಳ್ಳುವುದನ್ನು ಖಾತ್ರಿ ಪಡಿಸುವುದು ಗಂಭೀರವಾದ ವಿಷಯ. ಇದನ್ನು ನಿರ್ಲಕ್ಷಿಸುವುದು ಕೋವಿಡ್–19 ರ ದುರಂತದೊಂದಿಗೆ ಮತ್ತೊಂದು ಸಾರ್ವಜನಿಕ ಆರೋಗ್ಯದ ದುರಂತಕ್ಕೆ ಎಡೆಮಾಡಿಕೊಡಬಹುದು.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಆರೋಗ್ಯ ಸೇವಾ ಸೌಕರ್ಯಗಳು, ಕ್ವಾರಂಟೈನ್ ಸೌಕರ್ಯಗಳು ಇರುವೆಡೆ ಹಾಗೂ ಅತ್ಯಂತ ಅಪಾಯದ ಜನವಸತಿ ಪ್ರದೇಶಗಳಲ್ಲಿ ಶುದ್ಧ ನೀರಿನ ಲಭ್ಯತೆ ಹೆಚ್ಚಿಸಲು ಸರ್ಕಾರಕ್ಕೆ ನೆರವು ನೀಡುವುದು.
- ಹಳ್ಳಿಗಳ ಮಟ್ಟದಲ್ಲಿ ನಿಸ್ಸಂದೇಹವಾಗಿಯೂ ಕುಡಿಯಲು ಯೋಗ್ಯವಾದ ನೀರಿನ ಸೌಕರ್ಯಗಳನ್ನು ಒದಗಿಸುವುದು.
- ಕುಟುಂಬಗಳು 2–3 ದಿನಗಳಿಗಾಗುವಷ್ಟು ನೀರನ್ನು ಸಂಗ್ರಹಿಸಲು ಸಾಧ್ಯವಾಗುವಂತಹ ನೀರಿನ ಸಂಗ್ರಹದ ಪಾತ್ರೆಗಳನ್ನು ವಿತರಿಸಬೇಕು.
- ನೀರನ್ನು ಹೇಗೆ ಶುದ್ಧವಾಗಿರಿಸಿಕೊಳ್ಳಬೇಕು ಎಂಬುದಕ್ಕೆ ಮಾಹಿತಿ ಶಿಕ್ಷಣ ಹಾಗೂ ಸಂವಹನ (ಐಇಸಿ) ದ ಸಾಮಗ್ರಿಯನ್ನು ತಯಾರು ಮಾಡಿ, ಪ್ರಸಾರ ಮಾಡಬೇಕು.

**7.2.2.14 ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆಯನ್ನು ಹೆಚ್ಚಿಸುವುದು:**

**ಆದ್ಯತೆ: ತತ್‌ಕ್ಷಣದ್ದು**

ರೋಗಿಗಳ ಶುಶ್ರೂಷೆಯ ಒತ್ತಡ ಹೆಚ್ಚುತ್ತಿರುವುದು ಹಾಗೂ ಆರೋಗ್ಯ ಸೇವಾ ಕಾರ್ಯಕರ್ತರು ಹಾಗೂ ಸಾಮಾನ್ಯ ಜನತೆ ಪಿಪಿಇಗಳನ್ನು ಬಳಸುವುದು ಹೆಚ್ಚುತ್ತಿರುವುದು ಸೋಂಕನ್ನು ಹರಡಬಲ್ಲ ಜೈವಿಕ ವೈದ್ಯಕೀಯ ತ್ಯಾಜ್ಯದ ಮಟ್ಟವನ್ನು ಹೆಚ್ಚಿಸಿದೆ. ಆದ್ದರಿಂದ ಅಸ್ತಿತ್ವದಲ್ಲಿರುವ ಜೈವಿಕ ವೈದ್ಯಕೀಯ ತ್ಯಾಜ್ಯದ ಸುರಕ್ಷಿತ ವಿಲೇವಾರಿಯನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಪ್ರಕರಣಗಳು ಹೆಚ್ಚಾದಂತೆ ಈ ಅಗತ್ಯವು ಮತ್ತಷ್ಟು ಹೆಚ್ಚುವ ನಿರೀಕ್ಷೆಯಿದೆ. ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸಲು ವಿಶೇಷ ಗಮನವನ್ನು ನೀಡಬೇಕು. ಅದನ್ನು ವಿಲೇವಾರಿ ಮಾಡುವವರಿಗಾಗಲೀ, ಅವರ ಸಂಪರ್ಕಕ್ಕೆ ಬರುವವರಿಗಾಗಲೀ ಹಾಗೆಯೇ ಸಾಮಾನ್ಯ ಜನತೆಗಾಗಲೀ ಅದು ಅಪಾಯವನ್ನು ಉಂಟು ಮಾಡದಿರುವಂತೆ ನಿರ್ವಹಿಸಬೇಕು.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಇದಕ್ಕೆ ವಿಶಿಷ್ಟವಾದ ಕೌಶಲ್ಯಗಳು ಬೇಕಾಗಿರುವುದರಿಂದ ಮತ್ತು ಅದಕ್ಕೆ ವಿಶೇಷ ಮಂಜೂರಾತಿಗಳು ಅಗತ್ಯವಾದ್ದರಿಂದ ನಾಗರಿಕ ಸಮಾಜದ ಸಂಸ್ಥೆಗಳ ನೇರ ಭಾಗವಹಿಸುವಿಕೆ ಸೀಮಿತವಾಗುತ್ತದೆ.
- ಈಗಿರುವ ಜೈವಿಕ ವೈದ್ಯಕೀಯ ತ್ಯಾಜ್ಯದ ಸುರಕ್ಷಿತ ವಿಲೇವಾರಿಯ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರಕ್ಕೆ ನೆರವು ನೀಡುವುದು.
- ಜೈವಿಕ ವೈದ್ಯಕೀಯ ತ್ಯಾಜ್ಯವು ಹೆಚ್ಚುವ ನಿರೀಕ್ಷೆ ಇರುವುದರಿಂದ ಸ್ವತಾಪಕಾರಿ ವ್ಯವಸ್ಥೆ (ಆಟೋಕ್ಲೇವ್), ಸುಡುವುದು (ಇನ್ಸಿನರೇಷನ್) ಹಾಗೂ ಸುರಿಹೊಂಡದ (ಲ್ಯಾಂಡ್‌ಫಿಲ್) ಸೌಕರ್ಯಗಳನ್ನು ಸಜ್ಜುಗೊಳಿಸಿಕೊಳ್ಳಲು ಸರ್ಕಾರಕ್ಕೆ ನೆರವು ನೀಡುವುದು.
- ಹೊಸದಾಗಿ ಆರಂಭಿಸಲಾಗಿರುವ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿರುವ ಸಂಸ್ಥೆಗಳಿಗೆ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ನಿರ್ವಹಿಸುವ ಕುರಿತಾದ ಮಾರ್ಗದರ್ಶಿ ಸೂತ್ರಗಳನ್ನು ತಿಳಿಸಲು ಹಾಗೂ ಸಿಬ್ಬಂದಿಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ನೆರವು ನೀಡುವುದು.

**7.2.2.15 ಆರೋಗ್ಯ ವ್ಯವಸ್ಥೆಯೊಳಗೆ ಶೈತ್ಯ ಸರಪಳಿ (ಕೋಲ್ಡ್ ಚೈನ್) ಯ ಸೌಕರ್ಯವನ್ನು ಹೆಚ್ಚಿಸುವುದು:**

**ಆದ್ಯತೆ: ತತ್‌ಕ್ಷಣದ್ದು**

ಭಾರತದ – ವಿಶೇಷವಾಗಿ ಸಂಪರ್ಕ ಕಡಿಮೆ ಇರುವ ಜಿಲ್ಲೆಗಳಲ್ಲಿ – ಎರಡನೆಯ ಹಾಗೂ ಮೂರನೆಯ ಹಂತದ ಆರೋಗ್ಯ ಕೇಂದ್ರಗಳಲ್ಲಿ ಸೂಕ್ಷ್ಮವಾದ ಔಷಧಿಗಳಿಗೆ ಹಾಗೂ ರೋಗ ನಿರ್ಣಯದ ರಾಸಾಯನಿಕಗಳಿಗೆ ಅಗತ್ಯವಾದ ಸಾಕಷ್ಟು ಶೈತ್ಯಾಗಾರದ ಸೌಕರ್ಯಗಳು ಇಲ್ಲದಿರುವುದರಿಂದ, ಈ ವಿಶ್ವವ್ಯಾಧಿಯನ್ನು ಹೋರಾಡುವ ಸಂದರ್ಭದಲ್ಲಿ ಅವುಗಳ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಅದನ್ನು ಬಲಪಡಿಸಬೇಕಾದದ್ದು ಮುಖ್ಯವಾದದ್ದು. ವಿಶ್ವವ್ಯಾಧಿಯನ್ನು ನಿರ್ವಹಿಸುವಲ್ಲಿ ಮುಖ್ಯವಾದ ಭಾಗವೆಂದರೆ ರೋಗಿಗಳಿಗೆ ದುಬಾರಿಯೂ, ಸೂಕ್ಷ್ಮವೂ ಆದ ಔಷಧಿಗಳನ್ನು ಕೊಟ್ಟು ತೀವ್ರವಾಗಿ ಶುಶ್ರೂಷೆ ಮಾಡುವುದು. ಆದ್ದರಿಂದ, ಈ ಸೌಕರ್ಯಗಳ ಲಭ್ಯತೆಯನ್ನು ಲೆಕ್ಕ ಹಾಕಿ, ಕೊರತೆಯನ್ನು ನೀಗಿಸಿ ಆರೋಗ್ಯ ಸೇವಾ ವ್ಯವಸ್ಥೆಯ ತಡೆರಹಿತ ಕಾರ್ಯಾಚರಣೆಗೆ ಅನುವು ಮಾಡಿಕೊಡುವುದು ಮುಖ್ಯ.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಅಗತ್ಯ ಔಷಧಿಗಳ ಮುಂಜಾಗರೂಕತಾ ದಾಸ್ತಾನನ್ನು ಅದರಲ್ಲೂ ತೀವ್ರವಾದ ಹಠಾತ್ ಶ್ವಾಸಕೋಶದ ಸೋಂಕು (ಎಸ್‌ಎಆರ್‌ಐ) ತಗುಲಿರುವ ರೋಗಿಗಳಿಗೆ ಗಂಭೀರವಾದ ಚಿಕಿತ್ಸೆ ನೀಡಲು ಅಗತ್ಯವಿರುವ ಔಷಧಿಗಳ ದಾಸ್ತಾನನ್ನು ಸಜ್ಜುಗೊಳಿಸಿಕೊಳ್ಳಲು ಸರ್ಕಾರಕ್ಕೆ ನೆರವು ನೀಡುವುದು.
- ಸೂಕ್ಷ್ಮವಾದ ಔಷಧಿಗಳನ್ನು ನಿಗದಿತ ಸಮಯದಲ್ಲಿ ಸಾಗಿಸುವುದನ್ನೂ ಒಳಗೊಂಡಂತೆ ಶೀತ ಸರಪಳಿಯನ್ನು ರಚಿಸಲು ಸರ್ಕಾರಕ್ಕೆ ನೆರವು ನೀಡುವುದು.
- ಹಲವಾರು ಪಾಲುದಾರರೊಡಗೂಡಿ ಲಭ್ಯವಿರುವ ಔಷಧಿಗಳು ಹಾಗೂ ರೋಗನಿರ್ಣಯದ ರಾಸಾಯನಿಕಗಳ ದಾಸ್ತಾನಿನ ದತ್ತಾಂಶ ಸಂಚಯವನ್ನು ರಚಿಸುವ ಮೂಲಕ ಅವುಗಳು ಬಳಕೆಗೆ ಸಿಗುವಂತಾಗಲು ಸರ್ಕಾರಕ್ಕೆ ನೆರವು ನೀಡುವುದು.

**7.2.2.16 ಆರೋಗ್ಯ ಸೇವೆಗೆ ಸಂಬಂಧಿಸಿದ ಖಾಲಿ ಹುದ್ದೆಗಳ ಭರ್ತಿ:**
**ಆದ್ಯತೆ: ಆ ನಂತರದ್ದು**

ವೈದ್ಯಕೀಯ ಹಾಗೂ ಅರೆವೈದ್ಯಕೀಯ ಸಿಬ್ಬಂದಿಯು ಕೋವಿಡ್–19 ವಿಶ್ವವ್ಯಾಧಿಯ ವಿರುದ್ಧದ ಹೋರಾಟದಲ್ಲಿ ಅತ್ಯಂತ ದೊಡ್ಡ ಅಸ್ತ್ರಗಳು. ಮೇಲ್ಕಾಣಿಸಿದ ಪ್ರಸಕ್ತ ಆರೋಗ್ಯ ಸೇವೆಯ ಮೂಲಸೌಕರ್ಯಗಳ ಕುರಿತಾದ ಸಾಂದರ್ಭಿಕ ವಿಶ್ಲೇಷಣೆಯು ವಿವಿಧ ಹಂತಗಳಲ್ಲಿ ವೈದ್ಯಕೀಯ ಹಾಗೂ ಅರೆವೈದ್ಯಕೀಯ ಸಿಬ್ಬಂದಿಗೆ ಸಂಬಂಧಿಸಿದಂತೆ ಇರುವ ಖಾಲಿ ಹುದ್ದೆಗಳ ಕುರಿತಾದ ಕರಾರುವಾಕ್ಕಾದ ಮಾಹಿತಿಯನ್ನು ನೀಡುತ್ತದೆ. ಈ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಬೇಕು. ಅಂತಿಮ ವರ್ಷದ ಎಂ ಬಿ ಬಿ ಎಸ್ ವಿದ್ಯಾರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದು ಒಂದು ಸಾಧ್ಯತೆ. ಒಳ್ಳೆಯ ಆರೋಗ್ಯ ಹೊಂದಿರುವ, ಕೆಲಸ ಮಾಡಲು ಸಾಮರ್ಥ್ಯವಿರುವ ನಿವೃತ್ತ ಉದ್ಯೋಗಿಗಳನ್ನು ಸೇರಿಸಿಕೊಳ್ಳುವುದು ಇನ್ನೊಂದು ಸಾಧ್ಯತೆ.

**ನಾಗರಿಕ ಸಮಾಜದ ಸಂಸ್ಥೆಗಳು ನೆರವು ನೀಡಬಹುದಾದ ಕ್ಷೇತ್ರಗಳು:**

- ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸರ್ಕಾರಕ್ಕೆ ನೆರವು ನೀಡುವುದು.

**8. ಸಾಮಾನ್ಯ ಯೋಜನೆ:**

ವಿಶಿಷ್ಟವಾಗಿ ಕೋವಿಡ್–19 ಪ್ರತಿಸ್ಪಂದನಾ ಕೋಶಕ್ಕೆ ಸಂಬಂಧಪಟ್ಟಂತೆ, ಸ್ಥಳೀಯ ಸಂಸ್ಥೆಗಳು, ಸರ್ಕಾರ ಹಾಗೂ ನಾಗರಿಕ ಸಮಾಜದ ಸಂಸ್ಥೆಗಳ ಕೆಲಸದ ಯೋಜನೆಗೆ ಹಾಗೂ ಅದರ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡುವ ಕೆಲವು ಮುಖ್ಯ ಅಂಶಗಳನ್ನು ಈ ವಿಭಾಗದಲ್ಲಿ ಪಟ್ಟಿ ಮಾಡಲಾಗಿದೆ.

**8.1 ಸಂಭವನೀಯ ನಾಗರಿಕ ಸಮಾಜದ ಪಾಲುದಾರರ ಪಟ್ಟಿ:**

ಈ ಹೊತ್ತಿಗೆ ಕೋವಿಡ್–19 ಸಾಂಕ್ರಾಮಿಕ ರೋಗವು ಹಿಂದೆಂದೂ ಕಂಡಿರದ, ಜಾಗತಿಕ ಆರೋಗ್ಯದ ಹಾಗೂ ಮಾನವೀಯತೆಯ ಬಿಕ್ಕಟ್ಟಾಗಿ ಹೊರಹೊಮ್ಮಿದೆ. ಅತ್ಯಂತ ಬಡವರು ಹಾಗೂ ತೀವ್ರವಾಗಿ ಅಂಚಿಗೆ ತಳ್ಳಲ್ಪಟ್ಟವರು ಅತೀವವಾಗಿ ಬಾಧೆಗೆ ಸಿಲುಕುತ್ತಾರೆ ಹಾಗೂ ಬಿಕ್ಕಟ್ಟು ಮುಂದುವರೆದಂತೆ ಅತಿ ಹೆಚ್ಚಾಗಿ ಅನಾನುಕೂಲಕ್ಕೊಳಗಾಗುತ್ತಾರೆ.

ಆದ್ದರಿಂದ ನಾವು ಒಂದು ಕಡೆ ಆಹಾರ ಭದ್ರತೆ, ರೋಗ ಪರೀಕ್ಷಾ ವ್ಯವಸ್ಥೆ, ಜನತೆಯಲ್ಲಿ ತಿಳುವಳಿಕೆ ಮೂಡಿಸುವುದು, ವೈಯಕ್ತಿಕ ಸಂರಕ್ಷಣಾ ಉಪಕರಣಗಳನ್ನು ದೊರಕಿಸಿಕೊಳ್ಳುವುದು ಮುಂತಾದ ಅಲ್ಪಕಾಲೀನ/ತತ್‌ಕ್ಷಣದ ಅವಶ್ಯಕತೆಗಳ ಕುರಿತಾದ ಕ್ರಮಗಳನ್ನು ರೂಪಿಸಬೇಕು.

ಹಾಗೂ ಇನ್ನೊಂದು ಕಡೆ ವಿವಿಧ ಹಂತಗಳಲ್ಲಿ ಆರೋಗ್ಯ ಸೇವೆಯ ಮೂಲ ಸೌಕರ್ಯಗಳನ್ನು ಬಲಪಡಿಸುವುದು, ಬಡವರು ಹಾಗೂ ಅನಾನುಕೂಲಕ್ಕೊಳಗಾದವರಿಗೆ ಜೀವನೋಪಾಯವನ್ನು ಯೋಜಿಸುವುದು ಮುಂತಾದ ದೀರ್ಘಕಾಲೀನ ಕ್ರಮಗಳನ್ನು ರೂಪಿಸಬೇಕು. ಹೀಗೆ ಎರಡನ್ನೂ ಒಳಗೊಳ್ಳುವ ಪ್ರತಿಸ್ಪಂದನೆಯ ಯೋಜನೆಯನ್ನು ರೂಪಿಸಬೇಕು.

ಹಾಗೂ ಈ ಪ್ರತಿಸ್ಪಂದನೆಯು ಬೃಹತ್ ಪ್ರಮಾಣದಲ್ಲಿ ನಡೆಯಬೇಕು. ಹಾಗಾಗಿ ಯಾವುದೇ ಒಂದು ಎನ್‌ಜಿಓ ಅಥವಾ ಸಂಸ್ಥೆ ಅಥವಾ ಇಲಾಖೆ ಏಕೈಕವಾಗಿ ಇಂತಹ ಬಿಕ್ಕಟ್ಟಿಗೆ ಸ್ಪಂದಿಸಲು ಸಾಧ್ಯವಾಗುವುದಿಲ್ಲ. ನಮಗೆ ವಿವಿಧ ಕೌಶಲ್ಯಗಳ ಸಮೂಹದ ಅವಶ್ಯಕತೆಯೂ ಇದೆ ಹಾಗೂ ಇವೆಲ್ಲವೂ ಒಂದು ಸಂಸ್ಥೆಯಲ್ಲಿ ಸಿಗದಿರಬಹುದು. ಆದ್ದರಿಂದ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ವಿಶ್ವಾಸಾರ್ಹ ಎನ್‌ಜಿಓಗಳ ಪಟ್ಟಿಯನ್ನು ಪೂರ್ವಭಾವಿಯಾಗಿ ತಯಾರು ಮಾಡುವ ಅಗತ್ಯವಿದೆ. ಏಕೆಂದರೆ ಅಲ್ಪಾವಧಿ ಸೂಚನೆಯಲ್ಲಿ ಅವರನ್ನು ಒಟ್ಟುಗೂಡಿಸಬಹುದು ಹಾಗೂ ಕೆಲಸಕ್ಕೆ ನಿಯೋಜಿಸಬಹುದು.

ಅದರಂತೆಯೇ, ನಾಗರಿಕ ಸಮಾಜದ ಸಂಸ್ಥೆಗಳ (ಸಿಎಸ್‌ಓ) ಜೊತೆಗೆ ಸಂಪರ್ಕವಿರುವ ಇಲಾಖೆಗಳು/ಸಂಸ್ಥೆಗಳನ್ನು ಒಳಗೊಂಡಂತಹ ಆಂತರಿಕ ಇಲಾಖೆಯ ಕಾರ್ಯಾಚರಣೆಯ ತಂಡಗಳನ್ನು ರಚಿಸುವ ಮೂಲಕ ಅಂತಹ ಒಂದು ಪಟ್ಟಿಯನ್ನು ತಯಾರು ಮಾಡುವ ಕುರಿತು ಸರ್ಕಾರವು ಯೋಚಿಸಬಹುದು.

ಮತ್ತೊಂದೆಡೆ ನಾಗರಿಕ ಸಮಾಜದ ಸಂಸ್ಥೆಗಳು, ವಿಭಿನ್ನ ಕೌಶಲ್ಯಗಳನ್ನು ಹೊಂದಿರುವ ಎನ್‌ಜಿಓಗಳು ಒಂದೆಡೆ ಸೇರಿ ದೊಡ್ಡ ಪ್ರಮಾಣದ ಸಂಯೋಜಿತ ಕಾರ್ಯಕ್ರಮವನ್ನು ನೀಡಲಾಗುವಂತಹ ಜಾಲವನ್ನು ರಚಿಸಬೇಕು.

**8.2 ಸ್ವಯಂ ಸೇವಕರನ್ನು ಒಟ್ಟುಗೂಡಿಸುವುದು ಹಾಗೂ ಅವರ ಸುರಕ್ಷತೆ:**

ಮೇಲೆ ಸೂಚಿಸಿರುವಂತೆ ಈ ಪ್ರತಿಸ್ಪಂದನೆಯ ನಿರ್ಣಾಯಕ ಭಾಗವು ಪ್ರಮಾಣ ಹಾಗೂ ಕೌಶಲ್ಯವನ್ನು ಕುರಿತಾದದ್ದು. ಹಾಗಾಗಿ ಇಂತಹ ಪ್ರತಿಸ್ಪಂದನೆಯನ್ನು ನಿರ್ವಹಿಸಲು ನಮಗೆ ಬಹಳ ದೊಡ್ಡ ಸಂಖ್ಯೆಯ ಸ್ವಯಂ ಸೇವಕರು ಬೇಕಾಗುತ್ತಾರೆ. ಆದ್ದರಿಂದ ಪ್ರತಿಯೊಂದು ಬಡಾವಣೆಯಲ್ಲೂ ಮುಂಚಿತವಾಗಿಯೇ ಪೂರ್ವಯೋಜನೆ ಮಾಡಿ ಸ್ಥಳೀಯ ಕಾರ್ಯಕರ್ತರ ದೊಡ್ಡ ಪಡೆಯನ್ನೇ ಸೇರಿಸಬೇಕು. ಸ್ಥಳೀಯ ಭಾಷೆ ಹಾಗೂ ಸಂಸ್ಕೃತಿಯ ತಿಳುವಳಿಕೆ ಹಾಗೂ ಜ್ಞಾನವು ಈ ಸ್ವಯಂಸೇವಕರಿಗೆ ಅತ್ಯಂತ ಮುಖ್ಯವಾದದ್ದು.

ಜೊತೆಗೆ ತುರ್ತು ಪ್ರತಿಸ್ಪಂದನೆಯ ಬಗ್ಗೆ, ತಮ್ಮ ತಮ್ಮ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಪ್ರಕ್ರಿಯೆಯ ಬಗ್ಗೆ ಹಾಗೂ ಇಂತಹ ಆರೋಗ್ಯ ಹಾಗೂ ಮಾನವೀಯತೆಯ ಬಿಕ್ಕಟ್ಟಿನ ಸಂದರ್ಭದಲ್ಲಿ ಕೆಲಸಮಾಡುವಾಗ ಉಂಟಾಗುವ ಮಾನಸಿಕ ಒತ್ತಡವನ್ನು ನಿರ್ವಹಿಸಿಕೊಳ್ಳುವುದು ಹೇಗೆ ಎಂಬುದರ ಕುರಿತು ಸರಿಯಾದ ಮನೋಧರ್ಮವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗುತ್ತದೆ.

**8.3 ಪರಿಣಾಮಗಳನ್ನು ಹೆಚ್ಚಿಸಲು ಸಹಭಾಗಿತ್ವ:**

ಒಂದು ಯೋಜನೆಯನ್ನು ಸರಿಯಾಗಿ ಅನುಷ್ಠಾನಗೊಳಿಸಲು ಸಹಭಾಗಿತ್ವವು ಅತ್ಯಂತ ನಿರ್ಣಾಯಕ ಕಾರ್ಯತಂತ್ರಗಳಲ್ಲಿ ಒಂದು. ಎಲ್ಲಾ ಹಂತಗಳಲ್ಲೂ – ಸರ್ಕಾರದ ಮಟ್ಟದಲ್ಲಿ ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳ ನಡುವೆ ಹಾಗೂ ವಿವಿಧ ನಾಗರಿಕ ಸಮಾಜದ ಸಂಸ್ಥೆಗಳ ನಡುವೆ – ನಾವು ಸಹಭಾಗಿತ್ವವನ್ನು ಹೊಂದಿರಬೇಕು.

ಸಹಭಾಗಿತ್ವವು ಈ ಮುಖ್ಯ ಉದ್ದೇಶಗಳನ್ನು ಈಡೇರಿಸುತ್ತದೆ:

- ಇದು ಪ್ರಯತ್ನಗಳು ಪುನರಾವರ್ತನೆಯಾಗುವುದನ್ನು ಕಡಿಮೆ ಮಾಡುತ್ತದೆ ಹಾಗೂ ಇದರಿಂದ ತಾಂತ್ರಿಕ, ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳು ಉತ್ತಮವಾಗಿ ನಿಯೋಜಿಸಲ್ಪಡುತ್ತವೆ.
- ಕಡಿಮೆ ಕಾಲಾವಧಿಯಲ್ಲಿ ಇಡೀ ಸಮುದಾಯದ ಮೇಲೆ ಸಕಾರಾತ್ಮಕವಾಗಿ ಪ್ರಭಾವ ಬೀರುವಂತೆ ಕಾರ್ಯಾಚರಣೆಯನ್ನು ದೊಡ್ಡ ಮಟ್ಟಕ್ಕೆ ಏರಿಸುತ್ತದೆ.
- ಕಲಿತಿರುವುದನ್ನು ಬೇಗನೆ ಅರ್ಥಮಾಡಿಕೊಳ್ಳಲು ಹಾಗೂ ಕಾರ್ಯತಂತ್ರದ ಅನುಷ್ಠಾನವನ್ನು ಉತ್ತಮಪಡಿಸಲು ಇದು ಸಹಾಯ ಮಾಡುತ್ತದೆ.

# 9 ಅನುಬಂಧ ಎ

## 9.1 ಎ–1 ಆಶಾ ಕಾರ್ಯಕರ್ತರ ಸಾಮರ್ಥ್ಯ ಅಭಿವೃದ್ಧಿ:

ವಿಶ್ವವ್ಯಾಧಿಯ ಪ್ರಸರಣಕ್ಕೆ ತಡೆಹಾಕಿ ನಿರ್ಬಂಧಿಸುವಲ್ಲಿ ಮತ್ತು ಅದರ ಪ್ರಭಾವವನ್ನು ನಿಭಾಯಿಸುವಲ್ಲಿ ಪರಿಣಾಮಕಾರಿ ಯೋಧರಾಗುವ ಮುಂಚೂಣಿಯಲ್ಲಿರುವ ಆರೋಗ್ಯ ಕಾರ್ಯಕರ್ತರಿಗೆ ಒಂದು ಜವಾಬ್ದಾರಿಯಿದೆ ಮತ್ತು ಅದನ್ನು ಸಮುದಾಯದ ನಡುವೆ ನಿರ್ವಹಿಸಲು ಅಗತ್ಯವಾದ ಸಂಪರ್ಕ ಮತ್ತು ಪ್ರಭಾವವೂ ಅವರಿಗೆ ಇದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮುಂಚೂಣಿ ಕಾರ್ಯಕರ್ತರಾದ

ಆಶಾ ಕಾರ್ಯಕರ್ತೆಯರಿಗೆ, ಎಎನ್‌ಎಮ್‌ಗಳಿಗೆ ತರಬೇತಿ ನೀಡಲು ನಿಗದಿಯಾಗಿರುವ ಕೋವಿಡ್–19 ತರಬೇತುಗಾರರ ಕೈಪಿಡಿ, 'ಕೋವಿಡ್–19 ಮಾರ್ಗದರ್ಶಿ– ಎಎನ್‌ಎಮ್, ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿಸ್ಪಂದನೆ ಮತ್ತು ಪ್ರಸರಣ ತಡೆಯ ಕ್ರಮಗಳ ತರಬೇತಿ ಉಪಕರಣ ಕಿಟ್' ಅನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಿಸಿದೆ. ಮುಂಚೂಣಿ ಕಾರ್ಯಕರ್ತರಿಗೆ ಈ ಕೈಪಿಡಿಯನ್ನು ಒಂದೂವರೆ ಗಂಟೆಗಳ ಪ್ರತ್ಯೇಕ ತರಬೇತಿ ಕಾರ್ಯಕ್ರಮಕ್ಕಾಗಲಿ ಅಥವಾ ಒಂದು ವಿಶಾಲ ತರಬೇತಿಯ ಭಾಗವಾಗಿ ಆಗಲಿ ಉಪಯೋಗಿಸಬಹುದು.

**ತರಬೇತಿ ಕೈಪಿಡಿಯ ರಚನೆ ಕೆಳಕಂಡಂತಿದೆ.**

| | | |
|---|---|---|
| ಅಧಿವೇಶನ–1 | ಕೋವಿಡ್–19ನ್ನು ಅರ್ಥಮಾಡಿಕೊಳ್ಳುವುದು, ಪ್ರತಿಸ್ಪಂದನೆ ಮತ್ತು ನಿಯಂತ್ರಣ ಕ್ರಮಗಳಿಗೆ ಸಂವಹನ.<br>ಎ. ಆರೋಗ್ಯ ಕಾರ್ಯಕರ್ತರು ಮತ್ತು ಐಸಿಡಿಎಸ್ ಕಾರ್ಯಕರ್ತರ ಪಾತ್ರಗಳು ಮತ್ತು ಜವಾಬ್ದಾರಿಗಳು | 15 ನಿಮಿಷ |
| ಅಧಿವೇಶನ–2 | ಪ್ರತಿಬಂಧಿಸುವಿಕೆ: ಸಮುದಾಯದಲ್ಲಿ ಸುರಕ್ಷಣೆಯ ಆಚರಣೆಗಳು<br>ಎ. ಸುರಕ್ಷಕ ಸೇವೆಗಳು: ಆಶಾ/ಎಎನ್‌ಎಮ್/ಎಫ್‌ಎಲ್‌ಡಬ್ಲ್ಯುಗಳು ಸಮುದಾಯ ಮಟ್ಟದಲ್ಲಿ ಕೋವಿಡ್–19 ಹರಡಿದಾಗ ಅದಕ್ಕೆ ಸಿದ್ಧರಾಗಿರಲು ಸಂವಹನ | 20 ನಿಮಿಷ |
| ಅಧಿವೇಶನ–3 | ಸಾಮುದಾಯಿಕ ಕಣ್ಗಾವಲು | 10 ನಿಮಿಷ |
| ಅಧಿವೇಶನ–4 | ಬೆಂಬಲದ ಸಾರ್ವಜನಿಕ ಆರೋಗ್ಯ ಸೇವೆಗಳು: ಸಮುದಾಯ ಮತ್ತು ಕುಟುಂಬಗಳು<br>ಎ. ನಿಯಂತ್ರಣ ಸೇವೆಗಳು [ಹೋಂ ಕ್ವಾರಂಟೈನ್ (ಸಂಪರ್ಕ ನಿಷೇಧ ಗೃಹವಾಸ), ಗೃಹ ಚಿಕಿತ್ಸೆ, ತಾರತಮ್ಯ ಹಾಗೂ ಕಳಂಕದ ಸಮಸ್ಯೆ, ಎಚ್‌ಆರ್‌ಜಿಗಳಿಗೆ ಬೆಂಬಲ ಸೇವೆ]– 5 ನಿಮಿಷ<br>ಬಿ. ರೋಗದ ಕುರಿತಾದ ಕಟ್ಟುಕಥೆ ಮತ್ತು ತಪ್ಪು ಅಭಿಪ್ರಾಯ, ವಲಯ ಆಧಾರಿತ ಪ್ರತಿಬಂಧಕದ ವರದಿ, ಸಾಂಕ್ರಾಮಿಕ ಹಂತದಲ್ಲಿ ಸಾಮುದಾಯಿಕ ಸೋಂಕು ಹರಡುವಿಕೆ– 5 ನಿಮಿಷ<br>ಸಿ. ಕೋವಿಡ್–19ಕ್ಕೆ ಸಂಬಂಧಿಸಿದಂತೆ ಮಾಹಿತಿ, ಶಿಕ್ಷಣ, ಸಂವಹನ (ಐಇಸಿ)ದ ಪರಿಣಾಮಕಾರಿ ಉಪಯೋಗ– 5 ನಿಮಿಷ | 15 ನಿಮಿಷ |
| ಅಧಿವೇಶನ–5 | ಕಳಂಕ ಮತ್ತು ತಾರತಮ್ಯದ ನಿರ್ವಹಣೆ | 20 ನಿಮಿಷ |
| ಅಧಿವೇಶನ–6 | ಸಂವಹನ, ಆರೋಗ್ಯ ಮತ್ತು ಐಸಿಡಿಎಸ್ ಕಾರ್ಯಕರ್ತರ ವೈಯಕ್ತಿಕ ಸುರಕ್ಷತೆ | 10 ನಿಮಿಷ |
| ಅಧಿವೇಶನ–7 | ನಗರ ಪ್ರದೇಶಗಳಲ್ಲಿ ವಿಶೇಷ ಸಂವಹನ ಅವಶ್ಯಕತೆ | 10 ನಿಮಿಷ |

ಕೆಳಗಿನ ಲಿಂಕ್ ಮೂಲಕ ಟೂಲ್‌ಕಿಟ್ ಮತ್ತು ತರಬೇತಿ ಸ್ಲೈಡ್‌ಗಳನ್ನು (ಸಚಿತ್ರ ಮಾದರಿ) ಡೌನ್‌ಲೋಡ್ ಮಾಡಿಕೊಳ್ಳಬಹುದು.

https://www.mohfw.gov.in/pdf/FacilitatorGuideCOVID19 27%20March.pdf

https://www.mohfw.gov.in/pdf/2COVID19PPT25MarchPPTWithAnimation.pdf

## 9.2 ಎ–2: ಪಿಪಿಇ ಅವಶ್ಯಕತೆಗಳು:

ವಿವಿಧ ಆಸ್ಪತ್ರೆ ಸಂದರ್ಭಗಳಲ್ಲಿ ಉಪಯೋಗಿಸುವ ಪಿಪಿಇಗಳು (ವೈಜ್ಞಾನಿಕ ರೀತಿಯಲ್ಲಿ ಪಿಪಿಇ ಉಪಯೋಗಿಸುವುದು ಕುರಿತು ಎಮ್‌ಓಎಚ್‌ಎಫ್‌ಡಬ್ಲ್ಯು ಮಾರ್ಗದರ್ಶನದಿಂದ ಸ್ವೀಕರಿಸಿದ್ದು)

| ಕ್ರಮಸಂಖ್ಯೆ | ವಿಭಾಗ | ಸ್ಥಳ | ಶಿಫ಼ಾರಸು ಮಾಡಿದ ಪಿಪಿಇ |
|---|---|---|---|
| 1 | ಹೊರರೋಗಿ | ತುರ್ತು ಶ್ರೇಣೀಕರಣ ಸ್ಥಳ (ಟ್ರಯೇಜ್ ಏರಿಯಾ) | ಎನ್ 95 ಮಾಸ್ಕ್ ಮತ್ತು ಕೈ ಗವಸು |
| 2 | ಹೊರರೋಗಿ | ತಪಾಸಣಾ ಪ್ರದೇಶ(ಸ್ಕ್ರೀನಿಂಗ್) ನೆರವಿನ ಕಟ್ಟೆ, ನೋಂದಣಿ ಕಟ್ಟೆ | ಎನ್ 95 ಮಾಸ್ಕ್ ಮತ್ತು ಕೈಗವಸು |
| 3 | ಹೊರರೋಗಿ | ಉಷ್ಣಾಂಶ ದಾಖಲೆ ನಿಲಯ | ಎನ್ 95 ಮಾಸ್ಕ್ ಮತ್ತು ಕೈಗವಸು |
| 4 | ಹೊರರೋಗಿ | ತುರ್ತು ಚಿಕಿತ್ಸಾ ನಿರೀಕ್ಷಣಾ ಸ್ಥಳ | ಎನ್ 95 ಮಾಸ್ಕ್ ಮತ್ತು ಕೈಗವಸು |
| 5 | ಹೊರರೋಗಿ | ವೈದ್ಯನ ಕೊಠಡಿ | ಎನ್ 95 ಮಾಸ್ಕ್ ಮತ್ತು ಕೈಗವಸು |
| 6 | ಹೊರರೋಗಿ | ಶೌಚ ಸಿಬ್ಬಂದಿ | ಎನ್ 95 ಮಾಸ್ಕ್ ಮತ್ತು ಕೈಗವಸು |
| 7 | ಹೊರರೋಗಿ | ರೋಗಿಯೊಂದಿಗಿನ ಸಂದರ್ಶಕರು | ಮೂರು ಪದರ ವೈದ್ಯಕೀಯ ಮಾಸ್ಕ್ |

| | | | |
|---|---|---|---|
| 8 | ಒಳರೋಗಿ | ವ್ಯಕ್ತಿ/ನಿಗದಿತ ಸಂಖ್ಯೆ ರೋಗಿಗಳ ಪ್ರತ್ಯೇಕಿತ ಕೋಣೆ | ಎನ್ 95 ಮಾಸ್ಕ್ ಮತ್ತು ಕೈಗವಸು |
| 9 | ಒಳರೋಗಿ | ತುರ್ತು ಚಿಕಿತ್ಸೆ/ತೀವ್ರ ನಿಗಾ ಘಟಕ | ಪೂರ್ಣ ಪಿಪಿಇ, ಎನ್95 ಮಾಸ್ಕ್, ಕೈ ಗವಸು, ಗೌನ್, ತಲೆ ಹೊದಿಕೆ–ಶೂ ಹೊದಿಕೆ. |
| 10 | ಒಳರೋಗಿ | ಶೌಚ | ಎನ್ 95 ಮಾಸ್ಕ್ ಮತ್ತು ಕೈಗವಸು |
| 11 | ಒಳರೋಗಿ | ಕೋವಿಡ್‌ಯೇತರ ಚಿಕಿತ್ಸಾ ಪ್ರದೇಶ | ಆಸ್ಪತ್ರೆ ಸೋಂಕು ಪ್ರತಿಬಂಧಕ ಕ್ರಮದಂತೆ |
| 12 | ಒಳರೋಗಿ | ರೋಗಿಯ ಉಪಚಾರಕರು | ಮೂರು ಪದರದ ಮಾಸ್ಕ್ |
| 13 | ತುರ್ತು | ತುರ್ತು ರೋಗಿ ಉಪಚಾರಕ(ತೀವ್ರ ಹಠಾತ್ ಶ್ವಾಸರೋಗಿ ಅಲ್ಲದವರಿಗೆ–ಎಸ್‌ಎಆರ್‌ಐ) | ಎನ್ 95 ಮಾಸ್ಕ್ ಮತ್ತು ಕೈಗವಸು |
| 14 | ತುರ್ತು ಚಿಕಿತ್ಸೆ | ಎಸ್‌ಎಆರ್‌ಐ ರೋಗಿಯ ಉಪಚಾರಕ | ಪೂರ್ತಿ ಪಿಪಿಇ |
| 15 | ಆಂಬ್ಯುಲೆನ್ಸ್ | ವೆಂಟಿಲೇಟರ್‌ನಲ್ಲಿರುವ ರೋಗಿಯ ಸಾಗಣೆ | ಎನ್ 95 ಮಾಸ್ಕ್ ಮತ್ತು ಕೈಗವಸು |
| 16 | ಆಂಬ್ಯುಲೆನ್ಸ್ | ಎಸ್‌ಎಆರ್‌ಐ ರೋಗಿಯ ಸಾಗಣೆಯಲ್ಲಿ ಉಪಚಾರಕರು | ಪೂರ್ತಿ ಪಿಪಿಇ |
| 17 | ಆಂಬ್ಯುಲೆನ್ಸ್ | ಚಾಲಕರು | ಮೂರು ಪದರ ವೈದ್ಯಕೀಯ ಮಾಸ್ಕ್, ಕೈಗವಸು |
| 18 | ಪೂರಕ | ಪ್ರಯೋಗಾಲಯ | ಪೂರ್ತಿ ಪಿಪಿಇ |
| 19 | ಪೂರಕ | ಮೃತ ದೇಹದೊಂದಿಗೆ ಕೆಲಸ ಮಾಡುವುದು | ಎನ್ 95 ಮಾಸ್ಕ್ ಮತ್ತು ಕೈಗವಸು |
| 20 | ಪೂರಕ | ಶವಪರೀಕ್ಷೆ | ಪೂರ್ತಿ ಪಿಪಿಇ |
| 21 | ಪೂರಕ | ಶೌಚದ ಕೆಲಸ | ಎನ್ 95 ಮಾಸ್ಕ್ ಮತ್ತು ಕೈಗವಸು |
| 22 | ಪೂರಕ | ಸಿಎಸ್‌ಎಸ್‌ಡಿ–ಕೇಂದ್ರ ಸೋಂಕು ರಹಿತ ಸರಬರಾಜು ಇಲಾಖೆ/ಲಾಂಡ್ರಿ | ಎನ್ 95 ಮಾಸ್ಕ್ ಮತ್ತು ಕೈಗವಸು |
| 23 | ಪೂರಕ | ಇನ್ನುಳಿದ ಬೆಂಬಲ ಸೇವೆಗಳು | ಪಿಪಿಇ ಅಗತ್ಯವಿಲ್ಲ |

### 9.3 ಎ 3: ಕ್ವಾರಂಟೈನ್ ಸೌಲಭ್ಯ ಸ್ಥಾಪನೆಗೆ ಮಾರ್ಗದರ್ಶಕ ಸೂತ್ರ:

ಕ್ವಾರಂಟೈನ್ (ರೋಗ ಪ್ರಸರಣೆ ಪ್ರತಿಬಂಧಕ ಕಡ್ಡಾಯ ವಸತಿವಾಸ)ಗೆ ಅಗತ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರವು ನಿಗದಿಮಾಡಿದೆ.

NCDC Guidelines for Quarantine Facilities ಅನ್ನು ಕ್ಲಿಕ್ ಮಾಡಿ

### 9.4 ಎ 4: ಪ್ರತ್ಯೇಕ ವಾಸ ಸೌಲಭ್ಯ/ ವಾರ್ಡ್ ಸ್ಥಾಪನೆಗೆ ಮಾರ್ಗದರ್ಶಿ ಸೂತ್ರ:

ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರವು ಮೇಲ್ಕಂಡ ಸೌಲಭ್ಯಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಕ ಸೂತ್ರಗಳನ್ನು ನಿಗದಿಪಡಿಸಿದೆ.

NCDC Guidelines for Isolation Facility/ward ತಾಣವನ್ನು ಕ್ಲಿಕ್ ಮಾಡಿ.

### 9.5 ಶಂಕಿತ ಅಥವಾ ಖಚಿತವಾದ ರೋಗಿಯ ಸಾಗಣೆಗೆ ಮಾರ್ಗದರ್ಶಿ ಸೂತ್ರ:

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಶಂಕಿತ ಅಥವಾ ಖಚಿತ ಪ್ರಕರಣದ ಸಾಗಣೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಿದೆ

ಆ ಕೈಪಿಡಿ ಕೆಳಕಂಡ ಅಂಶಗಳನ್ನು ಹೊಂದಿದೆ:

- ಶಂಕಿತ/ಖಚಿತ ಪ್ರಕರಣದ ಸಾಗಣೆಗೆ ಸ್ಥಾಪಿತ ಕಾರ್ಯನಿರ್ವಹಣಾ ವಿಧಾನ(ಎಸ್‌ಓಪಿ).
- ಕೇಳಬೇಕಾದ ಪ್ರಶ್ನೆಗಳು
- ಬಳಕೆವಸ್ತು ಮತ್ತು ಸಲಕರಣೆಗಳ ಪಟ್ಟಿ
- ಆಂಬ್ಯುಲೆನ್ಸ್ ಸಿಬ್ಬಂದಿ ವೈಜ್ಞಾನಿಕವಾಗಿ ಪಿಪಿಇ ಉಪಯೋಗಿಸಲು ನಿರ್ದೇಶನ.

- 1% ಸೋಡಿಯಂ ಹೈಡ್ರೋಕ್ಲೋರೈಟ್ ದ್ರಾವಣವನ್ನು ತಯಾರಿಸುವ ವಿಧಾನ.
- ಆಸ್ಪತ್ರೆ ಪೂರ್ವ ಆರೈಕೆ ನಿಭಾಯಿಸುವಿಕೆಯಲ್ಲಿ ಸೋಂಕನ್ನು ತಡೆಗಟ್ಟುವುದು.
- ಒಟ್ಟಾರೆ ಮೇಲ್ವಿಚಾರಣೆಯ ಪಟ್ಟಿ.

### 9.6 ಎ 6 ವಿವಿಧ ಹಂತಗಳಲ್ಲಿ ರೋಗಪರೀಕ್ಷೆ ಪ್ರಯತ್ನಗಳಿಗೆ ಬೆಂಬಲ:

ತೀರಾ ಇತ್ತೀಚಿನ ಮಾಹಿತಿಗಳನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಮ್ಆರ್) ಜಾಲತಾಣದಿಂದ ಪಡೆಯಬಹುದು.

https://icmr.nic.in

ಯಾವುದೇ ರೋಗನಿರ್ಣಯ ಪರೀಕ್ಷಾ ಕಿಟ್ ಆಗಲಿ ಐಸಿಎಂಆರ್ (ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ)ನಿಂದ ಅಧಿಕೃತವಾಗಿ ಅಂಗೀಕೃತವಾಗಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಜಾಲತಾಣದಲ್ಲಿ ಕ್ಲಿಕ್ ಮಾಡಿ.

ಅಮೆರಿಕಾದ ಎಫ್‌ಡಿಎ ಮತ್ತು ಯುರೋಪಿನ ಸಿಇ ಕಿಟ್‌ಗಳನ್ನು ಐಸಿಎಮ್ಆರ್ ಮಾನ್ಯ ಮಾಡಿದೆ. ಅಧಿಕೃತವಾಗಿ ಅಂಗೀಕರಿಸಲ್ಪಟ್ಟ ಎಲ್ಲ ಪ್ರತಿಕಾಯ (ಆ್ಯಂಟಿಬಾಡಿ) ಕಿಟ್‌ಗಳನ್ನು ಖಾತರಿಪಡಿಸಿಕೊಳ್ಳಲು ಸಹ ಜಾಲತಾಣಕ್ಕೆ ಹೋಗಿ here ಕ್ಲಿಕ್ ಮಾಡಿರಿ. (ಈ ವರದಿ ಬಿಡುಗಡೆಯಾದ ದಿನದಂದು ರೋಗನಿರ್ಣಯ ಪರೀಕ್ಷೆಗೆ (ಡಯಾಗ್ನಾಸಿಸ್) ಆ್ಯಂಟಿಬಾಡಿ ಆಧಾರಿತ ಕಿಟ್‌ಗಳನ್ನು ಇನ್ನೂ ಅಂಗೀಕರಿಸಿಲ್ಲ. ಆದರೆ ಪ್ರೀ ಸ್ಕ್ರೀನಿಂಗ್ (ತಪಾಸಣಾ) ಗೆ ಅಗತ್ಯವೆನಿಸಿದರೆ ಇದು ಉಪಯುಕ್ತವಾಗಬಹುದು.)

2019 ನಾವಲ್ ಕರೋನ ವೈರಾಣುವಿಗೆ ಸಂಬಂಧಿಸಿದಂತೆ ಮಾದರಿ (ಸ್ಪೆಸಿಮೆನ್) ಸಂಗ್ರಹ, ಪ್ಯಾಕ್ ಮಾಡುವುದು, ಅದರ ಸಾಗಾಣಿಕೆ ಇವುಗಳಿಗೆ ಸಂಬಂಧಿಸಿದ ಮಾರ್ಗದರ್ಶಕ ಸೂತ್ರಗಳಿಗೆ ಸಹ here ಜಾಲತಾಣದಲ್ಲಿ ಕ್ಲಿಕ್ ಮಾಡಿ.

ಈಗಿರುವ ಟೆಸ್ಟಿಂಗ್ (ಪರೀಕ್ಷಾ) ಕಾರ್ಯತಂತ್ರವನ್ನು ಅರಿತುಕೊಳ್ಳಲು ಮತ್ತು ಈ ಕಾರ್ಯತಂತ್ರವನ್ನು ಅನುಸರಿಸಿ ಯಾವುದೇ ಹಂತದಲ್ಲಿ 100% ಎಲ್ಲರಿಗೂ ಟೆಸ್ಟಿಂಗ್ (ಪರೀಕ್ಷೆ) ಆಗುವಂತೆ ನೆರವು ನೀಡಲು ಸಹ here ಜಾಲತಾಣದಲ್ಲಿ ಕ್ಲಿಕ್ ಮಾಡಿರಿ.

ಮಾದರಿ ಕಳಿಸಲು ನಿಮಗೆ ಹತ್ತಿರ ಇರುವ ಅಂಗೀಕಾರ ಪಡೆದ ಪ್ರಯೋಗಾಲಯವನ್ನು ಹುಡುಕಲು ಎಲ್ಲ ಪ್ರಯೋಗಾಲಯಗಳೂ ಇರುವ ಪಟ್ಟಿಯನ್ನು ನೋಡಿರಿ ಮತ್ತು ಎಲ್ಲಾ ಪ್ರಯೋಗಾಲಯಗಳ ನಕ್ಷೆ ನೋಟವನ್ನು ನೋಡಿರಿ.

- ನಕ್ಷೆ ನೋಟ Map View
- ಸರ್ಕಾರಿ ಪ್ರಯೋಗಾಲಯಗಳು ಎಲ್ಲೆಲ್ಲಿ here ಮತ್ತು here
- ವಿಆರ್‌ಡಿಎಲ್ (ವೈರಾಣು ಸಂಶೋಧನಾ ಮತ್ತು ಪರೀಕ್ಷಾ ಪ್ರಯೋಗಾಲಯಗಳು) ಲ್ಯಾಬ್‌ಗಳು VRDLs
- ಖಾಸಗಿ ಪ್ರಯೋಗಾಲಯಗಳು Private Labs

### 9.7 ಎ 7: ಜಿಲ್ಲಾ ಕೋವಿಡ್ ಪ್ರತಿಸ್ಪಂದನಾ ಕೋಶಕ್ಕೆ ಎಸ್‌ಓಪಿ (ಸ್ಥಾಪಿತ ಗುಣಮಟ್ಟದ ಕಾರ್ಯಾಚರಣೆ ವಿಧಾನ):

ಎಲ್ಲಾ ಕೋವಿಡ್ ಪ್ರತಿಸ್ಪಂದನಾ ಕೋಶಕ್ಕೆ ಅಗತ್ಯವಾದ ಎಸ್‌ಓಪಿ (ಸ್ಥಾಪಿತ ಗುಣಮಟ್ಟದ ಕಾರ್ಯಾಚರಣೆ ವಿಧಾನ) ಯನ್ನು SOP For State/District Control Room ನಲ್ಲಿ ಪಡೆಯಬಹುದು.

**ಎಸ್‌ಓಪಿ ಯು ಈ ಕೆಳಗಿನ ಉಪ ತಂಡಗಳನ್ನು ರಚಿಸಬೇಕಾದ ಅವಶ್ಯಕತೆಯನ್ನು ಸೂಚಿಸುತ್ತದೆ.**

- ಕಣ್ಗಾವಲು ತಂಡ
- ಕಾಲ್ ಸೆಂಟರ್ ನಿರ್ವಹಣಾ ತಂಡ
- ಮಾಧ್ಯಮ ನಿರ್ವಹಣಾ ತಂಡ
- ಮಾದರಿ ಪತ್ತೆ ಹಚ್ಚುವ ತಂಡ
- ಖಾಸಗಿ ಆಸ್ಪತ್ರೆ ನಿರ್ವಹಣಾ ತಂಡ
- ಸಾಗಾಣಿಕೆ ಮತ್ತು ಆಂಬ್ಯುಲೆನ್ಸ್ ನಿರ್ವಹಣಾ ತಂಡ

- ಅಂತರ ಇಲಾಖೆ ಸಮನ್ವಯ ತಂಡ.

**ಪರಿಗಣಿಸಬೇಕಾದ ಇನ್ನಷ್ಟು ಹೆಚ್ಚುವರಿ ವಿಷಯಗಳನ್ನು ಕೆಳಗೆ ಕೊಡಲಾಗಿದೆ.**

- ಈ ಕೋಶಕ್ಕೆಂದೇ ಒಂದು ಮೊಬೈಲ್ ಸಂಖ್ಯೆ, ವಾಟ್ಸ್‌ಆಪ್ ಇರುವ ಸಂಖ್ಯೆ, ಫ಼ೇಸ್‌ಬುಕ್ ಮತ್ತು ಟ್ವಿಟರ್ ಖಾತೆಗಳನ್ನು ಮೀಸಲಿಡುವುದು.
- ಸಂಪರ್ಕಕ್ಕೆ ಅಗತ್ಯವಾದ ಈ ವಿವರಗಳನ್ನು ಸಮುದಾಯದ ನಡುವೆ ಮಾತ್ರವಲ್ಲದೆ ಎಲ್ಲಾ ಅಧಿಕಾರಿ ವೃಂದ ಮತ್ತು ಭಾಗೀದಾರರ ನಡುವೆಯೂ ಹಂಚಿಕೊಳ್ಳಬೇಕು. ಉದಾ: ಜಿಲ್ಲಾಧಿಕಾರಿ, ಎಡಿಸಿ, ಸಿಎಮ್‌ಓಎಚ್, ಡಿಎಸ್‌ಡಬ್ಲ್ಯುಓ, ಪಿಎಓ, ಡಿಪಿಓ, ಎಸ್‌ಪಿ, ಡಿಎಸ್‌ಪಿ, ಪೊಲೀಸ್ ಠಾಣಾಧಿಕಾರಿ ಮತ್ತು ಮಾರುಕಟ್ಟೆಯ ಸಂಘಗಳು, ಆಸ್ಪತ್ರೆಗಳು, ದವಾಖಾನೆಗಳು, ವೈದ್ಯರು, ಸಿಎಸ್‌ಓಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಎಸ್‌ಎಚ್‌ಸಿಗಳು ಇತ್ಯಾದಿ.
- ಕೋಶದ ಕೆಲಸಕ್ಕಾಗಿ ಸಿಬ್ಬಂದಿಯನ್ನು ಖಾಯಂ ಆಗಿ ನಿಯೋಜಿಸುವುದು.
- ಎಲ್ಲರಿಗೂ ತಿಳಿಯುವಂತಹ ರೋಗಲಕ್ಷಣದ ಪಟ್ಟಿ, ರೋಗ ಪ್ರತಿಬಂಧಕ ಕ್ರಮಗಳ ಪಟ್ಟಿ ಮತ್ತು ಸಿಬ್ಬಂದಿಗೆ 20 ಸೆಕೆಂಡ್ ಕಾಲ ಕೈ ತೊಳೆಯಲು ಅವಕಾಶ ಇರತಕ್ಕದ್ದು. (ಇದನ್ನೆಲ್ಲಾ ನಾವೇ ಮಾಡಿಕೊಳ್ಳಬಹುದು)
- ಪ್ರಶ್ನೆಗಳನ್ನು ಉತ್ತರಿಸಲು ಪ್ರತ್ಯಕ್ಷವಾಗಿ ಅಥವಾ ಅಂತರ್ಜಾಲದಲ್ಲಿ ವೈದ್ಯರ ಲಭ್ಯತೆ.
- ರೇಷನ್ ಅಂಗಡಿಗಳ ದೂರವಾಣಿ ಸಂಖ್ಯೆ
- ಬ್ಯಾಂಕ್ ಶಾಖೆಯ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ
- ಕೋಶಕ್ಕೆ ಕರೆಮಾಡಿದ ಎಲ್ಲ ನಗರಾಡಳಿತದ ಹೆಸರುಗಳೊಂದಿಗೆ ದಾಖಲಿಸಬೇಕು.
- ಪ್ರಯಾಣದಲ್ಲಿ ತಲುಪಲು ಕಷ್ಟವಾದ ಎಲ್ಲಾ ದೂರದ ಪ್ರದೇಶ, ಹಿಂದುಳಿದ ಪ್ರದೇಶಗಳ ಪಟ್ಟಿಯನ್ನು ತಯಾರಿಸುವುದು.
- ತಾಲೂಕು ಪಂಚಾಯತಿ, ಗ್ರಾಮಪಂಚಾಯತಿ ಮುಖ್ಯಸ್ಥರು, ಬಿಡಿಓಗಳ ಹೆಸರು ಮತ್ತು ಅವರ ದೂರವಾಣಿ ಸಂಖ್ಯೆಗಳನ್ನು ಪಟ್ಟಿಮಾಡುವುದು.
- ವಲಸೆ ನಡೆಯುವ ಸ್ಥಳಗಳ ಕುರಿತಾದ ನಿರ್ದಿಷ್ಟ ಮಾಹಿತಿ ಮತ್ತು ವಾಪಸಾದ ವಲಸಿಗರ ಕುರಿತು ಮಾಹಿತಿ ಸಂಗ್ರಹಿಸಿ ಆ ಸ್ಥಳಗಳಿಗೆ ಸ್ವಯಂಸೇವಕರನ್ನು ನಿಯೋಜಿಸುವುದು.
- ಜೀವನಾವಶ್ಯಕ ವಸ್ತುಗಳ ಅಂಗಡಿಗಳು, ಮಂಡಿ ಮತ್ತು ಕಾರ್ಖಾನೆಗಳೊಂದಿಗೆ ಸಂಪರ್ಕ ಬೆಳೆಸಿ. (ಬ್ರೆಡ್ ಕಾರ್ಖಾನೆ, ದೊಡ್ಡ ಹಿಟ್ಟಿನ ಗಿರಣಿ)

**ಕೋಶದ ಕೆಲವು ಪ್ರಾಥಮಿಕ ಕರ್ತವ್ಯಗಳು:**

- ರೇಷನ್ ಅಂಗಡಿಗಳಲ್ಲಿ ಆಹಾರ ದಾಸ್ತಾನು ಎಷ್ಟಿದೆ ಎಂದು ನಿಯತವಾಗಿ ವಿಚಾರಿಸುವುದು.
- ಔಷಧಿ ಅಂಗಡಿಗಳಲ್ಲಿ ಔಷಧ ದಾಸ್ತಾನು ಎಷ್ಟಿದೆ ಎಂದು ನಿಯತವಾಗಿ ವಿಚಾರಿಸಿಕೊಳ್ಳುವುದು (ಮುಖ್ಯ ಔಷಧಿಗಳ ಪಟ್ಟಿ ತಯಾರಿಸುವುದು).
- ಆಂಬ್ಯುಲೆನ್ಸ್‌ಗಳು ನಿಯತವಾಗಿ ಕರ್ತವ್ಯ ನಿರತವಾಗಿವೆಯೇ ಎಂದು ವಿಚಾರಿಸುವುದು.
- ಮೂಲಭೂತ ಧಾನ್ಯದ ದಾಸ್ತಾನು ಇದೆಯೇ ಎಂದು ವರ್ತಕ ಸಂಘಗಳಿಂದ ಮಾಹಿತಿ ಸಂಗ್ರಹಿಸುವುದು.
- ಕಾಲೇಜು, ಎನ್‌ಎಸ್‌ಎಸ್, ಸಂಘಸಂಸ್ಥೆಗಳು ಎಲ್ಲ ಕಡೆಯಿಂದ ಸ್ವಯಂಸೇವಕರನ್ನು ಸೇರಿಸಿಕೊಂಡು, ಅವರ ದೂರವಾಣಿ ಸಂಖ್ಯೆಗಳ ಪಟ್ಟಿ ಮಾಡುವುದು.
- ನಗರದ ವಾರ್ಡ್‌ಗಳಲ್ಲಿ, ತಾಲೂಕು ಕೇಂದ್ರಗಳಲ್ಲಿ, ಗ್ರಾಮಪಂಚಾಯತಿಗಳಲ್ಲಿ ಕರಪತ್ರಗಳ ವಿತರಣೆ, ಧ್ವನಿವರ್ಧಕದಲ್ಲಿ ಪ್ರಕಟಣೆ.
- ಲಭ್ಯವಿರುವ ಎಲ್ಲಾ ವಾಟ್ಸ್‌ಆಪ್ ಸಂಖ್ಯೆಗಳಿಗೂ ಪ್ರತಿದಿನವೂ ಪ್ರತಿಬಂಧಕ ಕ್ರಮ, ಪೌಷ್ಟಿಕತೆ ಇವುಗಳ ಕುರಿತು ಅಧಿಕೃತ ಮಂಜೂರಾತಿ ಇರುವ ಸಂದೇಶ (ಮೆಸೇಜ್)ಗಳನ್ನು ಕಳಿಸುವುದು.
- ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಐಸಿಡಿಎಸ್ ಕಾರ್ಯಕರ್ತರು, ಶಿಕ್ಷಾ ಮಿತ್ರರು ಇತ್ಯಾದಿ ಅನೇಕ ರೀತಿಯ ಜನರ ದೂರವಾಣಿ ಸಂಖ್ಯೆಗಳನ್ನು ಸಂಗ್ರಹಿಸುವುದು, ಅವರಿಗೆ ಕೋಶದ ಕುರಿತು ಮೆಸೇಜ್ ಕಳಿಸುವುದು.

**9.8 ಎ 8: ಹೆಚ್ಚುವರಿ ಆಸ್ಪತ್ರೆ ಹಾಸಿಗೆಗಳು:**

ಸ್ಥಳೀಯವಾಗಿ ಸ್ಥಾಪಿತವಾದ ವಿಧಾನಗಳು ಮತ್ತು ತಿಳುವಳಿಕೆಗೆ ಅನುಗುಣವಾಗಿ ಹೆಚ್ಚುವರಿ ಆಸ್ಪತ್ರೆ ಹಾಸಿಗೆಗಳನ್ನು ಸೃಷ್ಟಿಸುವುದು. ಮಾರ್ಗದರ್ಶಕ ಸೂತ್ರಗಳು ಅಗತ್ಯವಿದೆ ಎನಿಸಿದಾಗ ಸಂಬಂಧಿಸಿದ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಓ) ಅಥವಾ ಐಸಿಎಚ್‌ಎಸ್‌ನ ಮಾರ್ಗದರ್ಶಕ ಸೂತ್ರಗಳನ್ನು ಉಪಯೋಗಿಸಿಕೊಳ್ಳಬಹುದು. ನೋಡಿರಿ: SARI Treatment Center guidelines, WHO, IPHS guidelines for different levels of healthcare facilities .

.

### 9.9 ಎ 9: ಹೆಚ್ಚುವರಿ ಗಂಭೀರ ಚಿಕಿತ್ಸಾ ಘಟಕಗಳನ್ನು ಸೃಷ್ಟಿಸುವುದು:

ಈಗಾಗಲೇ ಸ್ಥಳೀಯವಾಗಿ ಸ್ಥಾಪಿತವಾದ ವಿಧಾನಗಳನ್ನು ಮತ್ತು ಜ್ಞಾನವನ್ನು ಉಪಯೋಗಿಸಿಕೊಂಡು ಗಂಭೀರ ಚಿಕಿತ್ಸಾ ಘಟಕಗಳನ್ನು ಆರಂಭಿಸಬಹುದು. ಅದಕ್ಕೆ ಮಾರ್ಗದರ್ಶಕ ಸೂತ್ರಗಳು ಅವಶ್ಯಕ ಎನಿಸಿದರೆ, ICU design guidelines,ISCCM 2020 ಅನ್ನು ನೋಡಿರಿ.

### 9.10 ಎ 10: ಮೌಲ್ಯಮಾಪನ ಸಾಧನಕ್ಕೆ ಮಾರ್ಗದರ್ಶನ:

ಎಲ್ಲಾ ನಿರ್ದಿಷ್ಟ ಮೌಲ್ಯಮಾಪನ ಸಾಧನಗಳನ್ನು, ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಓ) ಸೇವಾ ಲಭ್ಯತೆ ಮತ್ತು ಸಿದ್ಧತೆ ಮೌಲ್ಯಮಾಪನದ ಸಾಧನದ (SARA–ಸರ್ವಿಸ್ ಅವೈಲೆಬಿಲಿಟಿ ಅಂಡ್ ರೆಡಿನೆಸ್ ಅಸೆಸ್ಮೆಂಟ್) ಮಾದರಿಯಲ್ಲಿ ಮಾಡಬಹುದು ಅಥವಾ (ಐಪಿಎಚ್ ಸರ್ವೇಕ್ಷಣೆ ಮುಂತಾದ) ಈ ಮೊದಲಿನ ಸರ್ಕಾರಿ ಮಾಪನದ ಆಧಾರದ ಮೇಲೆ ರಚಿಸಿಕೊಳ್ಳಬಹುದು. ಅದು ನಿರ್ದಿಷ್ಟವಾಗಿ COVID19.SARA,WHO,IPHS,India ಅನ್ನು ಅನುಸರಿಸತಕ್ಕದ್ದು.

## 10 ಅನುಬಂಧ ಬಿ

### 10.1 ಬಿ–1: ಅವಶ್ಯಕ ಆಹಾರಗಳ ಕುರಿತಾದ ಮಾರ್ಗದರ್ಶಿ ಸೂತ್ರ:

ಅಂತರರಾಷ್ಟ್ರೀಯ ಸ್ಫಿಯರ್ ಸಂಸ್ಥೆಯ ಗುಣಮಟ್ಟದ ಆಧಾರದ ಮೇಲೆ ಕಾರ್ಯಾಚರಣೆಯನ್ನು ಯೋಜಿಸುವುದಕ್ಕೆ ಬೇಕಾದ ಕಾರ್ಯನಿಯೋಜಕ ಮಾರ್ಗದರ್ಶಿ ಸೂತ್ರವನ್ನು ಈ ಕೆಳಗೆ ನೀಡಲಾಗಿದೆ. (2100 ಕಿಲೊ ಕ್ಯಾಲೊರಿಗಳು ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ)

ಈ ವಿಷಯದ ಹೆಚ್ಚಿನ ವಿವರಗಳಿಗೆ ಸ್ಫಿಯರ್ ಕೈಪಿಡಿಯನ್ನು Sphere Handbook ನೋಡಬಹುದು. ಆಹಾರ ಪದಾರ್ಥಗಳು (5 ಜನರ 1 ಕುಟುಂಬಕ್ಕೆ –2 ವಯಸ್ಕರು ಹಾಗೂ 3 ಮಕ್ಕಳಿಗೆ 21 ದಿನಗಳ ಅವಧಿಗೆ. ಆಹಾರ ಪದ್ಧತಿಯ ಆಧಾರದ ಮೇಲೆ ಈ ಆಹಾರದ ಪದಾರ್ಥಗಳು ಮತ್ತು ಅವುಗಳ ಬೆಲೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಬಹುದು).

| ಕ್ರಮ ಸಂಖ್ಯೆ | ಪದಾರ್ಥಗಳು | ತಲಾ ಒಂದು ಕುಟುಂಬಕ್ಕೆ |
|---|---|---|
| 1 | ಅಕ್ಕಿ (ಕೆಜಿಗಳಲ್ಲಿ) | 25 |
| 2 | ಗೋಧಿ (ಕೆಜಿಗಳಲ್ಲಿ) | 5 |
| 3 | ಖಾದ್ಯ ತೈಲ (ಲೀಟರ್‌ಗಳಲ್ಲಿ) | 2 |
| 4 | ಬೇಳೆ (ಕೆಜಿಗಳಲ್ಲಿ) | 2 |
| 5 | ಉಪ್ಪು (ಕೆಜಿಗಳಲ್ಲಿ) | 1 |
| 6 | ಆಯಾ ಋತುಮಾನದ ತರಕಾರಿಗಳು–ನುಗ್ಗೆಕಾಯಿಯಂತೆ ಹೆಚ್ಚು ಬಾಳಿಕೆ ಕಾಲಾವಧಿಯದ್ದು | ಒಂದು ಕಂತೆ |
| 7 | ಅರಿಶಿನ ಪುಡಿ (100 ಗ್ರಾಂ) | 1 |
| 8 | ಈರುಳ್ಳಿ 2 ಕೆಜಿ | 2 |
| 9 | ಆಲೂಗಡ್ಡೆ 2 ಕೆಜಿ | 2 |
| 10 | ಧನಿಯಾ ಪುಡಿ (100 ಗ್ರಾಂ) | 1 |
| 11 | ಮಕ್ಕಳು ಮತ್ತು ಮಹಿಳೆಯರಿಗೆ ಪೂರಕ ಪೌಷ್ಟಿಕ ಆಹಾರ | 1 |

**ಪ್ರಕರಣದ ಮಾದರಿ**: ದೆಹಲಿಯ ಒಂದು ನಾಗರಿಕ ಸಮಾಜದ ಸಂಸ್ಥೆಯ ಪ್ರಕಾರ ತಲಾ ಒಂದು ಕುಟುಂಬಕ್ಕೆ ಈ ಒಟ್ಟು ಕಂತೆಗೆ ತಗಲುವ ವೆಚ್ಚ ರೂ. 2185/–.

### 10.2 ಬಿ 2: **ಆಹಾರೇತರ ಅವಶ್ಯಕ ವಸ್ತುಗಳ ಬಗ್ಗೆ ಮಾರ್ಗದರ್ಶಿ ಸೂತ್ರ:**

**ಪ್ರಕರಣದ ಮಾದರಿ:** ದೆಹಲಿಯ ಒಂದು ನಾಗರಿಕ ಸಮಾಜದ ಸಂಸ್ಥೆಯ ಪ್ರಕಾರ ಒಂದು ಕುಟುಂಬಕ್ಕೆ ಈ ಒಟ್ಟು ಪದಾರ್ಥಗಳಿಗೆ ತಗಲುವ ವೆಚ್ಚ ರೂ 1250.

ಶಿಫಾರಸು ಮಾಡಲಾಗಿರುವ ಆಹಾರೇತರ ಪದಾರ್ಥಗಳ ಪ್ಯಾಕೇಜ್:

| ಕ್ರಮ ಸಂಖ್ಯೆ | ಪದಾರ್ಥಗಳು | ತಲಾ 1 ಪ್ಯಾಕೆಟ್‌ನಲ್ಲಿ |
|---|---|---|
| 1 | ಸ್ಯಾನಿಟೈಸರ್ (100 ಮಿಲಿ ತಲಾ 1 ಬಾಟಲಿಗೆ) | 1 |
| 2 | ಸೋಪು (4 ಸೋಪುಗಳ 1 ಪ್ಯಾಕೆಟ್) | 1 |
| 3 | ಮುಖಗವಸು (1 ಕುಟುಂಬಕ್ಕೆ 5) | 5 |
| 4 | ಸ್ಯಾನಿಟರಿ ಪ್ಯಾಡ್‌ಗಳು | 10 |

### 10.3 ಬಿ 3: ಹಳ್ಳಿಗಳಿಗೆ ಮರಳುತ್ತಿರುವ ವಲಸೆ ಕಾರ್ಮಿಕರನ್ನು ಪತ್ತೆ ಹಚ್ಚುವುದು:

ಪಂಚಾಯತಿ/ ತಾಲೂಕು/ಜಿಲ್ಲಾ/ ರಾಜ್ಯ ಮಾರ್ಗದರ್ಶಿ ಸೂತ್ರಗಳು ಲಭ್ಯವಿಲ್ಲದಿರುವ ಕಡೆಗಳಲ್ಲಿ ಹಳ್ಳಿಗಳಿಗೆ ಮರಳುತ್ತಿರುವ ವಲಸೆ ಕಾರ್ಮಿಕರನ್ನು ಪತ್ತೆ ಹಚ್ಚಲು ಈ ಕೆಳಗಿನ ಮಾದರಿ ವಿನ್ಯಾಸ (ಫಾರ್ಮ್ಯಾಟ್)ವನ್ನು ಬಳಸಬಹುದು.

<table>
<tr><th>ವಲಸೆ ಕಾರ್ಮಿಕರ ಹೆಸರು ಮತ್ತು ಮೊಬೈಲ್ ಸಂಖ್ಯೆ</th><th>ವಯಸ್ಸು</th><th>ಲಿಂಗ</th><th>ಎಲ್ಲಿಂದ ಮರಳುತ್ತಿರುವುದು</th><th>ಪ್ರಯಾಣದ ದಿನಾಂಕ</th><th>ಪ್ರಯಾಣದ ರೀತಿ</th><th colspan="3">ಕುಟುಂಬ ಸದಸ್ಯರ ಸಂಖ್ಯೆ</th><th>ಕುಟುಂಬಕ್ಕೆ ಎಷ್ಟು ದಿನಗಳು ಆಹಾರ ಲಭ್ಯವಿದೆ</th></tr>
<tr><td></td><td></td><td></td><td></td><td></td><td></td><td>≤ 10 ವರ್ಷ</td><td>10 ರಿಂದ 60 ವರ್ಷ</td><td>≥ 60 ವರ್ಷ</td><td></td></tr>
<tr><td></td><td></td><td></td><td></td><td></td><td></td><td></td><td></td><td></td><td></td></tr>
</table>

### 10.4 ಬಿ 4 :ಕಟ್ಟಡ ಕಾರ್ಮಿಕರಿಗೆ ಪರಿಹಾರಗಳು:

2018ರಲ್ಲಿ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಕಟ್ಟಡ ನಿರ್ಮಾಣ ಹಾಗೂ ಇತರ ನಿರ್ಮಾಣ ಕಾರ್ಮಿಕರಿಗೆ ಪರಹಾರ ನೀಡಲು ಒಂದು ಮಾದರಿ ಕಲ್ಯಾಣ ಯೋಜನೆಯನ್ನು ಘೋಷಿಸಿತ್ತು.

https://labour.gov.in/whatsnew/model-welfare-scheme-building-and-construction-workers-and-action-plan-strengthening

[ ಈ ಯೋಜನೆಯ ಪಿಡಿಎಫ್, ಡೌನ್‌ಲೋಡ್ ಮಾಡಿಕೊಳ್ಳಬಹುದಾದ ವಿನ್ಯಾಸ (ಫಾರ್ಮ್ಯಾಟ್)ದಲ್ಲಿದೆ.] ಈ ಮಾರ್ಗದರ್ಶಿ ಸೂತ್ರಗಳ ಸೂಚನೆಯೆಂದರೆ:

ಪ್ರತಿಯೊಂದು ರಾಜ್ಯದಲ್ಲೂ ಎಲ್ಲಾ ಕಾರ್ಮಿಕರಿಗೂ ವಿಶಿಷ್ಟವಾದ ಗುರುತಿನ ಸಂಖ್ಯೆ (ಯುನಿಕ್ ಐಡೆಂಟಿಫಿಕೇಷನ್ ನಂಬರ್) ಯನ್ನು ನೀಡಬೇಕು ಹಾಗೂ ಕಾರ್ಮಿಕ ಇಲಾಖೆಯೊಂದಿಗೆ ನೋಂದಾಯಿಸಿಕೊಳ್ಳಬೇಕು. ಇದರಿಂದ ಕಲ್ಯಾಣ ಯೋಜನೆಯನ್ನು ಅವರಿಗೆ ತಲುಪಿಸಲು ಹಾಗೂ ವರ್ಗಾಯಿಸಲು ಸಹಾಯವಾಗುತ್ತದೆ.

ಪ್ರತಿಯೊಂದು ರಾಜ್ಯವು ಒಂದು "ರಾಜ್ಯ ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ"ಯನ್ನು ಹೊಂದಿರುತ್ತದೆ. ಅದು ನಾಗರಿಕ ಸಮಾಜದ ಸಂಸ್ಥೆ (ಸಿಎಸ್‌ಓ) ಗಳಿಗೂ /ವ್ಯಕ್ತಿಗಳಿಗೂ, ಕಲ್ಯಾಣ ಯೋಜನೆಯ ಅನುಕೂಲವನ್ನು ಪಡೆದುಕೊಳ್ಳಲು ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸಲು ಸಹಾಯ ನೀಡುತ್ತದೆ. ಉದಾ: ಕರ್ನಾಟಕದ ರಾಜ್ಯ ಕಲ್ಯಾಣ ಮಂಡಳಿಯ ನೋಂದಾವಣೆ ಅರ್ಜಿಯನ್ನು ದಯವಿಟ್ಟು ನೋಡಿ.

https://www.karbwwb.com/Registration%20 - %20 eng.shtml

**10.5 ಬಿ 5: ಸರ್ಕಾರಿ ಕಲ್ಯಾಣ ಯೋಜನೆಗಳನ್ನು ಪಡೆದುಕೊಳ್ಳಲು ಮಾರ್ಗದರ್ಶಿ ಸೂತ್ರಗಳು:**

ಕೋವಿಡ್–19 ನಿರ್ದಿಷ್ಟ ಯೋಜನೆಗಳ ಪಟ್ಟಿ (ಸರ್ಕಾರಿ ಸುತ್ತೋಲೆಗಳೊಂದಿಗೆ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಘೋಷಿಸಿರುವುದು) ಹಾಗೂ ಅವುಗಳ ವಿವರಗಳನ್ನು ಈ ವೆಬ್‌ಸೈಟ್‌ನಲ್ಲಿ this website ಸೂಚಿಸಲಾಗಿದೆ.

**10.6 ಬಿ 6: ಸ್ಥಳೀಯ ಹಾಗೂ ತಕ್ಷಣದ ಕೆಲಸದ ಅವಕಾಶಗಳ ಕುರಿತಾದ ಮಾರ್ಗದರ್ಶಿ ಸೂತ್ರಗಳು:**

ಸರ್ಕಾರದ ಈಗಿರುವ ಕೌಶಲ್ಯ ಅಭಿವೃದ್ಧಿ ವಿಧಾನಗಳು ಹಾಗೂ ಕಾರ್ಯಕ್ರಮಗಳನ್ನು ಸ್ಥಳೀಯ ಹಾಗೂ ತಕ್ಷಣದ ಕೆಲಸದ ಅವಕಾಶಗಳನ್ನು ಸೃಷ್ಟಿಸಲು ಕೂಲಂಕಷವಾಗಿ ಅಧ್ಯಯನ ಮಾಡಬಹುದು. PMKVY (ಪ್ರಧಾನಮಂತ್ರಿ ಕೌಶಲ್ಯವೃದ್ಧಿ ಯೋಜನಾ) ದೊಂದಿಗೆ ಜೋಡಣೆ ಮಾಡಿಕೊಳ್ಳಬಹುದು. ಆಗ ದೂರಗಾಮಿಯಾಗಿಯೂ ಈ ಜೀವನೋಪಾಯವನ್ನು ಹುಟ್ಟಿಸುವ ಉಪಕ್ರಮವನ್ನು ಸುಸ್ಥಿರಗೊಳಿಸಿಕೊಳ್ಳಬಹುದು.

ದೇಶದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಕೌಶಲ್ಯ ಅಭಿವೃದ್ಧಿ ಸಚಿವಾಲಯವು ಉದ್ದೇಶಿಸುತ್ತದೆ. ಈ ತರಬೇತಿ ಕೇಂದ್ರಗಳನ್ನು ಪ್ರಧಾನ ಮಂತ್ರಿ ಕೌಶಲ್ಯ ಕೇಂದ್ರ (ಪಿಎಮ್‌ಕೆಕೆ) ಎಂದು ಕರೆಯಲಾಗುತ್ತದೆ ಹಾಗೂ ಅವುಗಳನ್ನು ಪಿ ಎಮ್ ಕೆ ವಿ ವೈ (ಪ್ರಧಾನ ಮಂತ್ರಿ ಕೌಶಲ್ಯ ವೃದ್ಧಿ ಯೋಜನಾ) ನ ಮಾರ್ಗದರ್ಶಿ ಸೂತ್ರಗಳಡಿ ನಡೆಸಲಾಗುತ್ತದೆ.

ಅಜೀಂ ಪ್ರೇಮ್‌ಜಿ ಫೌಂಡೇಷನ್ ಎಂಬುದು ಅಜೀಂ ಪ್ರೇಮ್‌ಜಿ ಅವರಿಂದ ಸ್ಥಾಪಿತವಾದ ಜನೋಪಕಾರಿ ಸಂಸ್ಥೆಯಾಗಿದ್ದು, ಒಂದು ನ್ಯಾಯಯುತ, ಸಮತೆಯುಳ್ಳ, ಮಾನವೀಯ, ಸುಸ್ಥಿರ ಸಮಾಜವೊಂದನ್ನು ಕಟ್ಟಲು ಕಾಣಿಕೆ ನೀಡಬೇಕು ಎಂಬ ಮುನ್ನೋಟವನ್ನು ಹೊಂದಿದೆ. ಇದಕ್ಕೆ ಭಾರತವನ್ನೇ ಕೇಂದ್ರೀಕರಿಸಿಕೊಂಡು ಮೂರು ಆಯಾಮಗಳಿವೆ: ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬೆಂಬಲಿಸಲು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾಡುವ ಕ್ಷೇತ್ರ ಕಾರ್ಯ, ಬಹುವಾರ್ಷಿಕ ಆರ್ಥಿಕ ನೆರವಿನ ಮೂಲಕ ವಿವಿಧ ಅಭಿವೃದ್ಧಿ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಲಾಭೋದ್ದೇಶವಿಲ್ಲದ ಸಂಘಟನೆಗಳಿಗೆ ಬೆಂಬಲ ಮತ್ತು ಲಾಭೋದ್ದೇಶವಿಲ್ಲದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ನಡೆಸಿಕೊಂಡು ಹೋಗುವುದು.